ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿ ನಿಬಂಧ

ಲಂಕೇಶರ ವಿಮರ್ಶೆ

('ಪ್ರಸ್ತುತ' ಮತ್ತು 'ಕಂಡದ್ದು ಕಂಡ ಹಾಗೆ'
ಕೃತಿಗಳ ಹಿನ್ನಲೆಯಲ್ಲಿ)

ಸಂಶೋಧನಾ ವಿದ್ಯಾರ್ಥಿ
ಅರ್ಚನಾ ಬಿ.ಪಿ.

ಮಾರ್ಗದರ್ಶಕರು
ಡಾ. ಪ್ರಸಾದ ಸ್ವಾಮಿ ಎಸ್.
ಕನ್ನಡ ಸಹ ಪ್ರಾಧ್ಯಾಪಕ
ಸ.ಪ್ರ.ದ. ಕಾಲೇಜು
ಯಲಹಂಕ – 64

ಎಂ.ಎ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2012

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿ ನಿಬಂಧ

ಲಂಕೇಶರ ವಿಮರ್ಶೆ

('ಪ್ರಸ್ತುತ' ಮತ್ತು 'ಕಂಡದ್ದು ಕಂಡ ಹಾಗೆ'
ಕೃತಿಗಳ ಹಿನ್ನಲೆಯಲ್ಲಿ)

ಸಂಶೋಧನಾ ವಿದ್ಯಾರ್ಥಿ
ಅರ್ಚನಾ ಎ.ಪಿ.

ಮಾರ್ಗದರ್ಶಕರು
ಡಾ. ಪ್ರಸಾದ ಸ್ವಾಮಿ ಎಸ್.
ಕನ್ನಡ ಸಹ ಪ್ರಾಧ್ಯಾಪಕ
ಸ.ಪ್ರ.ದ. ಕಾಲೇಜು
ಯಲಹಂಕ – 64

ಎಂಎ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.
ಬೆಂಗಳೂರು
2012

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2011–2012 ನೇ ಸಾಲಿನ ಎಂ.ಫಿಲ್. ಪದವಿಗಾಗಿ "ಲಂಕೇಶರ ವಿಮರ್ಶೆ – ಪ್ರಸ್ತುತ ಮತ್ತು ಕಂಡದ್ದು ಕಂಡ ಹಾಗೆ ಕೃತಿಗಳ ಹಿನ್ನಲೆಯಲ್ಲಿ" ಎಂಬ ನಿಬಂಧವನ್ನು ಅರ್ಚನಾ ಎ.ಪಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧವು ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ದಿನಾಂಕ : ೨೨.೬.೧೨

ಸ್ಥಳ : ಬೆಂಗಳೂರು

ಡಾ. ಪ್ರಸಾದಸ್ವಾಮಿ . ಎಸ್.
ಮಾರ್ಗದರ್ಶಕರು
ಕನ್ನಡ ಸಹ ಪ್ರಧ್ಯಾಪಕ
ಸ.ಪ್ರ.ದ ಕಾಲೇಜು
ಯಲಹಂಕ – 64

ಡಾ. ಎಸ್. ಪ್ರಸಾದಸ್ವಾಮಿ
ಎಂ.ಎ., ಎಂ.ಫಿಲ್., ಪಿಎಚ್.ಡಿ.
ಕನ್ನಡ ಸಹ ಪ್ರಾಧ್ಯಾಪಕ
ಸ.ಪ್ರ.ದ. ಕಾಲೇಜು,
ಯಲಹಂಕ, ಬೆಂಗಳೂರು-64.

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2011–12ನೇ ಸಾಲಿನ ಎಂ.ಫಿಲ್. ಪದವಿಗಾಗಿ "ಲಂಕೇಶರ ವಿಮರ್ಶೆ – ಪ್ರಸ್ತುತ ಮತ್ತು ಕಂಡದ್ದು ಕಂಡ ಹಾಗೆ ಕೃತಿಗಳ ಹಿನ್ನಲೆಯಲ್ಲಿ" ಎಂಬ ನಿಬಂಧವನ್ನು ಡಾ. ಪ್ರಸಾದ ಸ್ವಾಮಿ. ಎಸ್. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟ ಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

Archana P.

(ಅರ್ಚನಾ ಎ. ಪಿ.)

ಸಂಶೋಧನಾ ವಿದ್ಯಾರ್ಥಿ

ದಿನಾಂಕ : ೨೨·೦೬ - ೨೦೧೨

ಸ್ಥಳ : ಬೆಂಗಳೂರು.

ಪರಿವಿಡಿ

ಅಧ್ಯಾಯ – 1

1.1. ಪೀಠಿಕೆ

ಸಾಹಿತ್ಯ ವಿಮರ್ಶೆ ಎಂಬ ಪದಕ್ಕೆ ವಿಶಾಲಾರ್ಥವಿದೆ. "ವಿಮರ್ಶೆಯೆಂದರೆ, ಕೇವಲ ಮೌಲ್ಯಮಾಪನ ಎಂಬ ಭಾವನೆ ಬರುತ್ತದೆ. ಆದರೆ, ವಿಶೇಷವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಮರ್ಶೆಯ ಪರಿಕಲ್ಪನೆ ಸಾಹಿತ್ಯ ಅಥವಾ ಕಲೆಯನ್ನು ಕುರಿತಾದ ಯಾವುದೇ ಕಾರ್ಯವನ್ನು ಒಳಗೊಂಡಿದೆ. ಅದು ಕೃತಿ ಸಂಪಾದನಾ ಕಾರ್ಯವಾಗಬಹುದು ಕೃತಿಯನ್ನು ಕುರಿತು ಬರೆದ ಭಾಷ್ಯವಾಗಬಹುದು; ಅರ್ಥ ವಿವರಣೆ ಆಗಬಹುದು; ಮೌಲ್ಯಮಾಪನವಿರಬಹುದು ಅಥವಾ ಸಾಹಿತ್ಯ ಸ್ವರೂಪವನ್ನು ಕುರಿತು ಮಾಡುವ ಕಾವ್ಯ, ಮೀಮಾಂಸೆ ಆಗಬಹುದು; ಅಷ್ಟೆ ಅಲ್ಲದೆ ಒಬ್ಬನ ವಿಮರ್ಶೆಯನ್ನು ಅರ್ಥೈಸುವ, ಖಂಡಿಸುವ ವಿಮರ್ಶೆಯೂ ಆಗಬಹುದು.[1]

ಆ ನೆಲೆಯಲ್ಲಿ ವಿಮರ್ಶೆ ಮೌಲ್ಯಮಾಪನಕ್ಕೆ ಮಾತ್ರ ಸೀಮಿತವಾಗದೆ ಸಾಹಿತ್ಯದ ಸ್ವರೂಪ, ವ್ಯಾಖ್ಯಾನ, ಕೃತಿ ಸಂಪಾದನೆ, ಭಾಷ್ಯ, ವಿಶ್ಲೇಷಣೆಗೆ ಮಹತ್ವ ನೀಡುವ ಕ್ರಿಯೆ. ಕಲೆ, ಸಾಹಿತ್ಯ ಇವುಗಳನ್ನು ಒಳಗೊಂಡ ತಾತ್ವಿಕ ಚಿಂತನೆಯ ಬಗೆಗೆ ಭಾರತೀಯ ಕಾವ್ಯ ಮೀಮಾಂಸೆ ಹೆಚ್ಚು ಒತ್ತು ಕೊಟ್ಟರೆ, ಪಾಶ್ಚಾತ್ಯರು ಸಮಗ್ರ ಕೃತಿಯನ್ನು ಗಮನದಲ್ಲಿ ಇಟ್ಟುಕೊಂಡು ಸಾಹಿತ್ಯ ವಿಮರ್ಶೆಗೆ ಮುಂದಾದರು.

ಆಧುನಿಕ ಸಂದರ್ಭದಲ್ಲಿ ವಿಶೇಷವಾಗಿ ನವೋದಯ ಸಾಹಿತಿಗಳು ಕಾವ್ಯ ಮೀಮಾಂಸೆ ಹಾಗೂ ಸಾಹಿತ್ಯ ವಿಮರ್ಶೆ ಇವೆರಡಕ್ಕೂ ಸಮಾನ ಮಹತ್ವ ನೀಡಿದ್ದಾರೆ. ಹಾಗಾಗಿ ಎಂಥ ಕಾವ್ಯ ಬೇಕು? ಎಂಥ ಕವಿಗಳು ಬೇಕು? ಎಂಬುದನ್ನು ವಿಶ್ಲೇಷಿಸುವುದು ಸಾಹಿತ್ಯ ವಿಮರ್ಶೆಯ ಉದ್ದೇಶವಾಯಿತು.

ಅಂದ ಚೆಂದದ ಕಾವ್ಯ ಬೇಕಾಗಿಲ್ಲ. ಜೀವಿತದ ಹುರುಳು ತಿರುಳನ್ನು ತೋರಿಸಿ ನರನೊಳಗಿನ ಮಾನವೀಯತೆಯ ನೆಲೆಗಳನ್ನು ನೋಡುವ ಕಾರ್ಯ ನಡೆಯಬೇಕು. ಶ್ರವಣ ಮಾತ್ರದಿಂದ ಸಹೃದಯರ ಹೃದಯದಲ್ಲಿ ಕಿವಿಯಿಂದ ಮೂಡುವ ಕಾವ್ಯ ಹೇಗಿರಬೇಕು ಎಂಬ ನೆಲೆಯಲ್ಲಿ ಸಾಹಿತ್ಯ ವಿಮರ್ಶೆ ಸಾಗತೊಡಗಿತು.

ನಿಜವಾಗಿ ಯಾವುದು ವಿಮರ್ಶೆ? ವಿಮರ್ಶತನ ಮನೋಧರ್ಮ ಎಂಥದಿರಬೇಕು? ವಿಮರ್ಶೆಯ ಗುರಿ ಏನು? ಎಂಬುದು ಈ ಶತಮಾನದ ವಿಮರ್ಶೆಗೆ ಅತಿ ದೊಡ್ಡ ಪ್ರಶ್ನೆಯಾಗಿತ್ತು.

---

[1] ಸಿ. ಎನ್. ರಾಮಚಂದ್ರನ್ : 'ಪರಂಪರೆ – ಪ್ರತಿರೋಧ' ಸಂವಾದ, ಮಲ್ಲಾಡಿ ಹಳ್ಳಿ, 2005 ಪು.ಸಂ. 25.

ಇದಕ್ಕೆ ಸೂಕ್ತ ಉತ್ತರವನ್ನು ಬೇಂದ್ರೆಯವರು 'ಆಧುನಿಕ ಕವಿತೆ ಮತ್ತು ವಿಮರ್ಶಕರು' ಎಂಬ ಲೇಖನದಲ್ಲಿ ವಿವರಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

"ಇಂದಿನ ವಿಮರ್ಶನ ಪ್ರಕಾರ ಆಂಗ್ಲ–ಸಾಹಿತ್ಯ ಸಂಸ್ಕಾರದಿಂದ ಬಂದುದು. ಅದರ ರೀತಿ–ನೀತಿಗಳು, ರೂಪ–ರೇಖೆಗಳು, ಸತ್ವಸಾರಗಳು ಬಹುತರವಾಗಿ ಹೊಸವು.......... ಇಂದಿನ ಸಾಹಿತ್ಯದ ಕಾಲು ತಲೆಗಳಿಗೆ ಅವನ್ನು ಹಚ್ಚಿ ನೋಡಿ 'ಎತ್ತರಾದರೆ ಕಾಲು ಕಡಿಯಿರಿ; ಕುಳ್ಳನಾದರೆ ತಲೆ ಎಳೆಯಿರಿ' ಎಂದು ಕಚ್ಚಾಡುವುದೇಕೆ? ಸದ್ಯಕ್ಕೆ ಗಾಳಿ, ಬೆಳಕು, ಪಶ್ಚಿಮದಿಂದ ಹರಿದು ಬಂದರೂ, ಕಣ್ಣು ಮೂಗುಗಳಂತೂ ನಮ್ಮವೇ ತಾನೇ?......... ನಮ್ಮ ಪ್ರಾಚೀನ ಕನ್ನಡ ವಾಙ್ಮಯಕ್ಕೆ ಒಂದು ಪರಂಪರೆಯುಂಟು ಸಂಪ್ರದಾಯವುಂಟು... ಹೀಗಾಗಿ ವಿಮರ್ಶೆ ವಸ್ತುನಿಷ್ಠವಾಗಿ ನಡೆಯಬೇಕು".[2]

ಈ ಮಾತು ಕನ್ನಡ ವಿಮರ್ಶೆಯ ಆಯಾಮವನ್ನು ಬಿಂಬಿಸಿವೆ. ಪ್ರತಿಭಾವಂತ ಕವಿ ಮಾಡುವ ವಿಮರ್ಶೆಯಲ್ಲಿ ಹೊಸ ಹೊಸ ಹೊಳಹುಗಳಿರುತ್ತವೆ ಎನ್ನುತ್ತಾನೆ ಎಲಿಯಟ್. ಹೀಗಾಗಿ ವಿಮರ್ಶೆಗೆ ಪರಂಪರೆಯ ಅರಿವು ಅಗತ್ಯ.

ಆಧುನಿಕ ವಿಮರ್ಶೆಯ ಬಗ್ಗೆ ವಿ.ಸೀಯವರ ಅಭಿಪ್ರಾಯ ಹೀಗಿದೆ: "ಸಾಹಿತ್ಯ ವಿಮರ್ಶೆಯಲ್ಲಿ ಸರ್ವ ಪ್ರಾಧಾನ್ಯವಿರುವುದು ಕೃತಿಗೆ. ಅದರ ಗುಣಚರ್ವಣಕ್ಕೆ ಅದರ ಹಿಂದಕ್ಕೋ, ಹೊರಕ್ಕೋ ಮನಸನ್ನು ತೆಗೆದುಕೊಂಡು ಹೋಗುವ ಮಾರ್ಗಗಳು ವಿಮರ್ಶೆಯ ಹೊರವಲಯಗಳು. ಅಲ್ಲಿ ಸಂಚಾರ ಮಾಡಬಾರದೆಂದಲ್ಲ; ತಿಳಿದು, ತಿಳಿಸಿ ಅಲ್ಲಿಗೆ ಹೋಗಬಹುದು."[3]

"ಕೃತಿಯ ಅರ್ಥ ಮತ್ತು ಓದಿನ ಸಂತಸ ವಿಮರ್ಶೆಯ ಮುಖ್ಯ ಗುರಿಯಾಗಬೇಕು. ಕೃತಿ, ಅದರಲ್ಲಿ ಕಾಣುವ ಜೀವನಾನುಭವ, ಅಲ್ಲಿನ ಸೌಂದರ್ಯ, ರಚನಾತ್ಮಕತೆ, ಅಲ್ಲಿನ ರಸಸಾಧನೆ, ಅದರ ನಿರ್ಣಯ, ಲೇಖಕನ ಪರಮ ಲಕ್ಷ್ಯ ಒಂದೇ ಗುರಿಯಾಗಬೇಕು. ಅರ್ಥ ಮೊದಲು, ಬೆಲೆ ಆ ಮೇಲೆ" ಎನ್ನುತ್ತಾರೆ ವಿ.ಸೀ. ವಿಮರ್ಶೆಗೆ ವಿಶ್ಲೇಷಣಾ ಪ್ರವೃತ್ತಿ, ಸಮತೋಲನ ದೃಷ್ಟಿ ವಸ್ತು ನಿಷ್ಠ ಪ್ರಜ್ಞೆಬೇಕು. ಈ ಹಿನ್ನಲೆಯಲ್ಲಿ ಕಲಾನ್ವೇಷಕ ವೃತ್ತಿ, ಸೌಂದರ್ಯಾನುಭೂತಿ, ಸಹೃದಯ ಸಂವೇದನೆ, ಗುಣ ಗೌರವಗಳ ಹಿತವಾದ ಸಂಯೋಜನೆ, ತೀಕ್ಷ್ಣವಾದ ಟೀಕೆಗಳಿಗಿಂತ, ಸಾಹಿತ್ಯಾನುಭವಗಳಿಗೆ, ಸದಭಿರುಚಿಯ ಮೌಲ್ಯಗ್ರಹಣ ವಿಧಾನಗಳಿಗೆ ಈ ಎಲ್ಲಾ ಕಾರಣಗಳಿಂದ ಹೆಚ್ಚಿನ ಅವಕಾಶ ವಿಮರ್ಶೆಯಲ್ಲಿ ದೊರೆಯಿತು.

---

[2] 'ಸಹೃದಯ ಸಂವಾದ' – ಡಾ. ಎಸ್. ವಿದ್ಯಾಶಂಕರ (ಸಂ) ಪ್ರಿಯ ದರ್ಶಿನಿ ಪ್ರಕಾಶನ, ಬೆಂಗಳೂರು 2005

[3] ವಿ. ಸೀತಾರಾಮಯ್ಯ. 1917:74–75 ಅದೇ ಪು.ಸಂ. 136.

ಪ್ರಾಚೀನ ಭಾರತೀಯ ಕಾವ್ಯಮೀಮಾಂಸೆಯಲ್ಲಿ ವಿಮರ್ಶೆಯ ಲಕ್ಷಣಗಳು ಕಾಣಿಸುತ್ತವೆ. ಇಲ್ಲಿ ಕಾಣುವ ಸಹೃದಯ, ಶ್ರೋತೃ, ಪ್ರೇಕ್ಷಕ, ವೃತ್ತಿಕಾರನೇ ಪಾಶ್ಚಾತ್ಯ ಪ್ರಭಾವದಡಿಯಲ್ಲಿ ವಿಮರ್ಶಕನಾಗಿ ಕಾಣೀಸಿಕೊಳ್ಳುತ್ತಾನೆ ಎನ್ನಬಹುದು.

ಕಾವ್ಯ ಮೀಮಾಂಸೆಯ ಭಾವಯತ್ರೀ ಪ್ರತಿಭೆಯೇ ಸಹೃದಯನ ರಸಾಸ್ವಾದನೆಗೆ ಅವಕಾಶ ಮಾಡಿಕೊಟ್ಟಾಗ ಕೃತಿ ವಿಮರ್ಶೆ ಹುಟ್ಟಿಕೊಳ್ಳುತ್ತದೆ. ಇದರ ಆಧಾರದ ಮೇಲೆ ಬೆಳೆದು ಬಂದ ವಿಮರ್ಶೆಗೆ ಕವಿ ಪ್ರತಿಭೆಗೆ ಪ್ರೇರಣೆ ಇದ್ದಂತೆ, ವಿಮರ್ಶಕ ಪ್ರಜ್ಞೆಗೂ ಅಂಥದೇ ಪ್ರೇರಣೆ ದೊರೆಯಿತು.

ವಿಮರ್ಶೆ ಟೀಕೆಯಲ್ಲ; ಅದು ಮರು-ಹೊಂದಾಣಿಕೆಯದು. ಅದರಲ್ಲಿ ಸಾಹಿತ್ಯದ ವ್ಯಾಪ್ತಿಯನ್ನು ಕಂಡು ಕೊಂಡು ಅಲ್ಲಿ ಕಾಣುವ ಅತಿಸೂಕ್ಷ್ಮ ವಸ್ತುಗಳ ಪರಿಚಯ ಮಾಡಿಕೊಡುವ ಕ್ರಮವಿರುತ್ತದೆ.

ಕಲಾಕೃತಿಯ ಬಗ್ಗೆ ಎಷ್ಟೇ ಸಣ್ಣದಾದರೂ, ಆ ಸಂಗತಿಯನ್ನು ತಿಳಿಸುವ ಸಾಮರ್ಥ್ಯ ವಿಮರ್ಶೆಗಿದೆ. ಆದರೆ ಆ ಸಂಗತಿಗಳನ್ನು ಬೆಳಕಿಗೆ ತಂದ ನಂತರವೂ ಕೂಡ ಮಾಡಿದ ವಿಮರ್ಶೆಯೇ ಸರಿ ಎಂಬ ಕೊನೆಯ ತೀರ್ಮಾನಕ್ಕೆ ಬರದೇ ತಾಳ್ಮೆಯಿಂದ ವಿಮರ್ಶಾ ಕಾರ್ಯ ನಡೆಸಬೇಕು.

ವಿಮರ್ಶೆ ಎಂದರೆ ಸಾಹಿತ್ಯವನ್ನು ಕುರಿತ ತತ್ವ ಮತ್ತು ವಿಶ್ಲೇಷಣಾ ವಿಧಾನ. ಸಾಹಿತ್ಯದ ಪರಿಕಲ್ಪನೆ ಮತ್ತು ಸಾಹಿತ್ಯದ ವಿಶ್ಲೇಷಣೆಗಳ ಅಂತರ್ ಸಂಬಂಧದಲ್ಲಿ ವಿಮರ್ಶೆ ಹುಟ್ಟುತ್ತದೆ. ಸಾಹಿತ್ಯವಿಮರ್ಶೆ ಎಂದರೆ ಸಾಹಿತ್ಯ ಒಳಗೊಂಡ ಬದುಕಿನ ವಿವರ ಮತ್ತು ಕೃತಿಯ ಒಳನೋಟಗಳು ಬದುಕಿನ ವಿಶ್ಲೇಷಣೆಯನ್ನು ಹೊಮ್ಮಿಸುವ ನೆಲೆಗಳ ಶೋಧ. ಇದು ವಿಮರ್ಶೆಯ ಮುಖ್ಯಗುರಿ ಮತ್ತು ಲಕ್ಷಣ.

ವಿಮರ್ಶೆಯಲ್ಲಿ ಸಾಹಿತ್ಯ ತತ್ವವೊಂದು ಅಗತ್ಯ, ಅನಿವಾರ್ಯ. ಕನ್ನಡ ಸಾಹಿತ್ಯದ ವಿವಿಧ ಚಳುವಳಿಗಳ ಹಿನ್ನಲೆಯಲ್ಲಿ ಈ ಅಂಶ ಕಾಣಿಸಿದೆ. ಕಾಲಕಾಲಕ್ಕೆ ಅಗತ್ಯವಾದ ಚಲನಶೀಲತೆಯನ್ನು ಪಡೆದುಕೊಳ್ಳುವ ಸಾಧ್ಯತೆಯಂತೂ ಇದ್ದದ್ದೇ. ಕನ್ನಡ ವಿಮರ್ಶೆ ಈ ಎಲ್ಲಾ ಸ್ಥಿತ್ಯಂತರಗಳನ್ನು ದಾಟಿ ಬಂದಿದೆ.

ಇತ್ತೀಚೆಗೆ ವಿಮರ್ಶೆಯ 'ಭಾಷೆ'ಯ ಬಗ್ಗೆ ಬೆಳೆಯುತ್ತಿರುವ ಪ್ರಜ್ಞೆ, ಒಂದು ವಿಶಿಷ್ಟ ಬಗೆಯ ಭಾಷೆಯೇ ಸತ್ವಪೂರ್ಣವಾದ ಭಾಷೆ ಎನ್ನುವ ನಿಲುವು ಒಡೆದು ಮೂಡಿದೆ. ಸಾಹಿತ್ಯ ವಿಮರ್ಶೆ ಕೃತಿಯ ನ್ಯಾಯಯುತ, ಪ್ರಾಮಾಣಿಕ, ಮೌಲ್ಯಮಾಪನ ಮಾಡುವ ಒಂದು ಕ್ರಿಯೆ. ಆದುದರಿಂದ

ಒಂದು ಕೃತಿಯ ಮೌಲ್ಯ ಮಾಪನ ಮಾಡುವಾಗ ಅತ್ಯಂತ ನಿಷ್ಪಕ್ಷಪಾತಿಯಾಗಿ ನಿಂತು ಅದರ ಗುಣ–ದೋಷಗಳನ್ನು ಎತ್ತಿ ತೋರುವ ಕಾರ್ಯ ಮಾಡಬೇಕಾಗುತ್ತದೆ. ಕವಿಗಳೂ ಕೂಡ ವಸ್ತು ನಿಷ್ಠವಾದ ವಿಮರ್ಶೆ ಆಗಬೇಕೆಂದು ಬಯಸುತ್ತಾರೆ. ಕೆಲವೊಮ್ಮೆ ವಿಮರ್ಶಕರಿಗೆ ಹೊಸದಾದುದು ಎಷ್ಟೇ ಒಳ್ಳೆಯದಿದ್ದರೂ ಸರಿ ಅಪಥ್ಯ. ಹಳೆಯದು ಹೇಗಿದ್ದರೂ ಸರಿ."

"ಕೃತಿಯನ್ನು ಆಸ್ವಾದಿಸುವ ಶಕ್ತಿ, ಅದನ್ನು ರಚಿಸುವ ಶಕ್ತಿಯಂತೆ, ಒಂದು ನಿಶ್ಚಿತ ಸ್ವಭಾವದಿಂದ ಹೊರಡುತ್ತದೆ. ಬಹುಶಃ ಎರಡೂ ಶಕ್ತಿಗಳು ಒಂದೇ ಸ್ವಭಾವದಿಂದ ಹೊರಟರೂ ಪ್ರತ್ಯೇಕ ಸಂದರ್ಭದಲ್ಲಿ ಒಂದು ತಟಸ್ಥವಾಗಿದ್ದರೆ, ಮತ್ತೊಂದು ಕ್ರಿಯಾತ್ಮಕವಾಗಿ ಇರುತ್ತದೆ. ಇಲ್ಲಿ ಕೃತಿಯನ್ನು ಆಸ್ವಾದಿಸುವ ಶಕ್ತಿಯೇ ಮುಂದೆ ಸಾಹಿತ್ಯವನ್ನು ವಿಮರ್ಶಿಸುವ ಕೆಲಸ ಮಾಡಲು ಪ್ರಾರಂಭಿಸಿತು."[4]

ಹಾಗಾದರೆ ರಚಿಸುವ ಶಕ್ತಿಯಿಂದ ಆಸ್ವಾದಿಸುವ ವಿಮರ್ಶನ ಶಕ್ತಿಯನ್ನು ಬೇರ್ಪಡಿಸುವ ಮುಖ್ಯ ಸಂಗತಿ ಯಾವುದು? ಎಂಬ ಪ್ರಶ್ನೆಗೆ ಉತ್ತರ ವಿಮರ್ಶಾ ಶಕ್ತಿಯನ್ನು ಸಂಪಾದಿಸಿಕೊಳ್ಳಬಹುದು, ಏಕೆಂದರೆ ವಿಮರ್ಶೆ ಅಸ್ತಿತ್ವದಲ್ಲಿರುವ ಸಾಹಿತ್ಯದ ಸ್ವರೂಪವನ್ನು ವಿಚಾರ ಮಾಡುವ, ಅದರ ಮೌಲ್ಯವನ್ನು ನಿರ್ಣಯಿಸುವ ಮತ್ತು ಅದರ ಬಗ್ಗೆ ತಿಳಿಯಾಗಿ ಯೋಚಿಸುವ ಕೆಲಸ ಮಾಡುತ್ತದೆ.

ಒಂದು ವಿಷಯವನ್ನು ಆ ರೀತಿಗಿಂತ ಈ ರೀತಿಯಲ್ಲಿ ಹೇಳಿದರೆ ತನ್ನ ಉದ್ದೇಶಕ್ಕೆ ಒಪ್ಪುತ್ತದೆ ಎಂದೋ, ಆ ವಸ್ತುವಿಗಿಂತ ಈ ವಸ್ತು ತನಗೆ ಇಷ್ಟ ಎಂದೋ ಒಬ್ಬ ವ್ಯಕ್ತಿಗೆ ಅರಿವಾದ ಕೂಡಲೇ ವಿಮರ್ಶೆ ಪ್ರಾರಂಭವಾಗುತ್ತದೆ. ಸಾಹಿತ್ಯವನ್ನು ಆಸ್ವಾದಿಸುವ ಶಕ್ತಿಯುಳ್ಳ ವ್ಯಕ್ತಿಗೆ ತನ್ನ ಆಸ್ವಾದನೆಯನ್ನು ಅತ್ಯಂತ ವಿವೇಚನಾ ಪೂರ್ವಕವೂ, ಉಜ್ವಲವೂ ಆದ ಅನುಭವವನ್ನಾಗಿ ಮಾಡಿಕೊಳ್ಳಲು ವಿಮರ್ಶೆ ನೆರವಾಗುತ್ತದೆ.

ಒಂದು ಕೃತಿಗೆ ಸಂಬಂಧಪಟ್ಟ ಅಧ್ಯಯನದಲ್ಲಿ ಸಾಹಿತ್ಯ ಸಂಬಂಧವಾದ ತರ್ಕಬದ್ಧ ಪ್ರಶ್ನೆಗಳನ್ನು ಕೇಳುವುದು ಮತ್ತು ಉತ್ತರಿಸುವುದು ವಿಮರ್ಶೆಯ ಜೀವಾಳ.

"ಸಾರ್ವತ್ರಿಕವಾಗಿ ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ ವಿಮರ್ಶೆ, ಅದು ಸಾಹಿತ್ಯದ ವಾಸ್ತವಿಕ ಮತ್ತು ಮೂರ್ತ ನಿದರ್ಶನಗಳಲ್ಲಿನ ವಿಶಿಷ್ಟ ಗುಣಗಳಿಗೆ ಸಂಬಂಧಿಸಿದ್ದು. ಸಂಭೂತವಾದುದನ್ನು

---

[4] ಕನ್ನಡ ಸಾಹಿತ್ಯ ಮೀಮಾಂಸೆ : ಡಾ. ಎಸ್.ಎಂ. ಹಿರೇಮಠ, ಅಶ್ವಿನಿ ಪ್ರಕಾಶನ, 1999

ಆಶ್ರಯಿಸುವುದರಿಂದ ಮಾತ್ರವೇ ವಿಮರ್ಶೆಯು ವಿಶ್ವಾಸಯೋಗ್ಯ ನಿಯಮಗಳನ್ನು ಪಡೆದುಕೊಳ್ಳುತ್ತದೆ".[5]

ಒಂದು ಸಾಹಿತ್ಯ ಕೃತಿಯನ್ನು ಬೇರೆ ಬೇರೆ ರೀತಿಯಾಗಿ, ಪ್ರತ್ಯೇಕವಾಗಿ ಪರೀಕ್ಷಿಸಬೇಕಾಗುತ್ತದೆ. ಪರೀಕ್ಷಿಸಿದ ನಂತರ ಆ ಕೃತಿಯ ಮೌಲ್ಯ ನಿರ್ಣಯವಾಗುತ್ತದೆ. ಇಂತಹ ಪರೀಕ್ಷಾ ನೆಲೆಗಳೇ ವಿಮರ್ಶೆಯ ಮೂಲ ತತ್ವಗಳಾಗಿವೆ. ಕೃತಿಯನ್ನು ಮೌಲ್ಯಮಾಪನ ಮಾಡಿ ಅದರ ಸ್ಥಾನವನ್ನು ಗುರುತಿಸುವುದು. ವಿಮರ್ಶೆಯ ಜವಾಬ್ದಾರಿಯಾಗಿದೆ. ಹೀಗಾಗಿ ವಿಮರ್ಶೆಯಲ್ಲಿ ತೂಗಿ ನೋಡುವ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಓದುಗರ ಎಲ್ಲಾ ಪ್ರತಿಕ್ರಿಯೆಗಳೂ ವಿಮರ್ಶೆ ಆಗಲಾರವು. ಕೃತಿಗೂ – ಓದುಗನಿಗೂ – ವಿಮರ್ಶಕನಿಗೂ ಇರುವ ಅನ್ಯೋನ್ಯವಾದ ಸಂಬಂಧವನ್ನು ಸಾಹಿತ್ಯ ವಿಮರ್ಶೆ ಆರೋಗ್ಯಕರವಾಗಿ ಬೆಳೆಸುತ್ತದೆ.

ಮೌಲ್ಯ ನಿರ್ಣಯದ ಮೂಲಕ ಯಾವುದು ಉತ್ತಮ ಕೃತಿ ಯಾವುದು ಸಾಧಾರಣ ಕೃತಿ ಎಂದು ವಿವರಿಸುತ್ತ ಸಾಹಿತ್ಯದ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸುತ್ತದೆ. ವಿಮರ್ಶೆಗೆ ತನ್ನದೇ ಆದ ಸಾಂಸ್ಕೃತಿಕವಾದ ಜವಾಬ್ದಾರಿಯಿದೆ. ತಾತ್ವಿಕ ನೆಲೆಯಿದೆ. ಪ್ರತಿಕ್ರಿಯೆಗಳನ್ನೆಲ್ಲಾ ಒಂದು ವಾದವನ್ನಾಗಿ ಮಂಡಿಸುವ ಶಿಸ್ತಿದೆ.

ವಿಮರ್ಶೆ ಸಾಹಿತ್ಯ ಕೃತಿಗಳಲ್ಲಿರುವ ವಿಶಿಷ್ಟ ಸೌಂದರ್ಯವನ್ನು ಗ್ರಹಿಸುತ್ತದೆ. ಸೌಂದರ್ಯ ಆನಂದಗಳ ಕಾರಣವನ್ನು ಕಂಡುಹಿಡಿಯುತ್ತದೆ. ಅವುಗಳಲ್ಲಿ ತಲೆದೋರುವ ಕೊರತೆಯನ್ನು ಗುರುತಿಸುತ್ತದೆ.

1.2. ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಪ್ರಾಚೀನ ಕಾಲದಿಂದಲೂ ಕನ್ನಡ ಕವಿಗಳು ಕಾವ್ಯ ಸ್ವರೂಪವನ್ನು ಕುರಿತಂತೆ ಚಿಂತಿಸಿದ್ದಾರೆ, ಚರ್ಚಿಸಿದ್ದಾರೆ; ಇದು ಕಾವ್ಯ ಪ್ರಕಾರವನ್ನು ಮೀರಿ ಬೆಳೆದಿಲ್ಲ, ಅದರಾಚೆಗೆ ಕಾವ್ಯ ಚಿಂತನೆ ನಡೆದದ್ದು ಕಡಿಮೆ. ಪಶ್ಚಿಮ ಸಾಹಿತ್ಯದ ಸ್ಪರ್ಶ ದೊರೆತಿದ್ದು, ಭಾರತೀಯ ಕಾವ್ಯ ಮೀಮಾಂಸೆಗೆ ಹೊಸ ರೂಪ ಕೊಟ್ಟು ಸಾಹಿತ್ಯ ವಿಮರ್ಶೆಯನ್ನು ಒಂದು ಪ್ರಕಾರವಾಗಿ ಬೆಳೆಸಲು ಸಾಧ್ಯವಾಗಿದ್ದು ಮುಂದಿನಹಂತ.

ಇಪ್ಪತ್ತನೆ ಶತಮಾನದ ಆರಂಭದಲ್ಲಿ ಕನ್ನಡ ನವೋದಯ ಸಾಹಿತ್ಯ ಪಾಶ್ಚಾತ್ಯ ಪ್ರೇರಣೆ ಪಡೆದುಕೊಂಡು ಹೊಸ ರೂಪ ವಿಧಾನದಲ್ಲಿ ಪ್ರಕಟವಾಯಿತು. ಪಾಶ್ಚಾತ್ಯ ಶಿಕ್ಷಣದಿಂದ ಆಧುನಿಕತೆ ಕಾಲಿಟ್ಟ ಸಂದರ್ಭವದು.

---

[5] ಸಾಹಿತ್ಯ ವಿಮರ್ಶೆಯ ತತ್ವಗಳು : ಅನು. ಸಿ.ಪಿ.ಕೆ.

ಈ ಕಾಲದಲ್ಲಿ ಭಾರತೀಯ ಸಾಹಿತ್ಯ ಮತ್ತು ಪಾಶ್ಚಾತ್ಯ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ ಸಾಹಿತಿಗಳು ಕನ್ನಡದ ಹೊಸ ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ – ಸ್ವರೂಪವನ್ನು ವಿವೇಚಿಸಿದರು.

ಆಧುನಿಕ ಕನ್ನಡ ಸಾಹಿತ್ಯಕ್ಕೆ ವಿಮರ್ಶೆ ಅಗತ್ಯವೂ ಅನಿವಾರ್ಯವೂ ಆಗಿದೆಯೆಂಬುದನ್ನು ಸಮರ್ಥವಾಗಿ ಪ್ರತಿಪಾದಿಸಲಾಯಿತು. ಇದಕ್ಕೆ ಪುಷ್ಟಿಯಾಗಿ ಮಾಸ್ತಿ, ಕವಿ, ವಿಮರ್ಶಕ, ಸಹೃದಯ ಈ ಮೂವರನ್ನೂ ಗಮನದಲ್ಲಿಟ್ಟು ಕೊಂಡು ವಿಮರ್ಶೆ ಮಾಡಬೇಕಾದ ಮೂರು ಕಾರ್ಯಗಳನ್ನು ಈ ರೀತಿ ವಿವರಿಸಿದರು.

1. ಸಾಹಿತ್ಯದ ತಿಳಿವು ಎಲ್ಲರಿಗೂ ಉಂಟಾಗುವುದು.

2. ತೂಕವಿಲ್ಲದ ಗ್ರಂಥಗಳನ್ನು ಬೇರ್ಪಡಿಸುವುದು.

3. ಜನರಿಗೆ ರುಚಿ ಶುದ್ಧಿ ಬೋಧೆಯನ್ನು ಮಾಡುವುದು.

ಅಥವಾ ಜನರಲ್ಲಿ ಕಡಿಮೆಯಾಗುತ್ತಿರುವ ಆಸ್ವಾದನಾ ಶಕ್ತಿಯನ್ನು ಒಂದು ಆದರ್ಶಮಟ್ಟಕ್ಕೆ ಕೊಂಡೊಯ್ಯುವುದು.

ಸಾಹಿತ್ಯ ವಿಮರ್ಶೆ ಒಂದು ಪಂಥಕ್ಕೆ ಬದ್ಧ ಆಗಬಾರದು. ಪಾಶ್ಚಾತ್ಯ ಪ್ರಣಾಲಿಕೆಗಳಿಂದ ಪ್ರೇರಣೆ ಪಡೆದರೂ, ಈ ನೆಲದ ಸಾಹಿತ್ಯ ಅಭ್ಯಸಿಸುವವರಿಗೆ ತೀರಾ ಅವಶ್ಯಕವಾದ ದೇಶೀಯ ಮನೋಭಾವವನ್ನು ರೂಢಿಸುವಂತಿರಬೇಕು.

ಸಾಹಿತ್ಯ ವಿಮರ್ಶೆ ತೂಕದ್ದಾಗಬೇಕಾದರೆ, ಬೆಲೆಯುಳ್ಳದ್ದಾಗಬೇಕಾದರೆ ಮತ್ತು ಸಾಹಿತ್ಯ ಸೃಷ್ಟಿಗೆ ಪ್ರೇರಕ ಶಕ್ತಿಯಾಗಬೇಕಾದರೆ ಸಹೃದಯತೆ ಮತ್ತು ಪ್ರಾಮಾಣಿಕತೆಯಂತ ಗುಣಗಳ ಜೊತೆಗೆ ವಿಮರ್ಶನ ಪ್ರತಿಭೆಯೂ ಇರಬೇಕು.

ಕಾವ್ಯದಲ್ಲಿ ಪ್ರತಿಭೆಯನ್ನು ಗುರುತಿಸುವುದಷ್ಟೇ ವಿಮರ್ಶೆಯ ಕೆಲಸವಲ್ಲ. ಕಾವ್ಯದ ಪ್ರಯೋಜನ, ಸಂಪ್ರದಾಯದ ಬೆಳವಣಿಗೆ, ಸಾಂಸ್ಕೃತಿಕ ಮಹತ್ವದ ಮೌಲ್ಯಮಾಪನ, ಇವೂ ಕೂಡ ವಿಮರ್ಶೆ ಮಾಡಬೇಕಾದ ಕೆಲಸಗಳೇ ಆಗಿವೆ ಎಂಬುದನ್ನು ಗಮನಿಸುವುದು ಅಧ್ಯಯನದ ಉದ್ದೇಶಗಳಾಗಿವೆ.

ಪ್ರಸ್ತುತ ಅಧ್ಯಯನದಲ್ಲಿ ಲಂಕೇಶರ ವಿಮರ್ಶೆ ತಾತ್ವಿಕತೆ, ವಿಮರ್ಶಾ ಮಾನದಂಡಗಳು ಕೃತಿಗಳನ್ನು ನೋಡುವ ದೃಷ್ಟಿಕೋನದಲ್ಲಿ ಬಿಂಬಿತವಾಗಿರುವ ಅಂಶಗಳು ಎಂತವು? ಭಾಷೆಯನ್ನು ಸರಳಗೊಳಿಸಿಕೊಳ್ಳುವುದರ ಮೂಲಕ ಹೇಳಬೇಕಾದುದನ್ನು ಮನ ಮುಟ್ಟುವಂತೆ ಹೇಳಲು

ಸಾಧ್ಯವಾಗಿರುವುದೇ? ಎಷ್ಟು ಪರಿಣಾಮಕಾರಿಯಾಗಿ ತಮ್ಮ ಲೇಖನಗಳಿಂದ ಸಾಹಿತ್ಯ ವಿಮರ್ಶೆಯಿಂದ ಓದುಗರನ್ನು ಮುಟ್ಟುತ್ತಾರೆ? ಎಂಬಂತೆ ಕೆಲವು ಅಂಶಗಳನ್ನು ನಿರ್ವಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸಮಕಾಲೀನರ ಕೃತಿಗಳನ್ನು ವಿಶ್ಲೇಷಿಸಿರುವ ಲಂಕೇಶರ ದೃಷ್ಟಿ ಧೋರಣೆಗಳು, ಅವರ ಅಭಿಪ್ರಾಯಕ್ಕೆ ಪೂರಕವಾಗಿರುವ ಅಂಶಗಳು. ದೇಸೀಮೂಲದ ನೋಟ, ಸಾಂಸ್ಕೃತಿಕ ಸೆಲೆ, ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಇವೆಲ್ಲವನ್ನೂ ಗಮನಿಸಿ 'ಲಂಕೇಶರ ವಿಮರ್ಶೆಯ ತಾತ್ವಿಕತೆ, ನಿಲುವು, ಮಾನದಂಡ'ಗಳನ್ನು ಗುರುತಿಸುವ ಉದ್ದೇಶ ಈ ಅಧ್ಯಯನದ್ದು.

ಅಧ್ಯಯನದ ವ್ಯಾಪ್ತಿ

ನವ್ಯ ವಿಮರ್ಶೆಯ ಪ್ರಮುಖ ಲಕ್ಷಣವಾದ ಮಾನವ ವ್ಯಕ್ತಿಯಾಗಿ ಬಹಳ ಗಟ್ಟಿಯಾದ ಚೇತನ ಎಂಬ ಕಲ್ಪನೆಗೆ ಬದಲಾಗಿ ಎಲ್ಲಾ ಮನುಷ್ಯರಂತೆ ದುರ್ಬಲತೆಗಳನ್ನು ಒಳಗೊಂಡಿರುವ ಮನಸ್ಸು ಎಂಬುದನ್ನು ತಮ್ಮ ವಿಮರ್ಶೆಗಳಲ್ಲಿ ಲಂಕೇಶ್ ಗುರುತಿಸಿದ್ದಾರೆ.

ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಮೇಲೆ ತನ್ನ ಪ್ರಭಾವ ಬೀರಿರುವ ಜಾತೀಯತೆಯ ಕಲುಷಿತ ಪರಿಸರ, ಮತ ಧರ್ಮಗಳು ಹುಟ್ಟು ಹಾಕುತ್ತಿರುವ ದ್ವೇಷದ ಅಸಹನೀಯ ವಾತಾವರಣದಲ್ಲಿ ಮನುಷ್ಯ ಸಂಬಂಧ ತನ್ನ ಘನತೆಯನ್ನು ಕಳೆದು ಕೊಳ್ಳುತ್ತಿದೆ ಎಂಬ ಅನಿಸಿಕೆ ಅವರ ವಿಮರ್ಶೆಗಳಲ್ಲಿದೆ.

ಟೀಕೆ ಟಿಪ್ಪಣಿ ಭಾಗ–1, ಭಾಗ – 2, ಭಾಗ – 3, ಸಾಹಿತಿ – ಸಾಹಿತ್ಯ – ವಿಮರ್ಶೆ; ಪ್ರಸ್ತುತ; ಕಂಡದ್ದು ಕಂಡ ಹಾಗೆ, ಮೊದಲಾದವು ಲಂಕೇಶರ ವಿಮರ್ಶಾ ಕೃತಿಗಳು.

ಈ ನಿಬಂಧದಲ್ಲಿ ಶೈಕ್ಷಣಿಕ ಮತ್ತು ಕಾಲಾವಕಾಶದ ದೃಷ್ಟಿಯಿಂದ ಕೇವಲ 'ಪ್ರಸ್ತುತ' ಹಾಗೂ 'ಕಂಡದ್ದು ಕಂಡ ಹಾಗೆ' ಎಂಬ ಎರಡು ವಿಮರ್ಶಾ ಕೃತಿಗಳನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡಿದೆ.

ಅಧ್ಯಾಯ 2

2.1 ಕನ್ನಡ ವಿಮರ್ಶಾ ಪರಂಪರೆ

ಒಂದು ಸಾಹಿತ್ಯ ಕೃತಿಗೂ ಆ ಕೃತಿ ಓದಿದ ಮೇಲೆ ತನ್ನ ಮೇಲೆ ಉಂಟು ಮಾಡಿದ ಪರಿಣಾಮಕ್ಕೂ ಕಾರ್ಯ ಕಾರಣ ಸಂಬಂಧವನ್ನು ಬೌದ್ಧಿಕವಾಗಿ ಹುಡುಕಲು ಹೊರಟಾಗ ಸಾಹಿತ್ಯ ವಿಮರ್ಶೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಭರತನಿಂದ ಪ್ರಾರಂಭವಾದ ಕಾವ್ಯ ಮೀಮಾಂಸೆ (ಸಾಹಿತ್ಯ ವಿಮರ್ಶೆ)ಯ ಪರಂಪರೆ ಕಾವ್ಯದ ರೂಪ, ಸ್ವರೂಪಗಳನ್ನು ಕುರಿತಂತೆ ಸೂಕ್ಷ್ಮ ಚರ್ಚೆ ನಡೆಸಿದುದೇ ಸಾಹಿತ್ಯ ವಿಮರ್ಶೆಯು ಮೊಳಕೆಯೊಡೆದ ಕಾಲ ಎಂದು ಗುರುತಿಸಬಹುದು.

ನಂತರ ಬಂದ ಕುಂತಕ ರಾಜಶೇಖರರು ವಿಮರ್ಶೆ ಮತ್ತು ವಿಮರ್ಶಕರ ಬಗ್ಗೆ ಮೆಚ್ಚುಗೆಯ ಮಾತನಾಡುತ್ತಾರೆ. ಕಾವ್ಯದಲ್ಲಿ ಅಡಗಿರುವ ತತ್ವ, ಸೌಂದರ್ಯವನ್ನು ಹೊರಗೆಳೆದು ತೋರಿಸುವ ವಿಮರ್ಶಕ ಕವಿಯ ಭಾರವನ್ನು ಕಡಿಮೆ ಮಾಡುವ ವಂದನೀಯ ಎಂದು ಕುಂತಕ ಹೇಳಿದರೆ, ಅಭಿನವ ಗುಪ್ತನು ವಿಮರ್ಶಕನಿಗೆ ಇರಬೇಕಾದ ಅರ್ಹತೆಗಳನ್ನು ಕುರಿತು ವಿವರಿಸುತ್ತಾನೆ.

ಹೀಗೆ ಸಾಗಿ ಬಂದ ಸಾಹಿತ್ಯ ವಿಮರ್ಶಾ ಪರಂಪರೆ ಇಪ್ಪತ್ತನೆಯ ಶತಮಾನದ ಸಾಹಿತ್ಯ ಸಂದರ್ಭದಲ್ಲಿ ಕಂಡು ಬರುವ ಪ್ರಮುಖ ಬೌದ್ಧಿಕ ಚಟುವಟಿಕೆ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ಕಂಡು ಬರುವ ಅಂಶವೆಂದರೆ ಆಯಾ ಸಾಹಿತ್ಯದ ನಿರ್ಮಿತಿಯೊಂದಿಗೆ ಆಸ್ವಾದಿಸುವ ಸಹೃದಯ ತೋರಿಸುವ ಪ್ರತಿಕ್ರಿಯೆ ಅಥವಾ ಸಂವಾದಗಳೆಲ್ಲವೂ ವಿಮರ್ಶೆಯ ಅಡಿಯಲ್ಲೇ ಬರುತ್ತವೆ.

ಇಪ್ಪತ್ತನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಪಶ್ಚಿಮದ ಸಾಹಿತ್ಯದೊಂದಿಗೆ ಎದುರಾದ ಸಂದರ್ಭದಲ್ಲಿ ನಮ್ಮಲ್ಲಿದ್ದ ಕಾವ್ಯಮೀಮಾಂಸೆ ಅಥವಾ ಅಲಂಕಾರ ಶಾಸ್ತ್ರದಿಂದ ಬೇರೆಯಾದ ಉದ್ದೇಶಗಳನ್ನುಳ್ಳ ಒಂದು ಸ್ವತಂತ್ರ ಸಾಹಿತ್ಯ ಪ್ರಕಾರವಾಗಿ ವಿಮರ್ಶೆ ಬೆಳೆದಿದೆ.

"ಇದುವರೆಗಿನ ಸಾಹಿತ್ಯ ವಿಮರ್ಶೆ. ವಿಮರ್ಶಕರು ಎನ್ನುವ ಸೂಕ್ಷ್ಮ ಸಂವೇದನಾಶೀಲರಾದ ವ್ಯಕ್ತಿಗಳಿಂದ ಅವರು ಕಾಲದಿಂದ ಕಾಲಕ್ಕೆ ಕವಿ ಕೃತಿಗಳನ್ನು ಕುರಿತು ನಡೆಸಿದ ಚಿಂತನೆ ಹಾಗೂ ಚರ್ಚೆಗಳಿಂದ ಶೈಕ್ಷಣಿಕ ಸಂಸ್ಥೆಗಳಿಂದ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಗಳಿಂದ ವಿಚಾರ ಸಂಕಿರಣಗಳ

ವೇದಿಕೆಗಳಿಂದ ತನ್ನ ನಿರಂತರತೆಯನ್ನು ಕಾಯ್ದು ಕೊಂಡು ಬಂದು ಸಾಹಿತ್ಯ ವಿಮರ್ಶೆಯ ಪರಂಪರೆಯೊಂದನ್ನು ರೂಪಿಸಿದೆ".[1]

ಚಳುವಳಿಗಳ ಮೂಲಮಾನದಲ್ಲಿ ಸಾಹಿತ್ಯ ವಿಮರ್ಶೆಯ ಪರಂಪರೆಯೊಂದನ್ನು ನೋಡುವುದಕ್ಕಿಂತ ಪ್ರಾತಿನಿಧಿಕವಾದ ವಿಮರ್ಶಕರ ಒಲವು – ನಿಲುವು ಮತ್ತು ಅವರು ಕೊಟ್ಟ ಕೊಡುಗೆಯ ಹಿನ್ನಲೆಯಲ್ಲಿ ಈ ಸಾಹಿತ್ಯ ವಿಮರ್ಶೆಯ ಪರಂಪರೆಯನ್ನು ಕಟ್ಟುವ ಕ್ರಮ ಹೆಚ್ಚು ಸೂಕ್ತ.

ಹೀಗಾಗಿ ಕನ್ನಡ ವಿಮರ್ಶಾ ಸಂದರ್ಭದಲ್ಲಿ ಮಾಸ್ತಿ, ಎ.ಎನ್. ಮೂರ್ತಿರಾವ್, ಎಸ್. ಅನಂತನಾರಾಯಣ, ಶಾಂತಿನಾಥ ದೇಸಾಯಿ, ಕೀರ್ತಿನಾಥ ಕುರ್ತುಕೋಟಿ, ಗೋಪಾಲಕೃಷ್ಣ ಅಡಿಗ, ಯು. ಆರ್. ಅನಂತಮೂರ್ತಿ, ಗಿರಡ್ಡಿ ಗೋವಿಂದರಾಜ ಮೊದಲಾದವರನ್ನು ಪ್ರಸ್ತಾಪಿಸಲೇ ಬೇಕು.

ಇವರೆಲ್ಲರ ಪ್ರಯತ್ನದಿಂದ ರೂಪ ಪಡೆದುಕೊಂಡ ಸಾಹಿತ್ಯ ವಿಮರ್ಶೆಯ ಲಕ್ಷಣಗಳನ್ನು ಈ ರೀತಿ ಗುರುತಿಸಬಹುದು.

* ಹೊಸಗನ್ನಡ ಸಾಹಿತ್ಯದ ಘಟ್ಟಗಳಲ್ಲಿ ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯಿಂದ ಎಷ್ಟು ಪ್ರೇರಣೆ ಪಡೆದುಕೊಂಡರೂ ದೇಶೀ ನೆಲೆಯನ್ನು ಬಳಸಿಕೊಳ್ಳುವುದರಲ್ಲಿ ಹಿಂದೆ ಬೀಳಲಿಲ್ಲ.

* ಪಾಶ್ಚಿಮಾತ್ಯ ಸಾಹಿತ್ಯ ಸಂಪರ್ಕವು ಸಾಹಿತ್ಯ ವಿಮರ್ಶೆಗೆ ಒಂದು ರೀತಿಯ ಉತ್ಸಾಹವನ್ನು ನೀಡಿತು.

* ಈ ಸಂಪರ್ಕ ಅಂಧಾನುಕರಣೆ ಎಂದು ಕೆಲವೊಮ್ಮೆ ಅನ್ನಿಸಿದರೂ, ಕನ್ನಡ ಸಾಹಿತ್ಯ ವಿಮರ್ಶೆ ಅತಿ ಎಚ್ಚರದಿಂದ ತನ್ನ ಸ್ವಂತ ಅಸ್ತಿತ್ವವನ್ನು ಕಳೆದುಕೊಳ್ಳದ ಹಾಗೆ, ಅವರ ಸಾಹಿತ್ಯ ವಿಮರ್ಶೆಗೆ ಮುಖಾಮುಖಿ ಆಗುತ್ತಾ, ಒಂದು ರೀತಿಯ ಸಮನ್ವಯ ಸಾಧಿಸುತ್ತಾ ಕನ್ನಡಕ್ಕೆ ಬೇಕಾದ ವಿಮರ್ಶೆಗೆ ರೂಪ ಕೊಟ್ಟಿತು.

ಈ ಕಾಲದ ಕೆಲವು ವಿಮರ್ಶಕರು ಗಮನಿಸಿದ ವಿಷಯವೆಂದರೆ, ಭಾರತೀಯ ಕಾವ್ಯ ಮೀಮಾಂಸೆಯ ರಸ – ಧ್ವನಿ – ಔಚಿತ್ಯಗಳು ವಿಮರ್ಶೆಯ ಕಾರ್ಯ ನಿರ್ವಹಿಸುತ್ತಿದ್ದರೂ, ಪಾಶ್ಚಾತ್ಯ ವಿಮರ್ಶೆ ಕೃತಿಯನ್ನು ಹೊಸ ರೀತಿಯಲ್ಲಿ ನೋಡುವ ಕಾರ್ಯವನ್ನು ಅಷ್ಟು ಪರಿಣಾಮ ಕಾರಿಯಾಗಿ ಮಾಡುವುದಿಲ್ಲ.

---

[1] ಜಿ.ಎಸ್. ಶಿವರುದ್ರಪ್ಪ : 'ಸಹೃದಯ – ಸಂವಾದ', ಪ್ರಿಯದರ್ಶಿನಿ ಪ್ರಕಾಶನ, ಬೆಂ. 2005.

ಬಿ.ಎಂ.ಶ್ರೀ. ಅವರು ಕನ್ನಡದ ಪುನರುಜ್ಜೀವನ ಬಹುಭಾಷೆ ಹಾಗೂ ಬಹು ಸಂಸ್ಕೃತಿಗಳ ಸಂಪರ್ಕದ ಆಧಾರದ ಮೇಲೆ ನಡೆಯಬೇಕು ಎಂದು ನಂಬಿದ್ದರು. ಇದೇ ದಿಕ್ಕಿನಲ್ಲಿ ನಡೆದವರೆಂದರೆ ನವೋದಯದ ಪ್ರಮುಖ ಲೇಖಕರಾದ ಮಾಸ್ತಿ, ಎಸ್.ವಿ. ರಂಗಣ್ಣ ವಿ.ಸೀ. ಪು.ತಿ.ನ ಮೊದಲಾದವರು.

ಇವರ ಲೇಖನಗಳಿಂದ "ಕನ್ನಡ ಸಾಹಿತ್ಯ ವಿಮರ್ಶೆ ತನ್ನ ಬಾಲ್ಯವನ್ನು ಕಳೆದು ಯೌವನಕ್ಕೆ ಕಾಲಿಡುವ ಸಂದರ್ಭದಲ್ಲಿ, ಅದನ್ನು ಬೆಳೆಸಿದ್ದು ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಆಳವಾದ ತಿಳುವಳಿಕೆಯಿಂದ"[2] ಎಂದು ತಿಳಿದು ಬರುತ್ತದೆ.

ಕುರ್ತುಕೋಟಿ, ಜಿ.ಎಸ್. ಅಮೂರ, ಸಿ.ಎನ್. ರಾಮಚಂದ್ರನ್ ಮೊದಲಾದ ವಿಮರ್ಶಕರು ನವೋದಯದ ಇಂಗ್ಲೀಷ್ ಸಾಹಿತ್ಯದ ಮೂಲಕ ಕನ್ನಡ ವಿಮರ್ಶೆಯನ್ನು ಬೆಳೆಸುವ ದಾರಿಯಲ್ಲೇ ಸಾಗಿದರೂ, ಅದರ ಜೊತೆಗೆ, ಸಂಸ್ಕೃತ ಸಾಹಿತ್ಯ ಮತ್ತು ವಿಮರ್ಶೆಯನ್ನೂ ಬಳಸಿಕೊಂಡರು.

ಟಿ.ಪಿ. ಅಶೋಕ, ಎಚ್.ಎಸ್. ರಾಘವೇಂದ್ರರಾವ್, ಪಿ. ಲಂಕೇಶ್ ಮೊದಲಾದವರ ಪೂರ್ವ ಸಿದ್ಧತೆಯಿಂದ ವಿಮರ್ಶೆಗೆ ಮತ್ತೊಂದು ರೂಪವನ್ನು ಕೊಟ್ಟರು.

ವಿಮರ್ಶೆ ಎಂಬುದು ಒಬ್ಬ ವಿಮರ್ಶಕನ ಸ್ವಂತ ಮನೋಧರ್ಮವೂ ಆಗಬಹುದು. ಇಲ್ಲವೇ ಆ ವ್ಯಕ್ತಿಯ ವ್ಯಕ್ತಿತ್ವದ ಪ್ರತಿರೂಪವೇ ಆಗಿರಬಹುದು. ಕನ್ನಡ ವಿಮರ್ಶಾ ಪರಂಪರೆ ಬಹುಮುಖಿಯಾದದ್ದು. ಕಾವ್ಯ ಮೀಮಾಂಸೆ, ಸಂಶೋಧನೆ, ಸಾಹಿತ್ಯ ವಿಮರ್ಶೆ, ಸಂಸ್ಕೃತಿ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ ಇವು ಕನ್ನಡ ವಿಮರ್ಶೆಯ ಆಯಾಮಗಳು.

ಕನ್ನಡ ವಿಮರ್ಶೆ ತನ್ನ ಪ್ರಾರಂಭದ ಹಂತದಲ್ಲಿ 'ಸಾಹಿತ್ಯವನ್ನು ಕುರಿತ ಸಾಮಾನ್ಯ ಚಿಂತನೆ' ಎಂಬ ಅರ್ಥಕ್ಕಷ್ಟೇ ಸೀಮಿತವಾಗಿತ್ತು. ಈಗಿನಷ್ಟು ವಿಸ್ತಾರವಾದ ವ್ಯಾಪ್ತಿ ಅಲ್ಲಿ ಇಲ್ಲದೆ ಇದ್ದರೂ, ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳು ಎಂದು ಹೇಳುವಷ್ಟು ನಿಚ್ಚಳವಾಗಿ ವಿಮರ್ಶೆಯ ಪರಿಕರಗಳನ್ನು ಗುರುತಿಸಬಹುದು.

ಇಂಗ್ಲೀಷ್ ಸಾಹಿತ್ಯ ಸಂಪರ್ಕ ಕನ್ನಡ ಸಾಹಿತ್ಯಕ್ಕೆ ಒಂದು 'ಹೊಸ ದೃಷ್ಟಿ' ನೀಡಿತು. ಆದರೂ ಇದು ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕೆ ಕಾರಣ ಎಂದು ನಂಬಿದ್ದ ನವೋದಯ ಘಟ್ಟದ ಅಭಿಪ್ರಾಯಗಳು ನಂತರದ ಕೆಲವರಿಗೆ ಹಿಡಿಸಲಿಲ್ಲ. ಏಕೆಂದರೆ ಈ ಹೊಸದೃಷ್ಟಿ ಪಾಶ್ಚಿಮಾತ್ಯರಿಗೆ ಹಳೆಯದೇ ಆಗಿತ್ತು ಎಂಬ ಅಭಿಪ್ರಾಯ ಅವರಲ್ಲಿತ್ತು. ಹೀಗಾಗಿ ಕನ್ನಡ ವಿಮರ್ಶಾ

[2] ದಶವಾರ್ಷಿಕ ಸಾಹಿತ್ಯ ಸಮೀಕ್ಷೆ: ಬೆಂಗಳೂರು ವಿಶ್ವವಿದ್ಯಾಲಯ

ಪರಂಪರೆಯಲ್ಲಿ ಈ ರೀತಿಯದೊಂದು ವೈರುಧ್ಯತೆಯು ಪ್ರಾರಂಭದ ಹಂತಗಳಲ್ಲಿ ಇತ್ತು ಎಂಬ ಅಂಶ ಗಮನಾರ್ಹ.

ಸಾಮಾನ್ಯವಾಗಿ ವಿಮರ್ಶೆ ಶುರುವಾಗುವುದು ಈ ಮೊದಲೇ ಸಿದ್ಧವಾದ ಸೂತ್ರಗಳಿಂದ ಇವುಗಳನ್ನು

1. **ಸೈದ್ಧಾಂತಿಕ ವಿಮರ್ಶೆ**[3] : ಇಲ್ಲಿ ಸರ್ವಸಾಮಾನ್ಯವಾದ ಕಾವ್ಯದ ಲಕ್ಷಣ ಸೂತ್ರಗಳೇ ವಿಮರ್ಶೆಯ ಮಾನದಂಡಗಳಾಗುತ್ತವೆ.

ಈ ವಿಭಾಗದ ಪ್ರಮುಖ ಸಿದ್ಧಾಂತಿಗಳೆಂದರ, ಭರತ, ಭಾಮಹ, ದಂಡಿ, ಅಭಿನವಗುಪ್ತ ಕ್ಷೇಮೇಂದ್ರ ಜಗನ್ನಾಥ ಮೊದಲಾದವರು.

2. **ಅನ್ವಯಿಕ ಮತ್ತು ಸೃಜನಾತ್ಮಕ ವಿಮರ್ಶೆ**[4]: ಈ ಹಂತಗಳು ಚಲನಶೀಲವಾಗಿ ಸೂಕ್ಷ್ಮವಾದುವು. ಇಲ್ಲಿ ಕಾಣಿಸಿಕೊಳ್ಳುವವರು ಕವಿ, ಕಲಾವಿದ, ನಾಟಕಕಾರ, ಒಟ್ಟಿನಲ್ಲಿ ಯಾವುದೇ ಸೃಜನಶೀಲ ಲೇಖಕ.

ಪ್ರತಿಭಾ ವಿಶೇಷವಾದ ಅಂತಃಸ್ಫೂರ್ತಿಯಿಂದ ಪಡೆದದ್ದನ್ನು ಅಂದರೆ ನಿಗೂಢವಾಗಿ ಅಗಮ್ಯವಾದದ್ದನ್ನು ಇಂದ್ರಿಯಗಮ್ಯವಾಗಿ ಮಾಡಿ, ಆಸ್ವಾದಿಸಿ ಅನುಭವಿಸಿ ವಿಶ್ಲೇಷಿಸುವುದೇ ವಿಮರ್ಶೆಯ ಕಾರ್ಯವಾಗುತ್ತದೆ.[5]

ಸಾಹಿತ್ಯ ವಿಮರ್ಶೆಯ ಮೊದಲ ಹಂತದಲ್ಲಿ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಕೊರತೆಗಳೆಂದು ತಮಗೆ ತೋರಿದ ವಿಷಯಗಳಲ್ಲಿ ಪಾಶ್ಚಾತ್ಯ ಚಿಂತನೆಯಿಂದ ಲಾಭ ಪಡೆದರೇ ಹೊರತು ಅದರ ಪ್ರತಿರೂಪವೇ ಆದ ವಿಮರ್ಶೆ ಬರಲಿಲ್ಲ.

ಸಾಹಿತ್ಯ ವಿಮರ್ಶೆಯನ್ನು ಮಾಡುವಾಗ ಅಂತಃಕರಣ ಹೇಗೆ ಚೊಕ್ಕಟವಾಗಿರಬೇಕು? ಬುದ್ಧಿ ಹೇಗೆ ವಿವೇಚನೆಯಿಂದ ಕೂಡಿ ಕೆಲಸ ಮಾಡಬೇಕು? ಯಾವ ಅರಿವು, ನಿಷ್ಠೆ, ಧೈರ್ಯಗಳು ಅವಶ್ಯಕ? ಮೊದಲಾದ ಕರ್ತವ್ಯ ಪ್ರಶ್ನೆಗಳ ಕಡೆಗೆ ಓದುಗರ ಗಮನವೂ, ಆಸಕ್ತಿಯೂ ಆಕರ್ಷಿತವಾಗುವಂತಿರಬೇಕು.

ಇದೇ ರೀತಿಯ ನಿಯಮಗಳನ್ನು ಆಧಾರವಾಗಿ ಇಟ್ಟುಕೊಂಡು ಬಂದ ವಿಮರ್ಶೆ ಎಂದರೆ ಎಸ್. ವಿ. ರಂಗಣ್ಣ, ಅವರ 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' – ಇದು ಮುದ್ದಣನ ಗದ್ಯಕೃತಿ. 'ರಾಮಾಶ್ವಮೇಧ'ದ ವಿಮರ್ಶಾತ್ಮಕ ಮೌಲ್ಯ ನಿರ್ಣಯಕ್ಕೆ ಸಂಬಂಧಿಸಿದುದು. ಈ ಲೇಖನ

---

[3], [4, 5] ಜಿ. ಎಸ್. ಶಿವರುದ್ರಪ್ಪ : 'ಸಹೃದಯ – ಸಂವಾದ' ಪ್ರಿಯದರ್ಶಿನಿ ಪ್ರಕಾಶನ, ಬೆಂ. 2005.

ಪ್ರಕಟಗೊಂಡಾಗ ಕನ್ನಡ ವಿಮರ್ಶಾ ಲೋಕದಲ್ಲಿ ಒಂದು ದೊಡ್ಡ ಕೋಲಾಹಲವೇ ಸೃಷ್ಟಿಯಾಯಿತು.

ಈ ವಿಮರ್ಶಾ ಲೇಖನ ವಿಮರ್ಶೆಯ ಯಥಾ ಸ್ಥಿತಿವಾದವನ್ನು ಪ್ರಶ್ನಿಸಿ, ವಿಮರ್ಶಾ ಕ್ಷೇತ್ರ ಸಾಗಬೇಕಾದ ಪಥವನ್ನು ನಿರ್ದೇಶಿಸಿತು.

ಸಾಹಿತ್ಯ ವಿಮರ್ಶೆಗೆ ಅದರದೇ ಆದ ಅನನ್ಯತೆ ಇದೆ. ಯಾವ ಕೃತಿ ಯಾವ ರೀತಿಯ ಪರಿಸರಕ್ಕೆ ಪೂರಕ ಮತ್ತು ಸಾಹಿತ್ಯದಿಂದ ಸಾಮಾನ್ಯ ಜನತೆಗೆ ಏನು ಉಪಯೋಗ? ಇಂಥ ಪ್ರಶ್ನೆಗಳಿಂದ ಪ್ರಾರಂಭಿಸಿ ಅನೇಕ ಸಂಕೀರ್ಣ ಪ್ರಶ್ನೆಯತನಕ ಸಾಹಿತ್ಯ ವಿಮರ್ಶೆ ಕಾರ್ಯ ನಿರ್ವಹಿಸುತ್ತದೆ. ಒಂದು ನಿರ್ದಿಷ್ಟ ಸಾಂಸ್ಕೃತಿಕ ವಾತಾವರಣವನ್ನು ರೂಪಿಸಲು ಬಯಸುತ್ತದೆ. ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಾಹಿತ್ಯ ವಿಮರ್ಶೆಯೂ ಒಂದು ಪರಿಕರ.

ಕೃತಿಯ ಅನುಭವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಸಾಹಿತ್ಯ ವಿಮರ್ಶೆಯ ಮೊದಲ ಹಂತ. ಹೀಗೆ ಸಾಕ್ಷಾತ್ಕಾರ ಮಾಡಿಕೊಂಡ ನಂತರ ಕೃತಿಯಲ್ಲಿ ಈ ಅನುಭವ ಹೇಗೆ ಆಕಾರ ಪಡೆಯಿತು ಎಂಬುದನ್ನು ಅಧ್ಯಯನ ಮಾಡುವುದು ಎರಡನೇ ಹಂತ. ಇದಕ್ಕೆ ಸಾಧನವಾಗಿ ಭಾಷೆ, ಚಿತ್ರ/ಪ್ರತಿಮೆ, ಸಂಕೇತಗಳನ್ನು ಬಳಸಿಕೊಳ್ಳುತ್ತದೆ.

ಇದರ ನಂತರ ವಿಮರ್ಶೆ ಕವಿಯ ಆಧಾರದಿಂದ ನೋಡುವ ಪ್ರಯತ್ನ ಮಾಡುತ್ತದೆ. ಟಿ.ಎಸ್. ಎಲಿಯಟ್ ಮಾತಿನಲ್ಲಿ ಹೇಳುವುದಾದರೆ ವಿಮರ್ಶೆ "ದಿ ಕಾಮನ್ ಪರ್‌ಸ್ಯೂಟ್". ಕೆಲವು ಕೃತಿಗಳು (ಉದಾಹರಣೆಗೆ: ಅಡಿಗರ 'ಭೂಮಿಗೀತ', ಕಾರಂತರ 'ಅಳಿದ ಮೇಲೆ', ದೇಸಾಯಿ ಅವರ 'ವಿಕ್ಷಿಪ್ತ' ಮುಂತಾದುವು) ವಿಮರ್ಶಕನ ಅರ್ಥೈಸುವಿಕೆ ಕ್ರಿಯೆಯನ್ನು ಬೇಡುತ್ತವೆ. ಆಗ ವಿಮರ್ಶೆ ಫಲದಾಯಕವಾಗುತ್ತದೆ. ಒಂದು ಚಿತ್ರವನ್ನು ಅರ್ಥೈಸುವಲ್ಲಿ ಅದರ ಯಾವ ಮೂಲೆಯಲ್ಲಾಗಲಿ ಇರಬಹುದಾದ ಪ್ರತಿಗೆರೆಯನ್ನೂ ಬಣ್ಣದ ಸೂಚನೆಯನ್ನೂ ಹೇಗೆ ಗಮನಿಸಬೇಕೋ ಹಾಗೆ ಇಡೀ ಕೃತಿಯನ್ನು ಗಮನದಲ್ಲಿ ಇಟ್ಟುಕೊಂಡು ವಿಮರ್ಶಕ ಅರ್ಥೈಸಬೇಕಾಗುತ್ತದೆ.

ಕೃತಿಯಲ್ಲಿ ಬರುವ ಕೆಲವು ಘಟನೆಗಳು, ಅವುಗಳ ಮಹತ್ವ, ಅವುಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆಯುವ ವಿಚಿತ್ರ/ವಿಶಿಷ್ಟ ಸನ್ನಿವೇಶಗಳು ಇವನ್ನು ಪರಿಶೀಲಿಸಬೇಕಾಗುತ್ತದೆ. ಆದರೆ ಇಲ್ಲಿ ಅರ್ಥೈಸುವಿಕೆ ಎಂದರೆ, ತಾನು ಆರಿಸಿಕೊಂಡ ಭಾಗಗಳ ಅಥವಾ ಪಾತ್ರಗಳ ಜೀವನದ ವಿವಿಧ ಭಾಗಗಳನ್ನು ಅವುಗಳ ಪರಸ್ಪರ ಸಂಬಂಧವನ್ನೂ ಯಾವ ಸ್ವರೂಪದಲ್ಲಿ ನಮ್ಮ ಮುಂದೆ ಕೃತಿ ತಂದು ಕೊಡುತ್ತದೆ ಎಂಬುದು.

ವಿಮರ್ಶೆ ಕಡೆಯದಾಗಿ ಕೃತಿಯ ಮೌಲ್ಯನಿರ್ಣಯ (ಬೆಲೆ ಕಟ್ಟುವಿಕೆ) ಮಾಡುವುದು. ಹಾಗೆಂದು ವಿಮರ್ಶಕನನ್ನು ನ್ಯಾಯಾಧೀಶನೆಂದು ಕವಿ ಅಥವಾ ಲೇಖಕರನ್ನು ಆರೋಪಿತ ಎಂದು ತಿಳಿಯುವುದು ತರವಲ್ಲ. ವಿಮರ್ಶಕ ಎಚ್ಚರಿಕೆಯಿಂದ, ವಿನಯದಿಂದ ಮೌಲ್ಯ ನಿರ್ಣಯ ಮಾಡುತ್ತಾನೆ.

ವಿಮರ್ಶೆ ಮೊದಲು ಕೃತಿಯನ್ನು ಸಾಹಿತ್ಯ ಎಂದು ಗುರುತಿಸಿ ಅದರ ವೈಶಿಷ್ಟ್ಯವನ್ನು ಮನದಟ್ಟು ಮಾಡಿಕೊಡಬೇಕು. ನಂತರ ಯಾವ ರೂಪಕ್ಕೆ ಸೇರಿದುದು. ಸಾಹಿತ್ಯ ಕೃತಿಯಾಗಿ ಯಾವ ಮಟ್ಟದಲ್ಲಿ ನಿಲ್ಲುತ್ತದೆ? ಭಾಷೆಯ ಸಂಪನ್ಮೂಲಗಳನ್ನು ಯಾವ ಮೂಲಮಾನದಲ್ಲಿ ಬಳಸಿಕೊಂಡಿದೆ ಎಂಬುದನ್ನು ಗಮನಿಸಿ ಮೌಲ್ಯ ನಿರ್ಣಯ ಮಾಡುತ್ತದೆ.

2.2 ನವೋದಯ ವಿಮರ್ಶೆ

ನವೋದಯ ವಿಮರ್ಶೆ ಆರಂಭವಾದದ್ದು ಹಳೆಗನ್ನಡ ಸಾಹಿತ್ಯದ ಪ್ರಸ್ತುತತೆಯ ಚರ್ಚೆಯ ಮೂಲಕ ಜೊತೆಗೆ ಇಪ್ಪತ್ತನೆ ಶತಮಾನದ ಸಾಹಿತ್ಯ ಕುರಿತ ವಿಮರ್ಶೆಗಳು ಅವರ ಪ್ರಾಸಂಗಿಕವಾದ ಆಸಕ್ತಿಯ ಗುರುತುಗಳಾಗಿವೆ. ಈ ಕಾರಣದಿಂದ ನವೋದಯದ ಪ್ರಮುಖ ಲೇಖಕರಾದ ಕುವೆಂಪು, ತೀ.ನಂ.ಶ್ರೀ., ಡಿ.ಎಲ್. ನರಸಿಂಹಾಚಾರ್, ಪ್ರಾಚೀನ ಸಾಹಿತ್ಯವನ್ನು ಕನ್ನಡ (ಆಧುನಿಕ ಕನ್ನಡ)ದ ಓದುಗರಿಗೆ ತಲುಪಿಸುವ ಕಾರ್ಯಕ್ಕೆ ಮುಂದಾದರು. ಹೀಗಾಗಿ ಪ್ರಾಚೀನ ಕವಿ ಕೃತಿಗಳನ್ನು ಕುರಿತ ಹೊಸ ಬಗೆಯ ವಿಮರ್ಶನ ಪ್ರಯತ್ನಗಳು ನಡೆದುದನ್ನು ಕಾಣಬಹುದು.

ಇಪ್ಪತ್ತನೆ ಶತಮಾನದಲ್ಲಿ ಆಧುನಿಕ ಸಾಹಿತ್ಯ ಕಣ್ಣು ತೆರೆದಾಗ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಕವಿ ಕೃತಿಗಳ ವಿಮರ್ಶೆಯನ್ನು ವಿವಿಧ ನೆಲೆಗಳಿಂದ ನೋಡುವ ಮೂಲಕ ಕನ್ನಡದ ವಿಮರ್ಶೆಗೆ ಭದ್ರವಾದ ತಳಹದಿ ಸಿಕ್ಕಂತಾಯಿತು.

ವಿಮರ್ಶೆ ಕವಿಕೃತಿಗಳ ಬಗೆಗೆ ರುಚಿ ಹುಟ್ಟಿಸುವ, ಸಹೃದಯತೆ ಬೆಳೆಸುವ ಗುಣವುಳ್ಳದ್ದು. ವಿಶಾಲ ಅಭಿರುಚಿ, ವ್ಯಾಸಂಗ ಪರಿಣಿತಿಯಿಂದ ಕೂಡಿರುವುದಾಗಿ ಬೆಳೆಯಿತು. ಹೀಗೆ ನವೋದಯದ ಸಾಂಸ್ಕೃತಿಕ ಸಂದರ್ಭದಲ್ಲಿ ವಿಮರ್ಶೆ ಆಕೃತಿಗೊಂಡಿದ್ದನ್ನು ಕಾಣಬಹುದು.

ಸಾಹಿತ್ಯ ವಿಮರ್ಶೆಯ ಪರಂಪರೆಯೇ ಇಲ್ಲದಿದ್ದ ಕಾಲದಲ್ಲಿ ವಿಮರ್ಶೆಯ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಸಾಹಿತ್ಯಾಸಕ್ತಿ, ಸ್ನೇಹ ಸಂಬಂಧಗಳನ್ನು ಸ್ಥಾಪಿಸುವ ಕಾರ್ಯ ನಡೆಯಿತು. ವಿಮರ್ಶೆಯ ಮೂಲ ಸ್ವರೂಪ ಸಾಂಸ್ಕೃತಿಕವಾದ ತಮ್ಮ ಕಾಲದ ತತ್ವಜ್ಞಾನಗಳಲ್ಲಿ ಒಂದಾದ ಮಾನವತಾವಾದವನ್ನು, ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯಿಂದ ಬಂದ ಸ್ಫೂರ್ತಿ ತತ್ವವನ್ನೂ ಒಪ್ಪಿಕೊಳ್ಳಲಾಯಿತು.

ಹಾಗೆಯೇ ಸಂಯಮಶೀಲವಾದ ವಿಮರ್ಶೆಯ ಭಾಷೆಯನ್ನು ರೂಪಿಸಲಾಯಿತು. ಸಾಹಿತ್ಯ ವಿಮರ್ಶೆ ತನ್ನ ಪ್ರಾತಿನಿಧಿಕ ಸ್ವರೂಪವನ್ನು ಇಲ್ಲಿ ಪಡೆದುಕೊಂಡಿತು. ಕನ್ನಡ ನವೋದಯದ ಒಂದೆ ಇಂಗ್ಲೀಷ್ ಸಾಹಿತ್ಯ ವಿಮರ್ಶೆಯ ಪ್ರೇರಣೆಯ ಜೊತೆಗೆ ಬಂಗಾಳಿ ಸಾಹಿತ್ಯ ವಿಮರ್ಶೆಯೂ ಸಹಾಯ ಮಾಡಿತು. ಇದರಿಂದ ನವೋದಯ ವಿಮರ್ಶೆ ಹೊಸ ರೀತಿಯನ್ನು ಪಡೆದುಕೊಂಡಿತು.

ನವೋದಯ ವಿಮರ್ಶೆಯಲ್ಲಿ ಹೆಚ್ಚು ಸತ್ಯ-ಸತ್ವ ಪಕ್ಷಪಾತಿಯಾದ, ನಿಷ್ಠುರ ಪ್ರವೃತ್ತಿಯ, ವಿಶ್ಲೇಷಣ ಸಾಮರ್ಥ್ಯವಿರುವ ವಿಮರ್ಶೆಗಳೂ ಬಂದು, ಸಾಹಿತ್ಯ ವಿಮರ್ಶೆಯನ್ನು ವಿದ್ವತ್ ಪೂರ್ಣಗೊಳಿಸಿದವು.

ಕನ್ನಡದಲ್ಲಿ ಸಮಗ್ರ ಕೃತಿ ಪರಿಶೀಲನೆಯ ಪರಂಪರೆಯನ್ನು ಪ್ರಾರಂಭಿಸಿದ್ದು – ನವೋದಯ ವಿಮರ್ಶೆ. ತನಗಿದ್ದ ಪರಂಪರೆಯ ಹಿನ್ನಲೆಗೆ ಅನುಸಾರವಾಗಿ ಕೃತಿಯೊಂದರ ಬಿಡಿಸಂಗತಿಗಳನ್ನೇ ಚರ್ಚಿಸುತ್ತಿದ್ದ ಸಂದರ್ಭದಲ್ಲಿ ಕೃತಿಯೊಂದನ್ನು ಇಡಿಯಾಗಿ ವಿಮರ್ಶೆಗೆ ಗುರಿಪಡಿಸುವ ಕೆಲಸವನ್ನು 'ಭಾಸಕವಿ', 'ಬಂಕಿಮ ಚಂದ್ರ' ಕೃತಿಗಳ ಮೂಲಕ ಪ್ರಾರಂಭಿಸಿದವರು ಎ.ಆರ್. ಕೃಷ್ಣಶಾಸ್ತ್ರಿ ನವೋದಯ ವಿಮರ್ಶೆ ತನಗೆ ತಕ್ಷಣ ಪರಿಚಯವಾದ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ತತ್ವ ವಿಧಾನಗಳನ್ನು ಅನ್ವಯಿಸಿ ಹೊಸಗನ್ನಡ ಸಾಹಿತ್ಯ ವಿಮರ್ಶೆಯನ್ನು ಕಟ್ಟ ತೊಡಗಿದ ಸಂದರ್ಭದಲ್ಲಿ ಎ.ಆರ್. ಕೃಷ್ಣಶಾಸ್ತ್ರಿ ಭಾರತೀಯ ಕಾವ್ಯ ಮೀಮಾಂಸೆಯ ತತ್ವ, ಪರಿಕಲ್ಪನೆಗಳನ್ನು ಅನ್ವಯಿಸಿ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಬೆಳೆಸಲು ಮಾಡಿದ ಪ್ರಯತ್ನ ಗಮನಾರ್ಹ.

ಈ ಕಾಲಾವಧಿಯಲ್ಲಿ ಸಾಹಿತ್ಯ ವಿಮರ್ಶೆ ವ್ಯವಸ್ಥಿತ ಚಟುವಟಿಕೆಯಾಗಿ ಬೆಳೆಯಿತು. ಭಿನ್ನತೆಯ ಲಕ್ಷಣಗಳನ್ನು ಗುರುತಿಸಿ, ವಿಶ್ಲೇಷಿಸುವ ಕಾರ್ಯ ನಡೆಯಿತು. ಪಾಶ್ಚಿಮಾತ್ಯ ಹಾಗೂ ಭಾರತೀಯ ವಿದೇಶೀ ಸ್ವದೇಶೀ ಪರಂಪರೆಗಳ ಸಮನ್ವಯ ಸಾಧಿಸಲು ಶ್ರಮಿಸಲಾಯಿತು.

ನವೋದಯದ ಹೆಚ್ಚಿನ ವಿಮರ್ಶಕರು ಸೈದ್ಧಾಂತಿಕ ಗುಂಪಿಗೆ ಸೇರಿದವರಲ್ಲ; ಪ್ರಾಧ್ಯಾಪಕ ಕವಿ ವಿಮರ್ಶಕರಂತೆ ಅನ್ವಯಿಕ ಹಾಗೂ ಸೃಜನಾತ್ಮಕ ಗುಂಪಿನವರು. ಹೀಗಾಗಿ ಇಂಥ ವಿಮರ್ಶೆಗಳು ಅಧ್ಯಾಪಕ ವೃತ್ತಿಯ ವಿವರಣಾತ್ಮಕ ಮತ್ತು ವರ್ಣನಾತ್ಮಕ ವಿಮರ್ಶಾ ಪ್ರಕಾರಕ್ಕೆ ಶ್ರೇಷ್ಠ ಮಾದರಿಯಾಗಿದೆ. ಈ ರೀತಿಯ ವಿಮರ್ಶೆಯೇ ಬೇರೆ ತರದ್ದು. ಇಂಥದರಲ್ಲಿ ಬೇರೆ ಬೇರೆ ವಿಮರ್ಶಕ ಸಿದ್ಧಾಂತಗಳ ಸೂತ್ರಗಳನ್ನು ಅವರವರ ದೃಷ್ಟಿಕೋನಕ್ಕನುಗುಣವಾಗಿ ವಿವರಿಸುತ್ತಾ ಸಮದೃಷ್ಟಿಯ ಆಶ್ರಯದಲ್ಲಿ ಯಾವುದನ್ನೂ ಅತಿಯಾಗಿಸದೆ ಸಮಾಪ್ತಿ ಮಾಡುವುದು. ಇಲ್ಲಿಯ ಸೂಕ್ಷ್ಮವೆಂದರೆ, ಕವಿ ವಿಮರ್ಶಕನಿಗೆ ಸಹಜ ಸಿದ್ಧವಾಗಿ ದೊರಕುವ ಸೃಜನಾತ್ಮಕ ಒಲವುಗಳು ಹಿಂದೆ ಸರಿದು ವಿವರಣಾತ್ಮಕ ಉಪನ್ಯಾಸಕ್ಕೆ ಮಾತ್ರ ಹೆಚ್ಚು ಒತ್ತು ಬೀಳುತ್ತದೆ. ಇಂಥ ವಿಮರ್ಶೆಯ ಶ್ರೇಷ್ಠ ಗುಣಗಳೆಂದರೆ 'ಸಂಗ್ರಹ' ಮತ್ತು 'ಸಂಯೋಜನೆ'.

ನವೋದಯ ವಿಮರ್ಶೆಯಲ್ಲಿದ್ದುದು ಸಂಶೋಧನಾ ವಿಮರ್ಶೆ. ಇಲ್ಲಿ ಗುಣ ದೋಷಗಳ ವಿಶ್ಲೇಷಣೆ, ವಿಚಿಕಿತ್ಸೆ, ಮೌಲ್ಯಮಾಪನ ಹೆಚ್ಚು. ಅದು ತನಗೆ ಬೇಕಾದ ತೀಕ್ಷ್ಣ ಬುದ್ಧಿಮತ್ತೆ, ತೀವ್ರ ಸಂವೇದನೆ, ಶೀಘ್ರ ಗ್ರಹಿಕೆ ಮತ್ತು ದೀರ್ಘ ಆಲೋಚನೆಯಂತ ಶಾಸ್ತ್ರ ಶಸ್ತ್ರಕ್ರಿಯೆಯ ವಿಮರ್ಶೆಯನ್ನು ಕಾಣಬಹುದು.

ಎಲ್.ಎಸ್. ಶೇಷಗಿರಿರಾವ್ ಅವರು ವಿಮರ್ಶೆಯ ಕುರಿತು "ಯಾವುದೇ ಒಂದು ಸಾಹಿತ್ಯ ಚಳುವಳಿ ಬಂದಾಗ ಸಹಜವಾಗಿಯೇ ಅದರ ಗುಣಗಳು ಕಣ್ಣು ಕುಕ್ಕುವುದು ಸಾಮಾನ್ಯ. ಆದರೆ ಅದಷ್ಟೇ ಸಮಸ್ತ ಜೀವನವನ್ನು ಪ್ರತಿಬಿಂಬಿಸುವುದಿಲ್ಲವೆಂಬುದನ್ನು ವಿಮರ್ಶೆ ಮರೆಯಬಾರದು ಪ್ರತಿಭಟನೆ ಮಾಡುವಾಗಲೂ ಪ್ರತಿಭಟನೆಯ ಉದ್ದೇಶವು ಎಲ್ಲವನ್ನೂ ಕೊಚ್ಚಿಕೊಂಡು ಹೋಗುವ ಪ್ರವಾಹವನ್ನು ಹರಿಯ ಬಿಡುವುದಿಲ್ಲ ಎಂಬ ಅರಿವಿರಬೇಕು. ಏನು ಉಳಿಯಬೇಕು, ಎಂತಹ ಸಾಮಾಜಿಕ ರಚನೆ ಉಳಿಯಬೇಕು ಎಂಬುದರ ಬಗ್ಗೆ ಸ್ಪಷ್ಟ ಅರಿವಿರಬೇಕಾಗುತ್ತದೆ"[1] ಎನ್ನುತ್ತಾರೆ.

ನವೋದಯ ವಿಮರ್ಶೆಯ ಹಿಂದೆ ಕೋಲ್‌ರಿಜ್, ಮ್ಯಾಥ್ಯೂ ಆರ್ನಾಲ್ಡ್, ಬ್ರಾಡ್ಲೆ ಮೊದಲಾದವರ ಸ್ಫೂರ್ತಿ ಇದೆ. ಹೆಚ್ಚಾಗಿ ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಮತ್ತು ಹಳೆಗನ್ನಡ, ನಡುಗನ್ನಡ ಸಾಹಿತ್ಯದ ಹಾಗೂ ಸಂಸ್ಕೃತ ಸಾಹಿತ್ಯ ಸಮೀಕ್ಷೆಯಲ್ಲಿ ಮಹತ್ತರ ಕೊಡುಗೆಗಳನ್ನು ಕೊಟ್ಟಿದೆ.

ಜೊತೆಗೆ ಸಮಕಾಲೀನ ಕನ್ನಡ ಸಾಹಿತ್ಯವನ್ನು ವಿಮರ್ಶಿಸುವಾಗಲೂ ನವೋದಯ ವಿಮರ್ಶಕರು ಹಿರಿಯ ಲೇಖಕರ ಬಗ್ಗೆ ಗೌರವ ಇಟ್ಟುಕೊಂಡು, ಕಿರಿಯ ಲೇಖಕರನ್ನು ಪ್ರೋತ್ಸಾಹಿಸುವ ಮನೋಭಾವವನ್ನು ತೋರಿರುವುದನ್ನು ಕಾಣಬಹುದು.

ಕೃತಿಯ ರೂಪನಿಷ್ಠತೆಗಿಂತಲೂ, ಪ್ರತಿಭೆಯ ಸ್ವಚ್ಛಂದತೆಯ ಕಡೆಗೆ ಗಮನ, ಆದರ್ಶ ಪ್ರಿಯತೆಯನ್ನು ವಿಶ್ಲೇಷಿಸುವಂತ ಅತಿರೇಕಗಳನ್ನೂ ನವೋದಯ ವಿಮರ್ಶೆಯಲ್ಲಿ ನೋಡುತ್ತೇವೆ. ಇಂಗ್ಲೀಷ್‌ನ ರೊಮ್ಯಾಂಟಿಕ್ ಸಂಪ್ರದಾಯದ ವಿಮರ್ಶೆಯ ಅನುಕರಣೆಯಿಂದಾಗಿ ಕೆಲವು ಕುಂದುಕೊರತೆಗಳು ಹಾಗೆಯೇ ಕನ್ನಡಕ್ಕೂ ಬಂದವು.

ಸ್ವಾತಂತ್ರ್ಯ ಬಂದ ನಂತರದ ನವೋದಯ ವಿಮರ್ಶೆ ಸ್ವಾತಂತ್ರ್ಯ ಪೂರ್ವಕ್ಕಿಂತ ಹೆಚ್ಚು ಬದಲಾವಣೆಯೇನನ್ನೂ ಕಂಡಿಲ್ಲ. ಕಾರಣ, ವಿಮರ್ಶಕರು ಹಿಂದಿನವರೇ ಆಗಿದ್ದು ತಮ್ಮ ಬರವಣಿಗೆಯನ್ನು ಮುಂದುವರೆಸಿದರು. ಸ್ವಾತಂತ್ರ್ಯಾನಂತರ ಈ ದಶಕಗಳಲ್ಲಿ ಒಂದು ಕಡೆ

[1] ಡಾ. ಎಸ್.ಎಂ. ಹಿರೇಮಠ: 'ಕನ್ನಡ ಸಾಹಿತ್ಯ ಮೀಮಾಂಸೆ' ಅಶ್ವಿನಿ ಪ್ರಕಾಶನ, 1999.

ಪ್ರಗತಿಶೀಲರಿಂದಲೂ, ಸ್ವಲ್ಪ ಕಾಲದ ನಂತರ ನವ್ಯರಿಂದಲೂ ಪ್ರತಿಭಟನೆಗೆ ಒಳಗಾಗುತ್ತ ಹಿಂದೆ ಸರಿಯಬೇಕಾದ ಪರಿಸ್ಥಿತಿ ಎದುರಾದದ್ದು.

ಬೇಂದ್ರೆಯವರ 'ಸಾಹಿತ್ಯದ ವಿರಾಟ್ ಸ್ವರೂಪ' ಕಾವ್ಯ ವಿಮರ್ಶೆಯ ಬಗ್ಗೆ ಅವರ ಚಿಂತನೆಗಳನ್ನು ಪ್ರಸ್ತುತ ಪಡಿಸುತ್ತವೆ. ಕೃತಿಗಳ ವಿಶ್ಲೇಷಣೆ ಮತ್ತು ಮೌಲ್ಯಮಾಪನಗಳ ಕ್ಷೇತ್ರದಲ್ಲಿಯೂ ನವೋದಯ ವಿಮರ್ಶೆ ಮುಖ್ಯ ಕೊಡುಗೆ ನೀಡಿದೆ. ಅವುಗಳೆಂದರೆ ಎಸ್. ವಿ. ರಂಗಣ್ಣನವರ 'ಕಾಳಿದಾಸನ ನಾಟಕಗಳ ವಿಮರ್ಶೆ', ವಿ.ಸೀ ಅವರ 'ವಾಲ್ಮೀಕಿ ರಾಮಾಯಾಣ.'

ಸ್ವಾತಂತ್ರ್ಯೋತ್ತರ ನವೋದಯವಿಮರ್ಶೆಯ ಮಹತ್ತರ ಸಾಧನೆಗಳಲ್ಲಿ ಒಂದನ್ನು ಸ್ಪಷ್ಟವಾಗಿ ಗುರುತಿಸಬಹುದಾದದ್ದು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ರಚನೆ.

ನವೋದಯ ವಿಮರ್ಶೆ ಶ್ರೇಷ್ಠ ಕೃತಿಗಳನ್ನು ಕೊಟ್ಟಿರುವುದು ಹೆಚ್ಚಾಗಿ ಕಾವ್ಯ ಮೀಮಾಂಸೆ, ಸಂಸ್ಕೃತ ಸಾಹಿತ್ಯ ಮತ್ತು ಹಳೆಗನ್ನಡ, ನಡುಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ನಂತರ ನವೋದಯ ಸಾಹಿತ್ಯದ ಬಗ್ಗೆ ಮೌಲಿಕ ವಿಮರ್ಶೆ, ನವ್ಯರಿಂದ ಬರತೊಡಗಿದ ಮೇಲೆ ಸಹಜವಾಗಿಯೇ ಹೊಸದರ ಪ್ರಭಾವದ ಮುಂದೆ ಮಂಕಾಗತೊಡಗಿತು.

2.3. ನವ್ಯ ವಿಮರ್ಶೆ

ನವ್ಯ ವಿಮರ್ಶೆಗೆ ನವೋದಯ ಸಾಹಿತ್ಯದ ಲಕ್ಷಣ ನಿರೂಪಣೆ ಪ್ರಮುಖ ಅಂಶವಾಗಿತ್ತು. ಈ ಸಂದರ್ಭದ ವಿಮರ್ಶೆಯಲ್ಲಿ ಗುರುತಿಸಬಹುದಾದ ಲಕ್ಷಣಗಳಲ್ಲಿ ಕೆಲವು ಹೀಗಿವೆ.

"ನವ್ಯ ವಿಮರ್ಶೆ ಸಾಹಿತ್ಯ ವಿಮರ್ಶೆಗೆ ಶಾಸ್ತ್ರದ ಶಿಸ್ತು ಹಾಗೂ ಪ್ರಬುದ್ಧತೆಗಳನ್ನು ತಂದುಕೊಟ್ಟಿತು".1[1]

ವಿಮರ್ಶೆ ಬೌದ್ಧಿಕ ಮಟ್ಟದಲ್ಲಿ ಉನ್ನತಿಯನ್ನು ಪಡೆದುಕೊಂಡಿತು.

ಹಿಂದಿನ ಸಾಹಿತ್ಯವನ್ನು ಈಗಿನ ಓದುಗರಿಗೆ ತಲುಪಿಸಬೇಕೆಂಬ ಉದ್ದೇಶವೇ ಶ್ರೇಷ್ಠವೆಂಬ ಹಿಂದಿನ ಸಾಹಿತ್ಯ ಘಟ್ಟದ ಮಾನದಂಡವನ್ನು ಮೌಲ್ಯಮಾಪನಕ್ಕೆ ತೊಡಗಿಸಿದ ನವ್ಯ ವಿಮರ್ಶೆ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿತು.

ನವೋದಯ ಸಂದರ್ಭದ ವಿಮರ್ಶಕರಿಗೆ ಇದ್ದ ಹಳೆಗನ್ನಡ ಸಾಹಿತ್ಯದ ಮತ್ತು ಪರಂಪರೆಯ ಪ್ರಜ್ಞೆ, ನವ್ಯ ವಿಮರ್ಶಕರಲ್ಲಿ ಕಾಣದು. ನವೋದಯ ವಿಮರ್ಶಕರು ಪಂಪನಿಂದ

[1] ಕೀರ್ತಿನಾಥ ಕುರ್ತುಕೋಟಿ : ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ. ಸಂ: ವಿ.ಕೃ. ಗೋಕಾಕ್, ಐಬಿಎಚ್ ಪ್ರಕಾಶನ. 1980.

ಆರಂಭಿಸಿದರೆ ನವ್ಯರು ವಚನ ಸಾಹಿತ್ಯದಿಂದ ಈಚೆಗೆ ಓದಿಕೊಂಡವರೆನಿಸುತ್ತದೆ. ನವ್ಯರಿಗೆ ಪ್ರಾಚೀನ ಸಾಹಿತ್ಯವನ್ನು ಜನರಿಗೆ ಮುಟ್ಟಿಸುವ ಕಾರ್ಯ ಮುಖ್ಯ ಎನಿಸಲಿಲ್ಲ.

ನವ್ಯ ವಿಮರ್ಶೆ ವಚನಗಳನ್ನು ರೂಪನಿಷ್ಠ ವಿಮರ್ಶೆಗೆ ಒಳಪಡಿಸಿದ್ದು ವಿಶೇಷ.

ವಚನ ಸಾಹಿತ್ಯ ನವ್ಯ ವಿಮರ್ಶಕರಿಗೆ ಹತ್ತಿರವಾಗಲು ಕಾರಣ ಅದರ ಸರಳತೆ, ವಚನಕಾರರಿಗೆ, ನವ್ಯರಿಗೆ ಇದ್ದಂತ ಸಾಮ್ಯತೆ (ಭಾಷಿಕ ಸರಳತೆ) ಗಮನಾರ್ಹ. ವಚನಕಾರರಿಗೆ ಮುಕ್ತಿಗಿಂತ ಲೌಕಿಕ ಬದುಕೇ ಮುಖ್ಯವಾದದ್ದು. ಅಲೌಕಿಕತೆಗಿಂತ ವೈಚಾರಿಕತೆಯ ದೃಷ್ಟಿ, 'ಕನ್ನಡ'ವನ್ನು ವಚನಕಾರರು ಹೊಸತೆನಿಸುವಂತೆ ಸೃಜನಶೀಲರಾಗಿ ಬಳಸಿದ್ದು, ಸಂಸ್ಕೃತ ಬಂಧವನ್ನು ಮುಂದು ಆಡು ಮಾತಿನ ಮುಕ್ತ ಛಂದಸ್ಸನ್ನು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡಿದ್ದು ಇವೆಲ್ಲವೂ ನವ್ಯ ವಿಮರ್ಶೆಗೆ ಆಧಾರ ಸ್ತಂಭವಾಗಿ ಮತ್ತು ಹತ್ತಿರವಾಗಿ ಕಂಡವು.

ಸಮಗ್ರತೆಯೇ ನವ್ಯ ವಿಮರ್ಶೆಯ ಮುಖ್ಯಗುರಿ. ಈ ಯುಗವೇ ಸಮನ್ವಯದ ಯುಗವಾಗಿತ್ತು. ದೇಸೀ ಚಿಂತನೆಗಳಿಗೆ ಇಲ್ಲಿ ದೊರಕಿದ ಆದ್ಯತೆ ಇದರ ಬೆಳವಣಿಗೆಗೆ ಕಾರಣವಾಯಿತು.

ಗೋಪಾಲ ಕೃಷ್ಣ ಅಡಿಗರು "ಗುಣ-ಅವಗುಣಗಳ ವಿವೇಕವೇ ವಿಮರ್ಶೆ ಆದರೆ ಹಿಂದಿನ ಕಾವ್ಯ ಮಾರ್ಗದ ಸಂಪ್ರದಾಯದ ಗುಣ ವಿಶೇಷಗಳನ್ನು ಟೀಕಿಸುವ ಕ್ರಿಯೆ ವಿಮರ್ಶೆ ಆಗಬಾರದು." ಎಂದಿದ್ದಾರೆ.

ನವ್ಯ ವಿಮರ್ಶೆ ಕಾವ್ಯದ ಲಕ್ಷಣಗಳನ್ನು ಹೇಳಿದ್ದೇ ಅಲ್ಲದೆ. ಅದಕ್ಕೆ ತಕ್ಕ ಲಕ್ಷ್ಯ, ಗುರಿಗಳನ್ನು ಒದಗಿಸಿತು. ತನ್ನದಷ್ಟೇ ಅಲ್ಲದೆ ಹಿಂದಿನ ಮತ್ತು ಸಮಕಾಲೀನ ಸಾಹಿತ್ಯವನ್ನು ವಿಮರ್ಶೆಯ ಒರೆಗೆ ಹಚ್ಚಿತು.

ನವ್ಯ ವಿಮರ್ಶೆ ಚಾಲ್ತಿಗೆ ತಂದ ಮುಖ್ಯವಾದ ಪಾರಿಭಾಷಿಕ ಶಬ್ದ 'ಪ್ರಾಮಾಣಿಕತೆ', ಈ ಪ್ರಾಮಾಣಿಕತೆ ನೈತಿಕ ಧೈರ್ಯದ ಒಂದು ಬಹುಮುಖ್ಯ ಅಂಶ. ಏಕೆಂದರೆ ಕೃತಿನಿಷ್ಠ ವಿಮರ್ಶೆಯಿಂದ ಸ್ನೇಹಕ್ಕೆ ಸಂಚಕಾರ ಬಂದೀತೆಂಬ ಭಯ, ಅಧಿಕಾರದ ಭಯ, ಪ್ರತೀಕಾರದ ಭಯಗಳೆಲ್ಲಾ ವಿಮರ್ಶೆಯನ್ನು ಮಲಿನ ಮಾಡುತ್ತವೆ. ಹಾಗಾಗಿ ನೈತಿಕ ಧೈರ್ಯವಿದ್ದವರಿಗೆ ಮಾತ್ರ ಕೃತಿನಿಷ್ಠ ವಿಮರ್ಶೆ ಸಾಧ್ಯ ಎಂಬ ನಂಬಿಕೆಯಿಂದ ಒಂದು ಕೃತಿಯನ್ನು ಇನ್ನೊಂದಕ್ಕೆ ಹೋಲಿಸುತ್ತ ನಡೆಸುವ ವಿಮರ್ಶೆ ನಿಷ್ಪಕ್ಷವಾಗಿರದೇ ಪ್ರಾಮಾಣಿಕವಾಗಿರಬೇಕು.

1950ರ ಸುಮಾರಲ್ಲಿ ಪ್ರಾರಂಭವಾದ ಈ ಮಾರ್ಗ ಶುರುವಿನಲ್ಲಿ ಅತಿರೇಕದಿಂದ ಕೂಡ ಆಕ್ರಮಣಕಾರಿಯಾಗಿತ್ತು. ಆಗ ಸಾಹಿತ್ಯ ಕೃತಿಗಳ ತಾರತಮ್ಯವನ್ನು ಗಮನಿಸಿ ಶ್ರೇಷ್ಠತೆಯನ್ನು

ಗುರುತಿಸುವುದು ವಿಮರ್ಶೆಯ ಗುರಿಯಾಯಿತು. ಕಾವ್ಯಗುಣಕ್ಕೆ ಕೊಡುವಷ್ಟೇ ಮಹತ್ವವನ್ನು ಕವಿಯಿಂದ ಎಷ್ಟರ ಮಟ್ಟಿಗೆ ಋಣ ಸಂದಾಯವಾಗಿದೆ ಎಂಬ ವಿಷಯಕ್ಕೂ ಮಹತ್ವ ಕೊಟ್ಟ ಕುರ್ತುಕೋಟಿಯವರು "ಅಧ್ಯಾತ್ಮದ ಆತ್ಮವಂಚನೆ; ಪರವಂಚನೆಯ ಪ್ರಯತ್ನಗಳೇ ವಿಮರ್ಶೆ ಅಲ್ಲ. ಆಳವಾದ ಯೋಚನೆ, ಚಿಂತನೆ, ಸತತ ಪರಿಶ್ರಮದ ಕುರಿತು ಜೀವನವನ್ನು ಧ್ವನಿಸುವಂತಿರಬೇಕು" ಎಂದರು.

ವಿಚಾರ ಶುದ್ಧ ಸತ್ಯದ ದಾರಿಯನ್ನು ಬೆಳಗುವುದು ವಿಮರ್ಶೆಯ ಕರ್ತವ್ಯ. ಕಾವ್ಯ ವಿಚಾರಕ್ಕೂ ಭಾವದಷ್ಟೇ ಪ್ರಾಧಾನ್ಯ ಕೊಡುವ ಸಮತೂಕದ ಕೂಲಂಕಷತೆಯ ಅನುಭವದ ಪದರು ಪದರುಗಳನ್ನು ತೆರೆದು ತೋರುವ ಅಂತರಂಗದ ಸಮಗ್ರ ಕಾರ್ಯ ನವ್ಯ ವಿಮರ್ಶೆಯಲ್ಲಿ ನಡೆಯಿತು.

ಒಂದು ಕಾವ್ಯ ಅಥವಾ ಗದ್ಯದಲ್ಲಿರುವ ಅನುಭವ ಮಧುರ ಹೇಗೋ ಹಾಗೆ ಕಟು; ಸುಕುಮಾರ ಹೇಗೋ ಹಾಗೆ ಭೀಕರ ಎಂದು ಕವಿತೆಯ ಭಾವ ಸಂಕೀರ್ಣತೆಯನ್ನು ಬಿಡಿಸಿ ತೋರಿಸುವ ಕೆಲಸ ನಡೆಯಿತು.

ವಿಮರ್ಶೆಯ ಮೊದಲ ಕಾರ್ಯ ಕೃತಿಯ ಆಮೂಲಾಗ್ರ ಅಭ್ಯಾಸ. ಆ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ/ತಾಳ್ಮೆ ಅತ್ಯಗತ್ಯ. ವಿಮರ್ಶಾ ಕಾರ್ಯ "ಸರಿಯಾಗಿ ನಡೆಯಬೇಕಾದರೆ ಕೃತಿಯೊಂದು ಸ್ವತಂತ್ರ ವಸ್ತು ಎಂಬ ಅರಿವು, ಬರೆದವನೊಡನೆ ತನಗಿರಬಹುದಾದ ಭಾವಾತ್ಮಕ, ಬೌದ್ಧಿಕ ಸಂಬಂಧಗಳಿಂದ ಸಂಪೂರ್ಣ ವಿಮುಕ್ತಿಯೂ ಅವಶ್ಯ"[2] ಎಂದು ಅಡಿಗರು ನವ್ಯ ಸಂದರ್ಭದ ಕೃತಿನಿಷ್ಠ ವಿಮರ್ಶೆ ಲಕ್ಷಣವನ್ನು ಸೂಚಿಸುತ್ತಾರೆ.

ಕಾವ್ಯಗುಣಕ್ಕೆ ಕೊಡುವಷ್ಟೇ ಮಹತ್ವವನ್ನು ಕವಿಯ ಪ್ರತಿಭೆಗೆ ಮಹತ್ವ ಕೊಟ್ಟ ಕುರ್ತುಕೋಟಿಯವರು ಉಳಿದ ನವ್ಯ ವಿಮರ್ಶಕರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ವಸಾಹತುಶಾಹಿಯ ಪರಿಣಾಮವಾಗಿ ನಮ್ಮ ಪರಂಪರೆಗೆ ಬಲವಾದ ಆಘಾತ ಒದಗಿರುವ ಕಾರಣದಿಂದ ಸಂಪ್ರದಾಯದ ಅವನತಿ ಎಂದಿಗಿಂತ ಹೆಚ್ಚಾಗಿದೆ ಎಂಬ ಹಿನ್ನಲೆಯಲ್ಲಿ ಸಾಹಿತ್ಯ ವಿಮರ್ಶೆಯ ಬೆಳವಣಿಗೆಗೆ ಸಹಜ ಹಿನ್ನಲೆಯಾಗಬಲ್ಲ ಸಂಪ್ರದಾಯದ ಪುನರಾರ್ಜನೆಗೆ ಅವರು ವಿಶೇಷ ಮಹತ್ವ ನೀಡಿದರು.

ನವ್ಯ ವಿಮರ್ಶೆ ಸಾಹಿತ್ಯ ವಿಮರ್ಶೆಗೆ ಶಾಸ್ತ್ರದ ಶಿಸ್ತು ಹಾಗೂ ಪ್ರಬುದ್ಧತೆಯನ್ನು ತಂದುಕೊಟ್ಟಿತು. ಸಾಹಿತ್ಯದ ಗ್ರಹಿಕೆಗೆ ಭಾಷೆಯೇ ಮೂಲಾಧಾರ. ಭಾಷೆಯಲ್ಲಿ ಶಬ್ದ ಮತ್ತು

---

[2] ಎಚ್. ಶಶಿಕಲಾ : 'ಏಕ–ಅನೇಕ', ಸಿವಿಜಿ. ಪಬ್ಲಿಕೇಶನ್.

ಅರ್ಥಗಳು ಪರಸ್ಪರ ಒಂದಾದಾಗ ಆ ಸಾಹಿತ್ಯ ಕೃತಿ ಜೀವಂತಿಕೆಯನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಶಬ್ದಾರ್ಥಗಳ ಯಶಸ್ಸು ನವ್ಯ ವಿಮರ್ಶೆಯ ಮುಖ್ಯ ಮಾನದಂಡಗಳಲ್ಲಿ ಒಂದಾಯಿತು.

ಸಾಹಿತ್ಯ ಕೃತಿಯನ್ನು ಅರ್ಥಮಾಡಿಕೊಳ್ಳಲು ಬೇಕಾದ ಕನಿಷ್ಠ ಮಿತಿಯ ಅನುಕೂಲತೆಗಳನ್ನು ಒದಗಿಸಿ ರಸಾನುಭವದ ಸಂಪೂರ್ಣ ಹೊಣೆಗಾರಿಕೆಯನ್ನು ಓದುಗನಿಗೇ ಬಿಟ್ಟುಕೊಡುವ 'ಭಾರತೀಯ ವಿಧಾನ'ವಾಗಿ ಮಾಡಿಕೊಳ್ಳುವ ಆಶಯ ನವ್ಯ ವಿಮರ್ಶೆಯದು.

ಈ ನಿಟ್ಟಿನಲ್ಲಿ ನವ್ಯ ಸಾಹಿತ್ಯದ ಅಸ್ತಿತ್ವವಾದಿ ಕಾಳಜಿಗಳನ್ನು ಕುರಿತ ವಿಮರ್ಶೆ ವ್ಯಾಖ್ಯಾನಗಳಿಗೆ ಚಾಲನೆ ಕೊಟ್ಟ ಮೊದಲ ಲೇಖನ ಎಂಜಿಕೆ* ಅವರದ್ದು ಅವರು ಒಂದು ಕೃತಿಯ ವಿವಿಧ ಆಯಾಮಗಳನ್ನು ಗುರುತಿಸಿ ಓದುಗರು ಮತ್ತೆ ಮತ್ತೆ ಆ ಕೃತಿಗೆ ಮರಳುವಂತೆ ಮಾಡುವುದು ಅರ್ಥಪೂರ್ಣ ವಿಮರ್ಶೆಯ ಬಹುಮುಖ್ಯ ಕಾರ್ಯಗಳಲ್ಲಿ ಒಂದು ಎಂದು ಹೇಳಿದರು.

ಇಂಗ್ಲೀಷ್ – ಕನ್ನಡ ಭಾಷೆಗಳಲ್ಲಿರುವ ಎಂ.ಜಿ.ಕೆ. ಅವರ ವಿಮರ್ಶೆ ಬ್ರಿಟಿಷ್ ನವ್ಯ ವಿಮರ್ಶೆಯ ಪ್ರಭಾವದಿಂದ ಮೂಡಿಬಂದ ಕನ್ನಡ ನವ್ಯವಿಮರ್ಶೆಯ ಪ್ರಾತಿನಿಧಿಕ ವಿಮರ್ಶೆ.

ನವ್ಯ ಎಂದರೆ ಹೊಸಮಾದರಿ. ಇದರಲ್ಲಿ ಎಲ್ಲವೂ ಹೊಸತು. ಭಾಷೆ, ಬಂಧ, ವಿವೇಚನೆಯ ರೀತಿ. ನವ್ಯತೆ ಒಂದು ತಂತ್ರ. ಅದನ್ನು ಯಾರು ಬೇಕಾದರೂ ಬಳಸಬಹುದು ಎಂಬ ಮಾತೊಂದನ್ನು ವಿ.ಕೃ. ಗೋಕಾಕ್ ಹೇಳುತ್ತಾರೆ.

ಸಾಹಿತ್ಯದ ತತ್ವ, ಸತ್ವಗಳನ್ನು ಗುರುತಿಸಿ ಆ ಅಳತೆಗೋಲಿನಿಂದ ಸಾಹಿತ್ಯಕೃತಿಗಳ ವಸ್ತುನಿಷ್ಠ ಮೌಲೀಕರಣದಿಂದಾಗಿ ನವ್ಯ ವಿಮರ್ಶೆ ಸರ್ವಗ್ರಾಹ್ಯವಾಯಿತು. ನವ್ಯ ವಿಮರ್ಶೆ ಸಾಂಸ್ಕೃತಿಕ, ಸಾಮಾಜಿಕ, ಸಾಹಿತ್ಯಿಕ ಶ್ರದ್ಧೆಯನ್ನು, ನಿರೂಪಿಸುವುದರಲ್ಲಿ ಮಗ್ನವಾಯಿತು. ನವಮಾನವತಾ ದೃಷ್ಟಿ, ವ್ಯಕ್ತಿಯ ವ್ಯಕ್ತಿತ್ವದ ಅನನ್ಯತೆ, ಆಳವಾದ ತಿಳುವಳಿಕೆ, ಹೃದಯದ ಬೆಳವಣಿಗೆ, ಬುದ್ಧಿ ಹೃದಯಗಳ ದಾಂಪತ್ಯ ವಿಶಾಲವಾದ ಅಂತಃ ಪ್ರಜ್ಞೆ ಮುಂತಾದುವು ನವ್ಯವಿಮರ್ಶೆಯ ಮೌಲ್ಯಗಳಾಗಿದ್ದವು.

ನವ್ಯವಿಮರ್ಶೆ ಒಂದು ರೀತಿಯಲ್ಲಿ ಪಾಶ್ಚಾತ್ಯ ವಿಮರ್ಶಾ ತತ್ವಗಳನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪುನರ್ನಿರ್ಮಿಸಿ ಕನ್ನಡದ ವಿಮರ್ಶೆಗೆ ಹೊಸದಾರಿ ಕಲ್ಪಿಸಿ ಕೊಟ್ಟಿತು. 'ಕೃತಿ'ಯ ಆಚೆಗಿನ ಯಾವುದೇ ಸಂಗತಿಯನ್ನು ಪ್ರತ್ಯೇಕವಾಗಿ ಗಮನಿಸದೆ, ನೇರವಾಗಿ ಕೃತಿಯಿಂದಲೇ ಮೂಡಿ ಬರುವ ವಿಷಯಗಳನ್ನು ಮಾತ್ರ ಗಮನಿಸಬೇಕು ಎನ್ನುವುದು ನವ್ಯ ವಿಮರ್ಶೆಯ ಮೂಲನೆಲೆ.

---

* ಎಂ.ಜಿ. ಕೃಷ್ಣಮೂರ್ತಿ.

ಚಂದ, ಚಮತ್ಕಾರಗಳನ್ನು ಪ್ರಯತ್ನಪೂರ್ವಕವಾಗಿ ದೂರವಿಟ್ಟು, ಹೇಳಬೇಕಾದುದನ್ನು ನೇರವಾಗಿ ಹೇಳುವ ರೀತಿ ನವ್ಯ ವಿಮರ್ಶೆಯದು. ಕೃತಿಕಾರನ ಅಸಲೀ ಅನುಭವ, ಆತ್ಮಪರಿಶೀಲನ, ವೈಚಾರಿಕ ವಿಶ್ಲೇಷಣೆಗೆ ಗುರಿ ಮಾಡಿ ನೋಡುವ ಸ್ವತಂತ್ರ ಧೋರಣೆಗಳು ಸಾಹಿತ್ಯದ ಎಲ್ಲಾ ಪ್ರಕಾರಗಳಾದ ಕತೆ, ಕಾದಂಬರಿ, ಕಾವ್ಯಗಳನ್ನು ವಿಮರ್ಶೆಗೆ ಒಳಪಡಿಸಿದವು.

ಎಫ್. ಆರ್. ಲೆವಿಸ್‌ನ "ಅನುಭವ-ಅಭಿವ್ಯಕ್ತಿಯ ಸವಾಲನ್ನು ಎದುರಿಸುವಲ್ಲಿ ಕೃತಿಗಳಿಸುವ ಸೋಲು-ಗೆಲುವುಗಳನ್ನು ಚರ್ಚಿಸುವ ಹೊಣೆಯನ್ನು ಹೊತ್ತ ವಿಮರ್ಶಕನಲ್ಲಿ ಸಜ್ಜನಿಕೆಗಿಂತ ಸತ್ಯನಿಷ್ಠುರತೆ ಹೆಚ್ಚು ಬೆಲೆಯುಳ್ಳ ಗುಣವಾಗುತ್ತದೆ"[5] ಎಂಬ ಧೋರಣೆ ನವ್ಯ ವಿಮರ್ಶೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ವಿಮರ್ಶೆಯು ಗತಿಶೀಲ ಮಾರ್ಗದಲ್ಲಿ ಚಲಿಸಿ ಹೊಸ ಆಯಾಮಗಳನ್ನು ಶೋಧಿಸಿ, ಸಾಧಿಸುವ ಕಡೆ ಮುನ್ನಡೆಯಬೇಕು. ಅಭಿವ್ಯಕ್ತಿಯ ಹೊಸ ಹೊಸ ಸಾಧ್ಯತೆಗಳನ್ನು ಅಳವಡಿಸಿಕೊಳ್ಳಬೇಕು. ಇಲ್ಲದೆ ಹೋದರೆ ವಿಮರ್ಶೆ ಪರಂಪರೆ ಜಡತ್ವಗೊಳ್ಳುತ್ತದೆ ಎಂಬುದನ್ನು ಅರಿತಿದ್ದರಿಂದ ನವ್ಯ ವಿಮರ್ಶೆ ಸುಮಾತು ವರ್ಷಗಳ ಕಾಲ ಸಮೃದ್ಧವಾಗಿ ಬೆಳೆಯಿತು. ನವೋದಯ ಮತ್ತು ಪ್ರಗತಿಶೀಲ ಸಂದರ್ಭಗಳಲ್ಲಿ ಉಂಟಾದ ಸ್ಥಗಿತತೆಯನ್ನು ನಿವಾರಿಸಿಕೊಂಡು ಸೌಹಾರ್ದಯುತವಾಗಿ ತನ್ನ ಅಸ್ತಿತ್ವ ಪಡೆದುಕೊಂಡಿತು.

ಅನುಭವವು ಕೃತಿಯ ಮೂಲಕ ಅರಿವಿಗೆ ಸೇರಿ, ಮಾಗುವಿಕೆಯ ಕ್ರಿಯೆಯೊಂದಿಗೆ ಚಿತ್ರಿತಗೊಳ್ಳಬೇಕು ಎಂಬುದು ನವ್ಯ ವಿಮರ್ಶೆಯ ನಿರ್ವಚನ.

ನಾಡು-ನುಡಿಗಳ ಏಳಿಗೆಗೆ ಬರಹಗಾರರ ಜೊತೆಗೆ ವಿಮರ್ಶಕರು ಸಾಂಸ್ಕೃತಿಕ, ರಾಜಕೀಯ ಮಾರ್ಗವನ್ನು ನಿರ್ಮಿಸಿಕೊಳ್ಳಬೇಕಲ್ಲದೆ. ಸಾಮಾಜಿಕ ಪ್ರಗತಿಗಾಗಿಯೂ ಜಾಗರೂಕರಾಗಿರ ಬೇಕಾದುದು ಸಾಹಿತ್ಯ ವಿಮರ್ಶೆಯ ಜವಾಬ್ದಾರಿಗಳಲ್ಲೊಂದು. ಈ ನವ್ಯ ವಿಮರ್ಶೆಯ ಒಟ್ಟು ವಿಮರ್ಶಾ ಪ್ರಜ್ಞೆಯು ಜೀವನವನ್ನು ನಡೆಸಲು ಬದಲಾವಣೆಗಳಿಂದ ಬೆಳೆಯಲು ವಿಮರ್ಶನಾದವನು ಹೋರಾಟದ ಮುಂಚೂಣಿಯಲ್ಲಿರಬೇಕು. ಸಾಹಿತ್ಯ ಮತ್ತು ಜೀವನಗಳೆರಡರಲ್ಲೂ ಬಿರುಕಿಲ್ಲದಂತೆ ಧನಾತ್ಮಕ ಮನೋಧರ್ಮ ಹೊಂದಿರಬೇಕೆಂಬುದನ್ನು ಸೂಚಿಸುತ್ತದೆ. ಬೆಳವಣಿಗೆಗಳ ಅದರಲ್ಲಿಯೂ ವಿಶೇಷವಾಗಿ ಸಾಹಿತ್ಯಿಕ ಬೆಳವಣಿಗೆಯನ್ನು ಒಳಗೊಂಡು ವ್ಯಾಪಕವಾದ ವಿಚಾರ ಪರಿಕಲ್ಪನೆಗಳ ಬಗೆಗೆ ತನಗಿದ್ದ ಪರಿಚಯವನ್ನು ಪ್ರಕಟಿಸಿತು. ವೈಯಕ್ತಿಕವಾದವೇ ನವ್ಯ ಸಾಹಿತ್ಯ ವಿಮರ್ಶೆಯ ಹಿಂದಿರುವ ಮುಖ್ಯ ವಿಚಾರ. ಆಧುನಿಕ ಮನಸ್ಸಿನ

---

[5] ಸಿ. ಎನ್. ರಾಮಚಂದ್ರನ್: 'ಪರಂಪರೆ ಪ್ರತಿರೋಧ', ಸಂವಾದ , 2005.

ಮೂಲಗುಣ ಅದರ ಆತ್ಮ ಪ್ರಜ್ಞೆ. ಹಾಗಾಗಿ ನವ್ಯ ವಿಮರ್ಶೆಯ ಪ್ರಧಾನ ಆಸಕ್ತಿ ವೈಯಕ್ತಿಕ ಮೌಲ್ಯ, ಅದರ ಅವಿರತ ಶೋಧನೆ ಮತ್ತು ಅದರ ಮೌಲ್ಯ ಮಾಪನವೇ ಆಗಿದೆ. ಅಲ್ಲಿ ಸಾಮಾಜಿಕ ಸಮಸ್ಯೆಗಿಂತ ವೈಯಕ್ತಿಕ ಸಮಸ್ಯೆಗಳು ಮುಖ್ಯವಾಗುತ್ತವೆ.

ನವ್ಯ ವಿಮರ್ಶಕರದು ಬುದ್ಧಿ ನಿಷ್ಠತೆಗೆ ಒಲವು. ಸಾಹಿತ್ಯ ಕೃತಿಯಲ್ಲಿ ಅಸಂಗತವಾದ, ಪ್ರತಿಮಾವಾದ, ಸಂಕೇತವಾದ, ಕಾಫ್ಕ, ಸಾರ್ತ್ರ, ಕಾಮು, ಫ್ರಾಯ್ಡ್‌ರಂತ ವ್ಯಕ್ತಿತ್ವಗಳು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕಾಣಿಸಿಕೊಂಡು ತನ್ಮೂಲಕ ವಿಮರ್ಶೆಯ ಮೇಲೆ ತೀವ್ರವಾದ ಪ್ರಭಾವ ಬೀರಿತು.

ಕೃತಿ ಪ್ರತೀಕಾತ್ಮಕ, ಅದೊಂದು ಶಾಬ್ದಿಕ ಶಿಲ್ಪ, ಎಂದು ವಸ್ತುವಿಗಿಂತ ಅದರ ನಿರ್ವಹಣೆಯ ವಿಚಾರಕ್ಕೆ ಹೆಚ್ಚು ಒತ್ತು ನೀಡಿದ ನವ್ಯ ವಿಮರ್ಶಕರು ಕೃತಿ ವಿಮರ್ಶೆ ಮಾಡಿದರು. ಉದಾಹರಣೆಗೆ: 'ಅಳಿದ ಮೇಲೆ' ಕಾದಂಬರಿಯ ಚರ್ಚೆಗಳು, ಯಶೋಧರ ಚರಿತ್ರೆಯ ವಿಮರ್ಶೆ ಮುಂತಾದುವು.

ನವ್ಯ ವಿಮರ್ಶಕರು ಕಾವ್ಯದ ಮೀಮಾಂಸೆ ಮೂಲಕ ಉಳಿದ ಪ್ರಕಾರಗಳ ಕುರಿತು ಬರೆದರು. ಹೀಗಾಗಿ ನವ್ಯ ನಿಲುವಿಗೆ ಬಹಳ ವಿರೋಧಗಳು ಎದುರಾದವು. ಇವುಗಳ ನಡುವೆಯೂ ನವ್ಯ ವಿಮರ್ಶೆಯ ಪರಿಕರಗಳು ಇಂದಿಗೂ ಬೇರೆ ಬಗೆಯಲ್ಲಿ ಬಳಕೆಯಾಗುತ್ತಿವೆ. ನವ್ಯ ವಿಮರ್ಶೆ/ರೂಪನಿಷ್ಠ ವಿಮರ್ಶೆ ಪಠ್ಯದ ಸ್ವಾಯತ್ತತೆಯನ್ನು ಎತ್ತಿ ಹಿಡಿಯಿತು. ಇದರಿಂದಾಗಿ ವಿಮರ್ಶೆಗೆ ಒಂದು ಸಮಕಾಲೀನತೆಯ ಜೊತೆಗೆ ಸಾರ್ವಕಾಲಿಕತೆಯನ್ನು ತಂದುಕೊಟ್ಟಿತು.

ನವ್ಯ ವಿಮರ್ಶೆ ಮುಖ್ಯವಾಗಿ ಕೃತಿ ಕೇಂದ್ರವಾಗಿ ಅದರ ಆಕೃತಿ, ಬಂಧ, ಶಿಲ್ಪ ಮೌಲ್ಯದ ಕುರಿತು ಚರ್ಚಿಸಿತು.

ನವ್ಯ ವಿಮರ್ಶೆ ಸಾಹಿತ್ಯವನ್ನು ಶುದ್ಧ ಸಾಹಿತ್ಯವಾಗಿ ನೋಡುವುದನ್ನು ಪುರಸ್ಕರಿಸಿತು. ಗಂಭೀರತೆ ಕಠಿಣತೆ, ಸಾಂಕೇತಿಕತೆ, ಬೌದ್ಧಿಕ ಏಕಾಂತತೆ, ಅದರ ಗುಣಲಕ್ಷಣವಾಯಿತು. ಜೊತೆಗೆ ನವ್ಯೋತ್ತರ ಬೆಳವಣಿಗೆ, ದಲಿತ–ಬಂಡಾಯ ಚಳುವಳಿಗಳು ಮತ್ತು ಸಾಮಾಜಿಕ ನಿಷ್ಠ ಆಲೋಚನಾ ಕ್ರಮಗಳು ಆರಂಭಗೊಂಡು ನವ್ಯ ವಿಮರ್ಶೆ ಸಮಕಾಲೀನ ವಿಮರ್ಶೆಯ ರೂಪ ಸ್ವರೂಪಗಳಲ್ಲಿ ಹೊಸ ನೆಲೆ ಕಂಡುಕೊಂಡಿತು.

2.4. ನವ್ಯೋತ್ತರ ವಿಮರ್ಶೆ

ವಿಮರ್ಶಕರು ದೇಸೀ ವಿಮರ್ಶೆಯ ಕಡೆ ಮುಖ ಮಾಡಿದರು. ನವ್ಯ ವಿಮರ್ಶೆ ಪಾಶ್ಚಿಮಾತ್ಯ ವಿಮರ್ಶೆಯ ಅಂಧಾನುಕರಣೆಗೆ ಅಲ್ಲದಿದ್ದರೂ, ಕನ್ನಡ ತನ್ನ ಸ್ವಾವಲಂಬಿತನವನ್ನು ಬಿಟ್ಟು ಕೊಡದಿದ್ದರು, ತನ್ನದೇ ಆದ ದೇಶೀಯ ಸಾಹಿತ್ಯ ವಿಮರ್ಶೆಯನ್ನು

ರೂಢಿಸಿಕೊಳ್ಳಬಾರದೇಕೆ? ಎಂಬ ಚಿಂತನೆಯ ಆಧಾರದ ಮೇಲೆ ನವ್ಯೋತ್ತರ ವಿಮರ್ಶೆ ರೂಪಿತವಾಯಿತು.

ತಮ್ಮ ಪಾಂಡಿತ್ಯ, ಒಳನೋಟಗಳಿಂದ ಸಾಹಿತ್ಯ ವಿಮರ್ಶೆಗೆ ದೇಸೀ ನೆಲೆಯನ್ನು ಕಲ್ಪಿಸಿದ ಕುರ್ತುಕೋಟಿಯವರು ಕನ್ನಡ ವಿಮರ್ಶೆಯನ್ನು ಬೆಳೆಸಿದರು. ಪ್ರಾಚೀನ ಸಾಹಿತ್ಯವನ್ನು ಸಮಕಾಲೀನ ಸಾಹಿತ್ಯದೊಂದಿಗೆ, ಮರು ವಿಮರ್ಶೆ ಅಡಿಯಲ್ಲಿ ತಂದರು.

ಪರಂಪರೆಯ ಬಗೆಗೆ ಪ್ರೀತಿ, ಪರಂಪರೆಯನ್ನು ಹೊಸದಾಗಿ ನೋಡಬಹುದಾದ ಸಾಧ್ಯತೆ ಒದಗಿಬಂತು.

ಸಾಹಿತ್ಯವನ್ನು ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಯಾಗಿ ಕಾಣುವ ಮನೋಭಾವ ಕಾಣಿಸಿತು. ಇದರಿಂದಾಗಿ ಕೃತಿಗಳ ವರ್ಣನೆ ವಿವರಣೆ; ರಸಗ್ರಹಣಗಳಿಗೆ ವಿಮರ್ಶೆಯನ್ನು ಮೀಸಲಿಡದೆ ಸಮರ್ಥ ಒಳನೋಟಗಳನ್ನು ನೀಡುತ್ತ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ಹೇಳುವುದರ ಕಡೆಗೆ ವಿಮರ್ಶೆ ಸಾಗಿತು.

ಪರಂಪರೆಯ ಅರಿವು, ಚಾರಿತ್ರಿಕ ಪ್ರಜ್ಞೆ, ವರ್ತಮಾನದ ಎಚ್ಚರ ಹಾಗೂ ಮೀಮಾಂಸೆ – ಇವೆಲ್ಲವೂ ಒಂದು ಹದದಲ್ಲಿ ಬೆರೆತವು. ಇಲ್ಲಿ ವಾಗ್ವಾದಗಳನ್ನು ಸೃಷ್ಟಿಸುವ ಪರಿಕಲ್ಪನೆಗಳು ಕಾಣದಿದ್ದರು, ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟಿತು. ಆದರೆ ಇಂತಹ ವಾಗ್ವಾದಗಳಿಗೆ ಬೇಕಾದ ಭೂಮಿಕೆ ಸಿದ್ದ ಪಡಿಸುವ ಅನೇಕ ಉಪಯುಕ್ತ ಒಳನೋಟಗಳು ಈ ವಿಮರ್ಶೆಯಲ್ಲಿ ಸಾಕಷ್ಟು ಬಂದವು. ನವ್ಯೋತ್ತರ ವಿಮರ್ಶೆ ತಕ್ಷಣ ತನ್ನ ಪ್ರಖರತೆಯಿಂದ ಕಣ್ ಸೆಳೆಯದಿದ್ದರೂ, ಚಿಂತನೆಗೆ ಸಮೃದ್ಧ ಆಹಾರ ಒದಗಿಸಿತು.

ಈ ಮಾರ್ಗ ವಿಮರ್ಶೆಯ ದೃಷ್ಟಿಯಿಂದ ಕುತೂಹಲಕರವಾದ ಪ್ರಶ್ನೆ ಕೇಳುವುದರ ಮೂಲಕ ವಿಮರ್ಶೆಗೆ ಹೊಸ ದೃಷ್ಟಿ ಕೋನ ಕೊಟ್ಟಿತು.

'ಪಂಪ–ರನ್ನಾದಿ ಕವಿಗಳು ಅಹಿಂಸೆಯೇ ಅಸ್ತಿಭಾರವಾದ ಜೈನಧರ್ಮವನ್ನು ಒಪ್ಪಿಕೊಂಡೂ ವೀರ ಕಾವ್ಯಗಳನ್ನು ಬರೆದದ್ದು ಯಾಕೆ?' ಎಂಬ ಪ್ರಶ್ನೆಗಳು, ಪರಂಪರೆ ಮತ್ತು ಸೃಜನಶೀಲ ಪ್ರತಿಭೆ – ಚಾರಿತ್ರಿಕ ಒತ್ತಡ, ಒಂದು ಸಾಹಿತ್ಯ ಕೃತಿಯ ಆಕೃತಿಯನ್ನು ರೂಪಿಸುವುದನ್ನು ಈ ವಿಮರ್ಶೆ ವಿವರಿಸಿದವು.

ಕೃತಿಯನ್ನು ರೂಪಿಸುವಾಗ ತೊಡಗಿಸಿಕೊಳ್ಳುವ ಕ್ರಮದ ಬಗ್ಗೆಯೂ ಆಸಕ್ತಿ ವಹಿಸುವುದರಿಂದ ಸಹಜವಾಗಿಯೇ ಅಪರೂಪವೆನ್ನಿಸುವಂತ ಕೆಲವು ಸೂಕ್ಷ್ಮ ಒಳನೋಟಗಳು ಈ ಹಂತದ ವಿಮರ್ಶೆಯಲ್ಲಿ ಕಾಣಿಸುತ್ತವೆ. ವಚನ ಸಾಹಿತ್ಯದ ವಿಚಾರ ಕ್ರಾಂತಿ, ಪ್ರಸ್ತುತತೆ, ಕಾವ್ಯ ತತ್ವ

ದಲಿತ ಪ್ರಜ್ಞೆ ದೇವಸ್ಥಾನ ನಿರಾಕರಣೆ, ಪ್ರಭುತ್ವ ವಿರೋಧಿ ನಿಲುವು, ಹೀಗೆ ಹಲುವ ನೆಲೆಗಳಿಂದ ಸಾಹಿತ್ಯವನ್ನು ವಿಮರ್ಶಿಸುವ ಕಾರ್ಯ ಈ ಹಂತದಲ್ಲಿ ನಡೆಯಿತು.

ಒಬ್ಬ-ಮತ್ತೊಬ್ಬನಿಗಿಂತ, ಒಂದು ಸಂಸ್ಕೃತಿ – ಇನ್ನೊಂದು ಸಂಸ್ಕೃತಿಗಿಂತ ಭಿನ್ನವಾಗಿರಬಹುದು. ಆದರೆ ಒಂದು ಇನ್ನೊಂದಕ್ಕಿಂತ ಯಾಕೆ ಶ್ರೇಷ್ಠ ಅಥವಾ ಕನಿಷ್ಟ ಎಂದು ಪರಿಗಣಿತವಾಗಬೇಕು ಎಂಬ ಪ್ರಶ್ನೆಯೇ ನವ್ಯೋತ್ತರ ವಿಮರ್ಶೆಯ ನೈತಕ ನೆಲೆಯನ್ನು ಸೂಚಿಸುತ್ತದೆ.

ಒಂದೇ ಒಂದು ಕೇಂದ್ರದಿಂದ ನಿರ್ದೇಶಿತವಾಗುವ ಚಟುವಟಿಕೆಗಳು ಬಹುಬೇಗ ಜಡಗೊಂಡು, ಏಕತಾನತೆ, ಪುನರಾವರ್ತನೆ, ಕ್ರಿಯಾಹೀನತೆಗೆ ಎಡೆ ಮಾಡಿಕೊಡುತ್ತದೆ ಎಂಬುದನ್ನೂ ನವ್ಯೋತ್ತರ ವಿಮರ್ಶೆ ಗಮನಿಸುತ್ತದೆ. ಕೃತಿಯ ಅರ್ಥವನ್ನೆಲ್ಲಾ ಬಗೆದು ಬಿಡುತ್ತೇನೆ ಎಂಬ ಬುದ್ಧಿವಂತ ವಿಮರ್ಶಕರ 'ದಕ್ಷ' ಓದಿಗಿಂತ ಪ್ರತಿಯೊಬ್ಬ ಸಹೃದಯ ತನ್ನ ಸಂದರ್ಭದಲ್ಲಿ ನಿಂತ ತನ್ನ ಅನುಭವವನ್ನು ಪರಿಶೀಲಿಸಿಕೊಳ್ಳುವ ಅದನ್ನು ಇತರರೊಂದಿಗೆ ಹಂಚಿಕೊಳ್ಳುವ ಬಗೆ ಮುಖ್ಯವಾಗುತ್ತದೆ. ಸಹೃದಯ ಮತ್ತು ಕೃತಿಗಳ ಅರ್ಥಪೂರ್ಣ ಮುಖಾಮುಖಿಗೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸುವುದಷ್ಟೇ ವಿಮರ್ಶೆಯ ಕಾರ್ಯವಾಗಬೇಕೆಂಬ ನಿಲುವೂ ಗಮನಾರ್ಹ.

ನವ್ಯೋತ್ತರದಲ್ಲಿ ದಲಿತ ವಿಮರ್ಶೆ ಇತ್ತೀಚಿನ ಬೆಳವಣಿಗೆಯಾಗಿದೆ. ದಕ್ಷಿಣ ಆಫ್ರಿಕಾದ ಕಪ್ಪುಸಾಹಿತ್ಯ ವಿಶ್ವದಾದ್ಯಂತ ಹೊಸ ಅಲೆಗಳನ್ನು ಎಬ್ಬಿಸಿತು. ಭಾರತದ ಸಂದರ್ಭದಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳುವಳಿ, ಕೇರಳದ ಪೆರಿಯಾರ್ ಚಳುವಳಿ ಹಾಗೂ ಕರ್ನಾಟಕದ ದಲಿತ-ಬಂಡಾಯ ಚಳುವಳಿಗಳು ದಲಿತವಾದವನ್ನು ಮಂಡಿಸಿ ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಜನಸಮುದಾಯದ ಅನುಭವಗಳನ್ನು ಮೊದಲ ಬಾರಿಗೆ ತೆಗೆದಿಟ್ಟವು.

ದಲಿತ ವಿಮರ್ಶೆ ಇತ್ತೀಚೆಗೆ ತೀವ್ರತರವಾಗಿ ಬೆಳೆಯತೊಡಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇದನ್ನು ಗುರುತಿಸಲು ಸಾಧ್ಯವಾಗಿದೆ. ಅಮೆರಿಕಾದ ನೀಗ್ರೋಗಳು, ಆಫ್ರಿಕಾದ ಕಪ್ಪು ಜನರು, ಜಪಾನಿನ ಬುರಾಕು ಮೀನ್‌ಗಳು, ಭಾರತೀಯ ದಲಿತರು ಅನುಭವಿಸುವ ನೋವಿನ ಅಲೆಗಳು ಒಂದೇ ರೀತಿಯಾಗಿವೆ.

ಕಟ್ಟುವ ಕೆಲಸ ಮುಖ್ಯ, ಕೆಡಹುವ ಕೆಲಸ ಕನಸಲ್ಲೂ ಇಣುಕಬಾರದು. ಕಟ್ಟುವ ಕೆಲಸದಲ್ಲಿ ಶ್ರಮ, ಸಂಕಟ, ಸಂತೋಷ, ಉತ್ಸಾಹ, ವಿಷಾದ ಎಲ್ಲವೂ ತಮ್ಮ ಅನುಭವದ ಭಾವಗಳು. ಇಂಥ ಭಾವನೆ ಕನ್ನಡದ ಸಂದರ್ಭಕ್ಕೆ ಮುಖ್ಯವಾಗಿದ್ದಿದೂ ಹೌದು, ಏಕೆಂದರೆ, ಈ ಹೊತ್ತಿಗಾಗಲೇ

ಕೆಲವರು ವಿಮರ್ಶೆಯ ನೆಪದಲ್ಲಿ 'ತಮ್ಮವರ' ಕೃತಿಗಳನ್ನು ಭಜನೆ ಮಾಡಿದರೆ; ಇನ್ನೂ ಕೆಲವರು 'ತಮ್ಮದಲ್ಲದವರ' ಕೃತಿಗಳನ್ನು ಕತ್ತರಿಸುವ ಕೆಲಸ ಮಾಡುವಲ್ಲಿ ನಿರತರಾಗಿದ್ದರು.

ಈ ಸಂದರ್ಭದಲ್ಲೇ ವಿಮರ್ಶಕನಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಕಡ್ಡಾಯವಾಗಿ ಅಪೇಕ್ಷಿಸುವ ಮಾರ್ಕ್ಸಿಸ್ಟ್ ಧೋರಣೆಯು ನವ್ಯೋತ್ತರ ವಿಮರ್ಶೆಯನ್ನು ಗಟ್ಟಿಯಾಗಿಸುವ ಕೆಲಸ ಮಾಡಿತು. ಜನಪರ ಚಳುವಳಿಯ ನಡುವೆ ನಿಂತು ಸಾಹಿತ್ಯಿಕ ಕೃತಿಗಳನ್ನು ಪರಿಶೀಲಿಸುವಾಗಲೂ ಕಾಯ್ದುಕೊಂಡಿರುವ ಸಮತೋಲನದ ರೀತಿ, ಸಂಯಮದಿಂದಿರುವ ಚಿತ್ತ ಖಂಡಿತಾ ನವ್ಯೋತ್ತರ ವಿಮರ್ಶೆಯನ್ನು ವಿಮರ್ಶಾವಲಯಕ್ಕೆ ಮಾದರಿಯಾಗುವಂತೆ ಪ್ರಾಚೀನ ಕನ್ನಡ ಸಾಹಿತ್ಯದ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತಂತೆ ರೂಪುಗೊಂಡ ವಿಮರ್ಶಾ ನಿಲುವುಗಳು ಭಿನ್ನ ಚರ್ಚೆಗಳಿಗೆ ಕಾರಣವಾದವು. ಶ್ರೇಣೀಕೃತ ಸಮಾಜದಲ್ಲಿ ಸಾಹಿತ್ಯ ಮತ್ತು ಭಾಷೆಯೂ ಕೂಡ ಮಡಿ ಮೈಲಿಗೆಯಲ್ಲಿ ಬದುಕುತ್ತಿರುವುದರ ವಿರುದ್ಧ ತಣ್ಣಗೆ ವಿಮರ್ಶಿಸುವ ಕಾರ್ಯ ನಡೆದಿದೆ.

ಕುವೆಂಪು ಅವರನ್ನು ಒಂದು ಹಂತಕ್ಕೆ ಸೀಮಿತಗೊಳಿಸದೆ ಸಾಂಸ್ಕೃತಿಕವಾಗಿ ನೋಡಬೇಕೆಂಬ ಅಭಿಪ್ರಾಯವನ್ನು ನವ್ಯೋತ್ತರ ವಿಮರ್ಶಾ ಸಂದರ್ಭದಲ್ಲಿ ಕಾಣಬಹುದು. ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳನ್ನು ಹುಡುಕಿಹೇಳುವ ಹಂಬಲ ಕಾಣಿಸಿತು.

ನವ್ಯದ ಅಡಿಗ, ತೇಜಸ್ವಿ, ಅನಂತಮೂರ್ತಿ ಮುಂತಾದವರ ಸಾಹಿತ್ಯವನ್ನು ವಿಮರ್ಶಿಸುವಾಗ ಅವರು ತಾಳಿರುವ ಕೃತಿನಿಷ್ಠ ಮತ್ತು ವ್ಯಕ್ತಿ ನಿಷ್ಠ ಧೋರಣೆಗಳನ್ನು ಪ್ರಧಾನವಾಗಿ ಗಮನಿಸಲಾಗಿದೆ. ತೇಜಸ್ವಿಯವರ ಕಥೆಗಳಲ್ಲಿ ಚಿತ್ರಿತಗೊಂಡ ನೌಕರಶಾಹಿ ವರ್ಗದ ಬೌದ್ಧಿಕ ಅತಿಗಳು ತುಂಬಾ ವಾಸ್ತವಿಕವೆಂದೂ, ಮೊದಲ ಬಾರಿಗೆ ಅನ್ನ, ಬಟ್ಟೆ, ವಸತಿಯ ಪ್ರಶ್ನೆ ಎತ್ತಿದ ಸಿದ್ದಲಿಂಗಯ್ಯನವರ ಆಕ್ರೋಶಗಳನ್ನು ನವ್ಯೋತ್ತರ ವಿಮರ್ಶೆ ಗುರುತಿಸಿತು. ಪ್ರಗತಿಶೀಲ ಕೃತಿಗಳ ಕೇಂದ್ರವಾದ ಕಾರ್ಮಿಕರ ನೋವುಗಳು, ರಷ್ಯಾ ಕಮ್ಯುನಿಷ್ಟರ ಕನಸುಗಳು ವಿಮರ್ಶೆಯಲ್ಲಿ ಗಮನಾರ್ಹ ನೆಲೆ ಕಂಡುಕೊಂಡವು.

ದಲಿತ ಲೇಖಕರ ಮೊದಮೊದಲಿನ ರಚನೆಗಳು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ವಿಮರ್ಶಿಸುತ್ತವೆ. ಇವುಗಳು ಸಾಮಾಜಿಕ ವಾಸ್ತವದ ಒಟ್ಟಾರೆ ಸ್ಥಿತಿಯನ್ನು ವಿಮರ್ಶಾತ್ಮಕವಾಗಿ ನೋಡುವ ಎಚ್ಚರದ ಸಂಕೇತಗಳಾಗಿವೆ. ದಲಿತರು – ದಲಿತೇತರರು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸವಲತ್ತುಗಳಿಂದ ವಂಚಿತರಾಗಿ ಅವಮಾನಕ್ಕೊಳಗಾದವರು ಸಮಾಜದ ವಾಸ್ತವಿಕತೆಯನ್ನು ನೋಡುವುದಕ್ಕೂ, ಎಲ್ಲ ಸವಲತ್ತುಗಳನ್ನು ಪಡೆದುಕೊಂಡು ಯಾವುದೇ ತುಳಿತಕ್ಕೆ ಒಳಗಾಗದೇ

ಇದ್ದವರು ಸಾಮಾಜಿಕ ವ್ಯವಸ್ಥೆಯನ್ನು ನೋಡುವ ರೀತಿಗೂ ಅಜಗಜಾಂತರ ವ್ಯತ್ಯಾಸವಿದೆ. ಶೋಷಿತರಲ್ಲದವರಿಗೆ ಸಮಾಜ ಸುಂದರವಾಗಿ, ಆದರ್ಶಪ್ರಾಯವಾಗಿ ಕಂಡರೆ, ದಲಿತರಿಗೆ ಇದೇ ಸಮಾಜ, ಅದರ ಕಟ್ಟುಪಾಡು ಅನೇಕ ಪ್ರಶ್ನೆಗಳನ್ನು ಉಂಟುಮಾಡಿದವು. ಹೀಗೆ ಶೋಷಿತರಿಗೆ ಸಾಮಾಜಿಕ ವ್ಯವಸ್ಥೆಯನ್ನು ಬದಲು ಮಾಡುವ ಹಠ. ಹೀಗಾಗಿ ದಲಿತ ಸಾಹಿತ್ಯ ವಿಮರ್ಶೆ ಈ ಮಾದರಿಯನ್ನು ಆದರ್ಶವಾಗಿಟ್ಟುಕೊಂಡಿತು ಮತ್ತು ಅದು ಸಾಹಿತ್ಯವನ್ನು ನೋಡುವ ಕ್ರಮ ಬೇರೆಯಾಯಿತು.

ದಲಿತ ಸಾಹಿತ್ಯದಲ್ಲಿ ಕೇಂದ್ರ ಆಗುವುದು ಮನುಷ್ಯ ಮತ್ತು ಅವನ ನೋವುಗಳು.

ರಮ್ಯ ಸಂಪ್ರದಾಯ ಹಾಗೂ ನವ್ಯ ಸಂಪ್ರದಾಯದ ವಿಮರ್ಶೆಗಳು ಜನರಿಂದ ದೂರ ಉಳಿದಿದೆ ಎಂದು ಆಪಾದನೆ ಮಾಡುವ ಮೂಲಕ ತಮ್ಮ ವಿಮರ್ಶೆಗೆ ಮಾನವೀಯತೆಯನ್ನೇ ಕೇಂದ್ರ ಆಸಕ್ತಿಯಾಗಿ ಮಾಡಿಕೊಂಡಿತು ಈ ದಲಿತ ವಿಮರ್ಶೆ.

ದಲಿತ ವಿಮರ್ಶೆಯ ನಿಲುವು ಸಮಾಜ ಪರವಾದುದು. ಇದರಿಂದಾಗಿ ದಲಿತ ವಿಮರ್ಶೆ ಕೆಲವು ತೊಡಕುಗಳನ್ನು ಎದುರಿಸಬೇಕಾಗಿ ಬಂತು. ದಲಿತ ವಿಮರ್ಶೆ ಸಾಂಸ್ಥಿಕ ಯಜಮಾನಿಕೆಯ ದರ್ಪವನ್ನು ವಿರೋಧಿಸಿತು. ಏಕಕಾಲಕ್ಕೆ ಅದು ವಸಾಹತು ಪ್ರಭುತ್ವದ ಮೂಲಕ ಬಂದ ಚಿಂತನೆಯ ಕ್ರಮದ ಯಜಮಾನಿಕೆ ಮತ್ತು ಸ್ಥಳೀಯವಾದ ಪರಂಪರೆಯ ಚಿಂತನೆಗಳನ್ನು ನಿರಾಕರಿಸಿ ಸಾಹಿತ್ಯ ವಿಮರ್ಶೆಯನ್ನು ಜೀವಪರವಾಗಿಸಿತು.

ದಲಿತ ಸಾಹಿತ್ಯ ವಿಮರ್ಶೆಗೆ ಸಾಮಾಜಿಕ–ಸಾಂಸ್ಕೃತಿಕ– ಆರ್ಥಿಕ ಪ್ರತಿಪಾದನೆ ಬಹಳ ಮುಖ್ಯವಾದುದು. ಇದಕ್ಕಾಗಿ ಅದು ಕೃತಿಯ ಆಶಯವನ್ನು ಪ್ರಧಾನವೆಂದು ಪರಿಗಣಿಸುತ್ತದೆ ಮತ್ತು ಕೃತಿಯೊಂದರ ತಾತ್ವಿಕ ನಿಲುವನ್ನು ಅದು ಚರ್ಚಿಸುತ್ತದೆ." [2]

ದಲಿತ ಸಾಹಿತ್ಯ ವಿಮರ್ಶೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಮರ್ಶೆಯೂ ಹೌದು. ಹೀಗಾಗಿ ಈ ತನಕ ಕನ್ನಡ ಸಾಹಿತ್ಯ ವಿಮರ್ಶೆ ಗಮನಹರಿಸದಿರುವ ಸಂಗತಿಗಳ ಕಡೆಗೆ ದಲಿತ ವಿಮರ್ಶೆ ಗಮನ ಹರಿಸಿದೆ.

ದಲಿತ ವಿಮರ್ಶೆಗೆ ರಾಜಕೀಯ ಮತ್ತು ಸಾಮಾಜಿಕ ಬದ್ಧತೆಯಿದೆ. ಅದರಲ್ಲಿ ಮಾರ್ಕ್ಸ್‌ವಾದ ಲೋಹಿಯಾವಾದಗಳು ಇವೆ. ದಲಿತ ವಿಮರ್ಶೆ ಎದುರಿಸಿದ ಸವಾಲುಗಳು ಅದರ ಸ್ವರೂಪ ಚಿತ್ರಣವನ್ನು ನೀಡುತ್ತವೆ.

---

[2] ಎಚ್. ಓ. ಕೃಷ್ಣಮೂರ್ತಿ: 'ಆಧುನಿಕ ಕನ್ನಡ ವಿಮರ್ಶೆ' ಡಿಪಿಎಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ, 2007.

ನವ್ಯೋತ್ತರ ವಿಮರ್ಶೆಯ ಮುಂದುವರೆದ ಭಾಗ ಬಂಡಾಯ ವಿಮರ್ಶೆ ಸಂಪೂರ್ಣ ತಾಯ್ತನದ್ದು. ದಲಿತ ಬಂಡಾಯದ ಮರಿಗುಬ್ಬಿಗಳನ್ನು ಕಾಪಾಡುವ ಗುಬ್ಬಚ್ಚಿ ಗೂಡಿದು. ಈ ಗೂಡಿನ ಕಡೆ ಹರಿದು ಬರುವ ನವ್ಯದ ಹಾವುಗಳನ್ನು ಚೆದರಿಸುತ್ತಲೇ, ಅತ್ತ ಹಾರಿ ಬರುವ ಜಾಗತಿಕ ಗಿಡುಗವನ್ನು ಎದುರಿಸುತ್ತಲೇ ಭೂಮಿತತ್ವವನ್ನು ಜೋಪಾನ ಮಾಡಿದ ಬೆವರಿನದು.

ನವ್ಯೋತ್ತರ ವಿಮರ್ಶೆ ಒಟ್ಟಾರೆ ಕಲಾ ಪ್ರಕಾರಗಳ ಒಳಗಣಗಳನ್ನು ಒಪ್ಪುವುದಿಲ್ಲ. ಅದರ ದೃಷ್ಟಿಯಲ್ಲಿ ಎಲ್ಲವೂ ವಾಙ್ಮಯ ಕಥನಗಳು. ಈ ದೃಷ್ಟಿಯಿಂದ ನೋಡಿದಾಗ ಸೃಜನಶೀಲ–ಸೃಜನೇತರ ಕಾವ್ಯ–ಗದ್ಯ ಎಂಬೆಲ್ಲ ವರ್ಗೀಕರಣಗಳೂ ಅಪ್ರಸ್ತುತ.

ನವ್ಯೋತ್ತರ ವಿಮರ್ಶೆ ಆಕರ್ಷಿಸುತ್ತದೆ, ಕೆಣಕುತ್ತದೆ, ಸಂವಾದಕ್ಕೆ ಆಹ್ವಾನಿಸುತ್ತದೆ. ತನ್ನ ಶೋಧನೆಗಳಲ್ಲಿ ನಮ್ಮ ಇರುವಿಕೆಯನ್ನು ಕೇಳುತ್ತದೆ. ನಮ್ಮನ್ನು ತಟಸ್ಥರನ್ನಾಗಿ ಮಾಡದೆ ಕ್ರಿಯಾಶೀಲ ಅನುಸಂಧಾನಕ್ಕೆ ಒತ್ತಾಯಿಸುತ್ತದೆ. ಹಾಗಾಗಿ ಇಲ್ಲಿ ಸಹಮತದಷ್ಟೇ ಭಿನ್ನಮತಕ್ಕೂ ಅವಕಾಶ ಇದ್ದೇ ಇದೆ.

2.5. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ

ಅಮೆರಿಕಾದ ಮಹಿಳಾ ವಿಮೋಚನವಾದಿ ಮಾರ್ಗರೆಟ್ ಫುಲರ್ ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು. "ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯಲ್ಲ; ಆಳುವ ಅಧಿಕಾರವಲ್ಲ; ಆಕೆಗೆ ಅವಶ್ಯವಿರುವುದು ಸಹಜವಾಗಿ ಬೆಳೆಯುವ ಅವಕಾಶ; ಸ್ವಂತದ ಬುದ್ಧಿಯನ್ನು ಉಪಯೋಗಿಸುವ ಅವಕಾಶ; ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ."[1]

ವರ್ಜೀನಿಯಾ ವೂಲ್ಫ್ ಮತ್ತು ಸಿಮೊನ್–ದ–ಬುವಾ, ಮೇರಿವೂಲ್‌ಸ್ಟೋನ್ ಕ್ರಾಫ್ಟ್, ಮಾರ್ಗರೆಟ್ ಫುಲರ್ ಇವರೆಲ್ಲರೂ ಅಲ್ಲಿಯವರೆಗೆ ರಚನೆಯಾದ ಮತ್ತು ರಚನೆಯಾಗುತ್ತಿರುವ ಸಾಹಿತ್ಯದಲ್ಲಿ ಮಹಿಳೆಯನ್ನು ಬಿಂಬಿಸುತ್ತಿರುವ ರೀತಿಯನ್ನು ಕಟುವಾಗಿ ಟೀಕಿಸಿದರು. ಕೇವಲ ಕಾಲ್ಪನಿಕವಾಗಿ ಹೆಣ್ಣಿಗೆ ಮಹತ್ವದ ಸ್ಥಾನವನ್ನು ಕೊಟ್ಟ ಪುರುಷ ಪ್ರಧಾನ ಸಮಾಜ ವಾಸ್ತವದಲ್ಲಿ ಮಾತ್ರ ಅವಳನ್ನು ತೀರಾ ನಿಕೃಷ್ಟ ರೀತಿಯಲ್ಲಿ ನೋಡುತ್ತಾ ಬಂದಿದೆ.

ಈ ವಾದವನ್ನು ಆಧಾರವಾಗಿಟ್ಟುಕೊಂಡೂ, ನಮ್ಮಲ್ಲಿ ಕೂಡ ಚಳುವಳಿ ರೀತಿಯ ಅಲೆ ಎದ್ದಿತು. ಸಾಹಿತ್ಯದ ಕೆಲವು ಪಾತ್ರಗಳಲ್ಲಿ ಅತ್ಯಂತ ಸ್ಫೂರ್ತಿದಾಯಕ; ಆದರ್ಶವಾದಿ ಮಾತುಗಳನ್ನು ಗಾಢ, ಸೃಜನಶೀಲ ಚಿಂತನೆಗಳನ್ನು ಆಡುವ ಆಕೆ ನಿಜ ಜೀವನದಲ್ಲಿ ಓದಲಾರದ; ಮಾತುಬಾರದ

[1] ಎಚ್. ದಂಡಪ್ಪ (ಸಂ) : ಬಿ.ಎನ್. ಸುಮಿತ್ರಾಬಾಯಿ: 'ಸುವರ್ಣ ಸಾಹಿತ್ಯ ವಿಮರ್ಶೆ'.

ಮೂಕಳಾಗಿದ್ದಾಳೆ, ಎಂಬ ವಾದಗಳನ್ನು ಮುಂದಿಟ್ಟುಕೊಂಡು ಸ್ತ್ರೀವಾದಿ ನೆಲೆಯಲ್ಲಿ ಸಾಹಿತ್ಯವನ್ನು ನೋಡುವ ದೃಷ್ಟಿಯತ್ತ ಎಲ್ಲರ ಗಮನ ಸೆಳೆದರು.

1970ರ ದಶಕದ ನಂತರ ಕನ್ನಡ ಸಾಹಿತ್ಯದಲ್ಲಿಯೂ 'ಸ್ತ್ರೀಪರ ಧ್ವನಿ' ಕೇಳಿಸತೊಡಗಿತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯ ಸಂದರ್ಭವನ್ನು ಬಿಟ್ಟರೆ ಇಷ್ಟೊಂದು ಪ್ರಮಾಣದಲ್ಲಿ ಮಹಿಳೆಯರು ಸಾಹಿತ್ಯ ಜಗತ್ತನ್ನು ಪ್ರವೇಶಿಸಿದ್ದಿಲ್ಲ. ಈ ಹಂತದಲ್ಲಿ ಸ್ತ್ರೀವಾದಿ ವಿಮರ್ಶೆ, ಆಧುನಿಕ ಮಹಿಳೆ, ಸ್ತ್ರೀತ್ವ ಮೊದಲಾದ ವಿಚಾರಗಳ ಕುರಿತು ಗಂಭೀರ ಚರ್ಚೆಗಳು ನಡೆಯುತ್ತಿವೆ. ಸ್ತ್ರೀವಾದಿ ವಿಮರ್ಶೆಯ ಕುರಿತು ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ ಅವರ ಮಾತುಗಳು ಹೀಗಿವೆ: "ಸ್ತ್ರೀವಾದಿ ವಿಮರ್ಶೆಯು ಕೇವಲ ವಿಮರ್ಶಕನ ಕೈಯ ಒಂದು ಉಪಕರಣವಲ್ಲ; ಸಾಮಾಜಿಕ, ಬೌದ್ಧಿಕ ಪರಂಪರೆಗಳನ್ನು ಪರೀಕ್ಷಿಸುವ ಒಂದು ದೃಷ್ಟಿಕೋನ. ಮಹಿಳೆಯರ ಅಧೀನತೆಯಿಂದ ಮತ್ತು ಈ ಪರಿಸ್ಥಿತಿಯನ್ನು ಬದಲಾಯಿಸುವ ಅವಶ್ಯಕತೆಯಿಂದ ಹುಟ್ಟುವ ದೃಷ್ಟಿಕೋನ. ಅಧಿಕಾರ ಸಂಬಂಧಗಳ ಮೇಲೆ ಮತ್ತು ಲಿಂಗಭೇದ ಸಂಬಂಧಗಳ ಸಾಮಾಜಿಕ ಅರ್ಥ ಕಲ್ಪನೆಯು ಹೀಗೆ ಕಟ್ಟಲ್ಪಟ್ಟಿದೆ ಎನ್ನುವುದರ ಮೇಲೆ ಒತ್ತು ಕೊಡುವುದೇ ಸ್ತ್ರೀವಾದಿ ವಿಮರ್ಶೆಯ ವೈಶಿಷ್ಟ್ಯವಾಗಿದೆ."

ಮಹಿಳೆಯ ಅನುಭವ, ಚರಿತ್ರೆಗಳನ್ನು ಹೊಸ ರೀತಿಯಲ್ಲಿ ವ್ಯಾಖ್ಯಾನಿಸಿ ಅಸಮಾನತೆಯ ಈ ಯಥಾ ಸ್ಥಿತಿಯನ್ನು ಬದಲಾಯಿಸ ಬಯಸುವ ಗಂಭೀರ ಪ್ರಯತ್ನವೇ ಸ್ತ್ರೀವಾದಿ ಚಳುವಳಿಯ ಮತ್ತು ಸ್ತ್ರೀವಾದಿ ವಿಮರ್ಶೆಯ ಉದ್ದೇಶ.

ಹೆಣ್ಣನ್ನು ಪ್ರಕೃತಿಗೆ ಹೋಲಿಸಿ ಬಂಧನದಲ್ಲಿಡುವ ಪುರುಷ ಪ್ರಧಾನ ಜಾಣತನವನ್ನು ಸ್ತ್ರೀವಾದಿ ವಿಮರ್ಶೆ ಬಯಲಿಗೆಳೆಯುತ್ತದೆ. ಹೆಣ್ಣು ಅಬಲೆ, ದುರ್ಬಲಳು, ಗಂಡಿನ ರಕ್ಷಣೆಯಲ್ಲೇ ಇರಬೇಕು ಎಂಬ ಅಭಿಪ್ರಾಯವನ್ನು ಮರು ಪರೀಕ್ಷೆಗೆ ಒಳಪಡಿಸುತ್ತದೆ. ವೈಜ್ಞಾನಿಕ ಚಿಂತನೆ, ಆಧ್ಯಾತ್ಮಿಕ ಉನ್ನತಿ ಮಹಿಳೆಗೆ ಸಾಧ್ಯವಿಲ್ಲ ಎಂಬ ವಿಚಾರಗಳನ್ನು ಪ್ರಶ್ನಿಸಿ ಇತಿಹಾಸದಲ್ಲಿ ಇವೆಲ್ಲವುಗಳಿಗೆ ಉದಾಹರಣೆಗಳಿರುವುದನ್ನು ಸ್ತ್ರೀವಾದಿ ಚಳುವಳಿ ಉಲ್ಲೇಖಿಸುತ್ತದೆ.

ಸ್ತ್ರೀವಾದಿ ಚಳುವಳಿ ಮತ್ತು ವಿಮರ್ಶೆಯಲ್ಲಿ ಗಮನಿಸಬಹುದಾದ ಕೆಲವು ಮಹಿಳೆಯರ ಹೆಸರುಗಳು ಹೀಗಿವೆ: ಸೂಸಿಥಾರು, ವೀರ್ ಭಾರತ್ ತಲ್‌ವಾರ್, ಶಾಂತಾ ಗೋಖಲೆ, ವಿದ್ಯುತ್ ಭಾಗವತ್, ಮುಕ್ತಾ ಮನೋಹರ್, ಬಿ.ಎನ್. ಸುಮಿತ್ರಾಬಾಯಿ, ಸೀಮಂತಿನಿ ನಿರಂಜನ, ವಿಜಯಾದಬ್ಬೆ, ಬಿ.ಎಸ್. ವೆಂಕಟಲಕ್ಷ್ಮಿ ಮುಂತಾದವರು.

ಯಾವುದಕ್ಕಾಗಿ ಪ್ರತಿಭಟನೆಯ ರೀತಿಯ ಸಾಹಿತ್ಯ ರಚನೆ ವಿಮರ್ಶೆ ಪ್ರಾರಂಭವಾಯಿತೋ, ಅದರ (ಯಜಮಾನ್ಯದ) ಪ್ರೋತ್ಸಾಹದಿಂದಲೇ ಸ್ತ್ರೀವಾದ ಚಿಂತನೆಯು ತನ್ನ ಪ್ರತಿರೋಧಿ ನೆಲೆಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಇದೇ ಸಂದರ್ಭದಲ್ಲಿ ಎದುರಾದ ಮತ್ತೊಂದು ಸಮಸ್ಯೆ ಅಥವಾ ಸವಾಲು, ತಿರುಮಲಾಂಬ ಅವರ ಕೃತಿಯ ಬಗ್ಗೆ ಮಾಸ್ತಿಯವರು ಬರೆದ ವಿಮರ್ಶೆ ಇವು ಯಾವುದರ ಕಡೆ ಬೆರಳು ಮಾಡಿ ತೋರಿಸುತ್ತವೆ? ಅವು ಸಂಸ್ಕೃತಿಯ ವ್ಯವಸ್ಥೆಯ ಮೂಲ ರಚನೆಯನ್ನು ಉಳಿಸಿಕೊಳ್ಳುವ ಹಠ, ಆಶಯ ಕಾಣಿಸುತ್ತದೆಯೇ? ಎಂಬ ವಿಷಯಗಳ ಆಧಾರದ ಮೇಲೆ ಇಪ್ಪತ್ತೊಂದನೆಯ ಶತಮಾನದಲ್ಲಿ ಚಿಂತನೆ ಮುಂದುವರೆದಿದೆ.

ಇದಕ್ಕೆ ವೀಣಾ ಅವರ ಈ ಮಾತುಗಳೇ ಸಾಕ್ಷಿ "ನವ್ಯ ಲೇಖಕರು ಯಾರೂ ಮಹಿಳೆಯ ಬಗ್ಗೆ ತಮ್ಮಂತೆಯೇ ಆಕೆಗೂ ಇರಬಹುದಾದ ಸಮಸ್ಯೆಗಳು, ತೊಳಲಾಟಗಳು, ದ್ವಂದ್ವಗಳ ಬಗ್ಗೆ ಏನೂ ಯೋಚಿಸಿಲ್ಲ, ಬರೆದಿಲ್ಲ. ಪ್ರಭುತ್ವದ ಹಿಡಿತದಿಂದ ಬಿಡುಗಡೆ ಪಡೆಯಬೇಕೆನ್ನುವ ತೀವ್ರ ಆಶಯ ಮಹಿಳೆಯದು. ಹತ್ತಿಕ್ಕುವ ಶಕ್ತಿಗಳ ವಿರುದ್ಧ ಹೋರಾಡಲು ಆಕೆಯ ಜೀವವೂ ತಹತಹಿಸುತ್ತದೆ ಹೋರಾಟವು ಸಾಧ್ಯವಾಗದಾಗ ಬದುಕಿನ ಅರ್ಥಹೀನತೆಯ ತೀಕ್ಷ್ಣ ಪ್ರಜ್ಞೆಯಿಂದಾಗಿ ಆಂತರಿಕ ನೋವನ್ನು ಅನುಭವಿಸುತ್ತಾಳೆ ಎಂಬ ವಾಸ್ತವಿಕ ಅಂಶಗಳು ಬಹುಪಾಲು ಲೇಖಕರ ಗಮನ ಸೆಳೆದಿಲ್ಲ."[2]

ವಿಜಯಾ ದಬ್ಬೆಯವರು ಪ್ರಧಾನ ಸಾಹಿತ್ಯ ವಿಮರ್ಶೆಯಿಂದ ಒಡೆದು ನಿಲ್ಲುವ, ವಿಶಿಷ್ಟ ವಿಮರ್ಶೆಯೊಂದನ್ನು ರೂಪಿಸುವ ಅಗತ್ಯ, ಅನಿವಾರ್ಯತೆ ಮತ್ತು ಮಹತ್ವವನ್ನು ಕಂಡು ಕೊಂಡ ಕನ್ನಡದ ಮೊದಲ ಲೇಖಕಿ.

ಸ್ತ್ರೀವಾದಿ ವಿಮರ್ಶೆಯ ಸ್ವಾಯತ್ತತೆಯ ಕಡೆಗಿನ ಪ್ರಯಾಣದಲ್ಲಿ ಇದೊಂದು ಬಹಳ ನಿರ್ಣಾಯಕ ಮತ್ತು ಸಂಕ್ರಮಣ ಘಟ್ಟ. ಹೀಗಾಗಿ ಸ್ತ್ರೀವಾದಿ ವಿಮರ್ಶೆ ಸ್ವಾಯತ್ತತೆಯನ್ನು ಯಾರೋ ಕೊಟ್ಟು ಪಡೆಯಬೇಕೆನ್ನುವ ಭ್ರಮೆ ಬಿಟ್ಟು, ತಾನೇ ಅಪಾರ ಪರಿಶ್ರಮ; ಶ್ರದ್ಧೆಯಿಂದ ಗಳಿಸಿಕೊಳ್ಳಬೇಕಾದದ್ದು ಎಂದು ಸೂಚಿಸಿತು.

ಇದರಿಂದ ಸಿಗುವ ಘನತೆ ಮತ್ತು ಅದರಿಂದ ಸಿಕ್ಕ ಆತ್ಮ ವಿಶ್ವಾಸ ಲಿಂಗರಾಜಕಾರಣವನ್ನು ಮೀರುವ ಸಾಮಾಜಿಕ ನ್ಯಾಯವನ್ನು ಪಡೆಯುವ ಸಾಹಿತ್ಯ ವಿಮರ್ಶೆಗೆ ಅಧಿಕೃತತೆಯನ್ನು ಒದಗಿಸಿಕೊಡುವ ಹಂಬಲ ಸ್ತ್ರೀವಾದಿ ವಿಮರ್ಶೆಯದು.

---

[2] 'ಸಹೃದಯ-ಸಂವಾದ'- ಜಿ.ಎಸ್. ಶಿವರುದ್ರಪ್ಪ

ಮೇಲಿನ ಎಲ್ಲ ಪಂಥಗಳ ಗುಣಲಕ್ಷಣಗಳು ಲಂಕೇಶರ ವಿಮರ್ಶೆಯಲ್ಲಿ 'ಧ್ವನಿ'ಸುವ ಬಗೆ ಮತ್ತು ಸಾಧ್ಯತೆಗಳನ್ನು ಮುಂದಿನ ಅಧ್ಯಯನ ನಿರ್ವಚಿಸಿದೆ.

ಅಧ್ಯಾಯ – 3

3.1. ಲಂಕೇಶರ ವಿಮರ್ಶೆ

ಇಡೀ ಸಾಹಿತ್ಯ ಪರಿಸರ ಕೃತಿಗೆ ಸಂಬಂಧಪಟ್ಟ ಯಾವುದೋ ಒಂದು ಸಂಗತಿಯನ್ನು ಕೇಂದ್ರವಾಗಿ ಇಟ್ಟುಕೊಂಡು ಚರ್ಚೆ ನಡೆಸಿದರೆ, ಸೃಜನಶೀಲ ಪ್ರತಿಭೆಯಿರುವ ಲಂಕೇಶ್ ಈ ಕೇಂದ್ರ ಒಳಗೊಳ್ಳದ ಇತರ ಸಂಗತಿಗಳ ಬಗ್ಗೆ ಆಸಕ್ತಿ ವಹಿಸುತ್ತಾರೆ.

ಅವರು ತಮ್ಮ ಕಾಲದಲ್ಲಿ ಇದ್ದ ಸಾಮಾಜಿಕ ಸಮಸ್ಯೆಗಳು ಘಟನೆಗಳ ಕಡೆಗೆ ಒಲವು ತೋರಿಸುತ್ತಾರೆ. ಮಾನವರೊಳಗೆ ಇರುವ ಅಲ್ಪತನ, ಒಣ ಸಂಪ್ರದಾಯ ನಿಷ್ಠತೆ, ಬಿರುಕುಗಳನ್ನು ತೆರೆದಿಡುವುದು ಅವರ ಬರಹದಲ್ಲಿ ಕಂಡು ಬರುತ್ತದೆ. ಲಂಕೇಶರ ನಿಜವಾದ ಹಂಬಲವನ್ನು 'ನಿವೃತ್ತರು' ಕತೆಯ ಈ ಸಾಲುಗಳು ಸ್ಪಷ್ಟ ಪಡಿಸುತ್ತವೆ. 'ನೋವಿಗೆ ಬದಲಾಗಿ ಔದಾರ್ಯ ಬರಲಾರದೇ? ನನ್ನನ್ನು ಸಂತೋಷ ತುಂಬಿ ಉದ್ಧಾರವಾಗಬಾರದೇ? ದಿನಗಳು ನನ್ನನ್ನು ಗುಪ್ತವಾಗಿ ಕೊಲ್ಲುವ ಜೊತೆಗೆ ಒಂದಿಷ್ಟು ಜೀವರಸವನ್ನು ಹರಿಸಬಾರದೇ.'[1]

ಲಂಕೇಶರಿಗೆ ತಿರುಳಿಲ್ಲದ ಬೌದ್ಧಿಕತೆ ಬಗ್ಗೆ ಅಸಹ್ಯ. ಸಿದ್ಧಾಂತ ಪರಿಕಲ್ಪನೆಗಳ ಮೂಲಕ ಸೃಜನಶೀಲ ಮನಸ್ಸುಗಳನ್ನು ದಿಕ್ಕು ತಪ್ಪಿಸುವ ಚಿಂತಕರ ಬಗ್ಗೆ ಕೋಪ ಸರಳ ಸತ್ಯಗಳನ್ನು ಬೌದ್ಧಿಕ ಅಹಂಕಾರದಲ್ಲಿ ಮುಗ್ಧ ಜನರಿಗೆ ಸತ್ಯವನ್ನು ಮರೆಮಾಚುತ್ತಿರುವ ಪಂಡಿತರ ಬಗ್ಗೆ ಇನ್ನಿಲ್ಲದ ಸಿಟ್ಟು. ಲಂಕೇಶರ ವಸ್ತು ಪ್ರಪಂಚ ನಮಗೆ ತೀರ ಹತ್ತಿರವಾದುದು. ಆದರೆ ಅಂತ 'ವಸ್ತು'ಗಳ ಮೂಲಕ ಮಾಡಿಸುವ 'ದರ್ಶನ' ಮಾತ್ರ ಪ್ರತಿಭಾವಂತನಿಗೇ ಸಾಧ್ಯ. ಲಂಕೇಶರ ಬರವಣಿಗೆ ಮೇಲ್ನೋಟಕ್ಕೆ ಸರಳ ಅನ್ನಿಸಿದರೂ, ವಸ್ತುವಿನ ಲಯ, ಅಷ್ಟು ಸುಲಭವಾಗಿ ಅರ್ಥವಾಗುವಂತದಲ್ಲ.

ನಮ್ಮೆಲ್ಲರಿಗೂ ನಮ್ಮದೇ ಆದ 'ಪುಟ್ಟ ಪ್ರಪಂಚ' ಇರುತ್ತದೆ. ಈ ಪ್ರಪಂಚದಲ್ಲಿ ಹೊರಗಿನವರ ಪ್ರವೇಶವನ್ನು ಎದುರಿಸಿದಾಗ ಆಘಾತ ಉಂಟಾಗಿ ಬದುಕು ದುರ್ಭರವಾಗುತ್ತದೆ ಎಂಬುದನ್ನು ಲಂಕೇಶರು ತಮ್ಮ ಬರಹದಲ್ಲಿ ಧ್ವನಿಸಿದ್ದಾರೆ. ಜಾತಿ, ವರ್ಗ ಸಂಘರ್ಷಗಳು ಹಾಗೂ ಮನುಷ್ಯ ಸಂಬಂಧದ ಸಂಕೀರ್ಣತೆಯನ್ನು ಅವರು ನಿರ್ವಹಿಸಿರುವ ಬಗೆ ಅನನ್ಯವಾದುದು.

ಲಂಕೇಶ್ ತಮ್ಮ ಯಾವ ಬರವಣಿಗೆಯಲ್ಲೂ ಶಿಷ್ಟ ಪ್ರಜ್ಞೆಯನ್ನು ಬೆಳೆಸಿಕೊಳ್ಳದೆ ಸಾಮಾನ್ಯ ಮನುಷ್ಯನ ಗ್ರಹಿಕೆ, ನಿರೂಪಣೆಗಳನ್ನು ವಿವರಿಸುತ್ತಾರೆ. ಸಾಮಾನ್ಯ ವ್ಯಕ್ತಿಯೊಬ್ಬನ ಸಂವೇದನೆ, ನುಡಿಗಟ್ಟು, ಆಶೋತ್ತರಗಳಿಗೆ ದನಿಯಾಗುತ್ತಾರೆ. ಮಾನವೀಯ ಸಮಾಜದ ತಳಮಳ,

---

[1] 'ಪ್ರಸ್ತುತ' – ಪಿ. ಲಂಕೇಶ್ – ಪತ್ರಿಕೆ ಪ್ರಕಾಶನ ಬೆಂ. 2006.

ಬಡವನೊಬ್ಬನ ಕೈಯಲ್ಲಿ ದುಡ್ಡಿದ್ದರೆ ಅವನು ಕಳ್ಳನೇ ಇರಬೇಕು ಎಂಬ ಸಮಾಜದ ನಿಸ್ಸಂದೇಹ ನಿರ್ಣಯ ಕುರಿತಂತೆ ಅವರಿಗೆ ಕೋಪವಿದೆ.

ಸೂಕ್ಷ್ಮ ನೈತಿಕ ಪ್ರಜ್ಞೆ, ಅನಗತ್ಯವಾಗಿ ಆದರ್ಶೀಕರಿಸದಿರುವುದು, ರೊಮ್ಯಾಂಟಿಕ್ ಚಿತ್ರಣ, ಬಯಸದ ಅವರು, ದಾರಿದ್ರ್ಯವನ್ನೂ ಚೈತನ್ಯವನ್ನೂ ಒಟ್ಟಿಗೇ ಹಿಡಿದಿಡುತ್ತಾರೆ. ಸ್ಥಿತಿ ಬದಲಾದರೆ ಜೀವನದ ಸಾಧ್ಯತೆಗಳೂ ಬದಲಾಗುತ್ತವೆ. ಇದು ರಮ್ಯ ಕನಸುಗಾರಿಕೆ ಅಲ್ಲ. ಏಕೆಂದರೆ ತನ್ನ ಸ್ಥಿತಿಯನ್ನು ಬದಲಿಸಿಕೊಳ್ಳಬಲ್ಲ ಸಾಧ್ಯತೆ ಅವನ ವ್ಯಕ್ತಿತ್ವದಲ್ಲೇ ಇದೆ, ಎಂಬುದನ್ನು ಜೀವಂತವಾಗಿ ಕಾಣಿಸುವುದು ಅವರ ಉದ್ದೇಶ, ಭೌತಿಕ ಸ್ಥಿತಿಯ ಬದಲಾವಣೆ ನಿಜವಾದ ಬದಲಾವಣೆ ಅಲ್ಲ ಎಂಬ ತಾತ್ವಿಕ ದರ್ಶನ, ಮನುಷ್ಯ ಸಂಬಂಧಗಳ ಒಂದು ಸಂಕೀರ್ಣ ಜಾಲವನ್ನು ತೆರೆದಿಡುವ ಪ್ರಯತ್ನ, ವ್ಯಕ್ತಿ ವಿಶಿಷ್ಟಗಳನ್ನು ಸೂಕ್ಷ್ಮವಾಗಿ ಗುರುತಿಸುವುದು, ಬದುಕನ್ನು ನಿಯಂತ್ರಿಸುವ ಹಲವು ಹತ್ತು ಸಂಗತಿಗಳ ನಡುವೆ ಇಟ್ಟು ನೋಡುವ ಪ್ರಬುದ್ಧತೆ, ಎಂಥ ಸನ್ನಿವೇಶದಲ್ಲೂ ತನ್ನ ಲಘುಧಾಟಿಯನ್ನು ತೊರೆಯದಿರುವುದು ಲಂಕೇಶರ ಬರಹದ ತಾಂತ್ರಿಕ ಪರಿಣತಿಗೆ ಸಾಕ್ಷಿ.

ಮಾನವನ ಬಾಳಿನ ಕರಾಳ ಸತ್ಯಗಳ ದರ್ಶನ; ಏಕಾಂಗಿತನ, ಅಸಹಾಯಕತೆಗಳಿಗೆ ಸರಳ ಉತ್ತರಗಳಿಲ್ಲ. ಮನುಷ್ಯ ತನ್ನ ಆಳದಲ್ಲಿ ಈ ಕುರಿತು ಧ್ಯಾನಿಸಬೇಕು ತನ್ನ ಬದುಕಿನ ಮಿತಿಗಳ ಬಗ್ಗೆ, ಈ ಲೋಕದಲ್ಲೇ ಫಲಿಸುವ ಬಗ್ಗೆ ಚಿಂತಿಸಬೇಕು. ಇಡೀ ಬದುಕನ್ನು, ಎಲ್ಲ ಮಾನವರನ್ನೂ ಕುರಿತು, ಒಳಗೊಂಡು ಚಿಂತಿಸುವುದು, ಎಲ್ಲ ಮನುಷ್ಯರನ್ನು ಪ್ರೀತಿಸುವ, ಅವರ ಮಿತಿಗಳ ಬಗ್ಗೆ ಅನುಕಂಪದ, ಸರ್ವ ಹಿತಕ್ಕಾಗಿ ಧ್ಯಾನಿಸುವ ಧೋರಣೆ ಅವರ ಬರಹಗಳಲ್ಲಿದೆ.

ಯಾವ ಮನುಷ್ಯನೂ ದುಷ್ಟನಲ್ಲ, ದುಷ್ಟತನ ಎಂಬುದು ಎಲ್ಲಾ ಮನುಷ್ಯರ ಅವಸ್ಥೆಯಲ್ಲೇ ಇದೆ. ಇದನ್ನು ಗೆದ್ದುಕೊಳ್ಳುವುದು ಹೇಗೆ ಎಂಬುದೇ ಮನುಷ್ಯನ ಮೂಲಭೂತ ಸಮಸ್ಯೆ ಎನ್ನುವ ಲಂಕೇಶರ ಬರಹಗಳಲ್ಲಿ ವಿವರಗಳೆಲ್ಲ ಪ್ರತೀಕಗಳಾಗುವ ಮಾಂತ್ರಿಕತೆ ಇದ್ದು ಬದುಕಿನ ಸಾಫಲ್ಯ, ವೈಫಲ್ಯಗಳ ಧ್ಯಾನ, ಮನುಷ್ಯನನ್ನು ಆವರಿಸುವ ಭ್ರಮೆ; ಈ ಭ್ರಮೆ ಕೊಡವಿಕೊಂಡಾಗಲೇ ಜೀವನಕ್ಕೆ ಹತ್ತಿರವಾಗುವುದು ಎಂಬ ನಂಬಿಕೆ. ಈ ಭ್ರಮೆಗೆ ಕಾರಣ – ಹಣ, ಕಾಮ, ಕೀರ್ತಿ, ಅಧಿಕಾರ, ಸೌಂದರ್ಯ, ಬಲ, ಯಶಸ್ಸು ಮತ್ತು ಮೋಕ್ಷ. ಮನುಷ್ಯನ ಬದುಕಿಗೆ ಅಡ್ಡಿ ಆಗುವ ಪಾತಕವಾಗುವ ಪರಿಯನ್ನು ದಟ್ಟ ಆತಂಕದಿಂದ ಅವರು ಗಮನಿಸುತ್ತಾರೆ.

ಈ ಭ್ರಮೆಗಳಿಂದ ಸುತ್ತುವರಿದಿರುವ ಮನುಷ್ಯರನ್ನು ಸಹಾನುಭೂತಿಯಿಂದ, ಬಿಡಿಸಿಕೊಳ್ಳಲು ಪ್ರಯತ್ನಿಸುವ ವ್ಯಕ್ತಿಗಳನ್ನು ಮೆಚ್ಚುಗೆಯಿಂದ ನೋಡುತ್ತಾರೆ. ನವ್ಯದ ಶಿಸ್ತನ್ನು ಬಿಟ್ಟುಕೊಟ್ಟಿಲ್ಲ ಆದರೆ ನವ್ಯತೆಯನ್ನಾಗಲೀ, ಪ್ರಗತಿ ಶೀಲತೆಯನ್ನಾಗಲೀ, ಒಂದು ಗೀಳನ್ನಾಗಿ ಮಾಡಿಕೊಂಡಿಲ್ಲ. ಜೀವಪರತೆ ಅವರ ಮುಖ್ಯ ಗುಣ.

ಲಂಕೇಶರ ಬರವಣಿಗೆಯ ಭಾವ ತೀವ್ರತೆ ಎಲ್ಲ ಬಗೆಯ ಸಿನಿಕತನ, ಸಣ್ಣತನಗಳಿಂದ ಬಿಡಿಸಿಕಂಡು ಓದುಗರಲ್ಲಿ ಅಪಾರವಾದ ಜೀವನ ಪ್ರೀತಿಯನ್ನೂ, ಬದುಕಿನ ಬಗ್ಗೆ ಗೌರವವನ್ನೂ ಹುಟ್ಟಿಸುತ್ತದೆ. ನರಕ ಸದೃಶ ಬದುಕಿನ ಕತ್ತಲ ಕೋಣೆಗಳನ್ನು ತೋರಿಸುತ್ತಾ ಬದುಕನ್ನು ಸಫಲಗೊಳಿಸಿಕೊಳ್ಳುವ ಸಂಕಲ್ಪಶಕ್ತಿ ಮನುಷ್ಯನಲ್ಲಿಯೇ ಇದೆ ಎಂದು ಅವರು ಕಾಣಿಸುತ್ತಾರೆ.

ನಾಗರಿಕತೆಯ ಭ್ರಮೆಗಳನ್ನೂ, ಮನುಷ್ಯನ ಮಿತಿಗಳನ್ನೂ ಬಯಲಿಗೆಳೆಯುತ್ತಲೇ ಬದುಕಿನ ಮೂಲ ಸೆಲೆಗಳ ದರ್ಶನ ಮಾಡಿಸುತ್ತಾರೆ.

ನಮ್ಮೊಳಗಿನ ಗಾಂಧಿಯನ್ನು ಕಂಡುಕೊಳ್ಳುವುದೇ ಲಂಕೇಶ್ ಬರವಣಿಗೆಯ ಪ್ರಮುಖ ಮಹತ್ವಾಕಾಂಕ್ಷೆ. ಪ್ರೌಢ ನೈತಿಕ ಕಳಕಳಿ ಕನ್ನಡ ನವೋದಯ ಪ್ರಗತಿಶೀಲ ನವ್ಯ ಚಳುವಳಿಗಳ ಅತ್ಯುತ್ತಮ ಅಂಶಗಳ ಎಚ್ಚರ ಆಧುನಿಕ ದೃಷ್ಟಿ, ಪರಿಸರ, ಮಾತು – ಮೌನ, ಕ್ರಿಯೆ–ಪ್ರಕ್ರಿಯೆ ಸತ್ಯ – ಪ್ರಾಮಾಣಿಕತೆಯನ್ನು ಅವರ ಬರಹ – ವಿಮರ್ಶೆಗಳಲ್ಲಿ ಕಾಣಬಹುದು.

ಹೊರಗಿನ ಜಗತ್ತನ್ನು ಆಕರ್ಷಿಸಲು ಸದಾ ಸಾಹಿತ್ಯದ ಗುಂಗಿನಲ್ಲಿ ಇರುವಂತೆ ತೋರಿಸುತ್ತಾ, ಕೆಳಮಟ್ಟದ ಜನಪ್ರಿಯತೆಯನ್ನೇ ಪ್ರಸಿದ್ಧಿ ಎಂದು ಅಹಂಕಾರ ಪಡುತ್ತಾ ತಮಗಿಂತ ಮೇಲಿರುವವರನ್ನು ಪ್ರಶಸ್ತಿ ಅಥವಾ ಪ್ರಸಿದ್ಧಿಗಾಗಿ ಏನುಬೇಕಾದರೂ ಮಾಡಲು ಸಿದ್ಧವಿರುವವರಿಂದ ನಿಷ್ಠುರವಾದ ಮತ್ತು ಪ್ರಾಮಾಣಿಕ ವಿಮರ್ಶೆಯನ್ನು ಅಪೇಕ್ಷಿಸುವುದು ಸಾಧ್ಯವಿಲ್ಲ ಎನ್ನುವುದು ಅವರ ನಿಲುವು.

ತಮ್ಮ ಅಭಿಪ್ರಾಯವನ್ನು ಯಾರ ಹಂಗಿಗೂ ಒಳಪಡದೆ ಹೇಳುವಂಥ ದಿಟ್ಟ, ಸ್ವತಂತ್ರ ಮನೋಧರ್ಮದ ಲಂಕೇಶರ ವಿಮರ್ಶೆ ಕುತೂಹಲಕರ. ಯಾರೂ ತಮ್ಮನ್ನು ಹೊಗಳಲಿ ಎಂದು ಬಯಸದ ಅವರು, ಕಾರಣವಿಲ್ಲದೆ ಯಾರನ್ನೂ ಹೊಗಳುತ್ತಲೂ ಇರಲಿಲ್ಲ. ಹೀಗಾಗಿ ಅವರು ವಿಮರ್ಶೆಯ ನೆಪದಲ್ಲಿ ಎಲ್ಲರನ್ನೂ ಟೀಕಿಸುತ್ತಾರೆ ಎಂಬ ಆರೋಪಗಳಿದ್ದರೂ ನಿಜವಾಗಿ ಅವುಗಳ ಅಧ್ಯಯನಕ್ಕೆ ತೊಡಗಿದಾಗ ಅವರು ಬಯಸುತ್ತಿದ್ದ ಸಾಮಾಜಿಕ, ಸಾಹಿತ್ಯಿಕ, ವೈಚಾರಿಕ ನಿಲುವುಗಳು ಹೇಗೆ ಮಾದರಿಯಾಗಿರಬೇಕೆಂದು ಅರಿವಾಗುತ್ತದೆ.

ಕನ್ನಡ ಭಾಷೆಯಲ್ಲಿನ ಜಡತ್ವವನ್ನು ನಿವಾರಿಸಿಕೊಂಡು ಸರಳವಾಗಿ ಬರೆಯುತ್ತಿದ್ದ ಮಾಸ್ತಿಯವರ ಭಾಷೆ ಶೈಲಿ ಲಂಕೇಶರಿಗೆ ಸ್ಫೂರ್ತಿಯ ಸೆಲೆಯಾಗಿತ್ತು. ಅವರೇ ಒಂದೆಡೆ ಹೇಳುವ ಹಾಗೆ "ಕೃತಿಯ ಬಗ್ಗೆ ಉತ್ಪ್ರೇಕ್ಷೆ ಸುಳ್ಳು, ಅನಗತ್ಯ ಹೊಗಳಿಕೆ, ಅವೈಚಾರಿಕ ಖಂಡನೆ

ಮುಂತಾದ್ದರಿಂದ ದೂರವಿದ್ದು ಕೃತಿಗೆ ತನ್ನನ್ನು ತಾನುಕೊಟ್ಟುಕೊಂಡೂ ನಿಷ್ಠುರವಾಗಿರಬಲ್ಲವನು ವಿಮರ್ಶಕ."[2]

ಕುವೆಂಪು, ಬೇಂದ್ರೆ, ಅಡಿಗ, ತೇಜಸ್ವಿ, ಅನಂತಮೂರ್ತಿಯವರ ಅನೇಕ ಕೃತಿಗಳನ್ನು ಅವರು ವಿಮರ್ಶೆ ಮಾಡಿದ್ದಾರೆ. 'ನಾನೇಕೆ ಬರೆಯುತ್ತೇನೆ?' ಎನ್ನುವ ತಮ್ಮ ಅಂತರಂಗದ ಪ್ರಶ್ನೆಗೆ ಅವರು ಕೊಳ್ಳುವ ಸಮರ್ಥನೆಯ ಮಾತುಗಳು ಹೀಗಿವೆ "ಒಂದೇ ಒಂದು ರಾತ್ರಿ ಬಳಸಿ ಹೆಣ್ಣನ್ನು ಕೊಂದು ಹಾಕುತ್ತಿದ್ದ."[3] ಶಹಾ ದೊರೆಯನ್ನು ಕುತೂಹಲಕರ ಕತೆಗಳನ್ನು ಹೇಳುವ ಮೂಲಕ ಒಲಿಸಿಕೊಂಡ ಶಹಜಾದೆ, ಅನುಭವಗಳನ್ನು ಹೇಳುವ ಮೂಲಕ ಬಿಡುಗಡೆ ಪಡೆದಳು. ಅವಳಲ್ಲಿ "ಕಾಣುವ ಮತ್ತು ವ್ಯಕ್ತ ಪಡಿಸುವ ಕಲೆ ಇಲ್ಲದಿದ್ದರೆ ಸಾವು ಅವಳನ್ನು ನುಂಗುತ್ತಿತ್ತು."[4]

ಕೃತಿಯಲ್ಲಿರುವುದನ್ನು ಕಾಣು ಕಾಣ್ಕೆ ಮತ್ತು ಅದನ್ನು (ಎಷ್ಟೇ ಕಹಿಯಾಗಿದ್ದರೂ) ಸರಿಯಾದ ರೀತಿಯಲ್ಲಿ ಗಮನಿಸಿ ವಿಮರ್ಶಿಸುವ ಕೆಲಸ ಆಗಬೇಕು ಎಂದು ಅವರು ಬಯಸಿದವರು; ಹಾಗೆ ನಡೆದು ತೋರಿಸಿದವರು ಲಂಕೇಶ್. ಕೆಲವು ಸಮಕಾಲೀನ ಅಂಶಗಳ ಬಗ್ಗೆ ಅತ್ಯಂತ ಉಗ್ರವಾಗಿ ಟೀಕಿಸುತ್ತಾರೆ ಎನಿಸಿದರೂ, ಆ ವಿಷಯದಲ್ಲಿ ಆಗುತ್ತಿರುವ ಅನ್ಯಾಯ, ಸರಿಪಡಿಸಬೇಕಾದ ನೋವನ್ನು ಅವರ ವಿಮರ್ಶೆಗಳಲ್ಲಿ ಕಾಣಬಹುದು.

ಲಂಕೇಶರಿಗೆ ಭ್ರಷ್ಟತೆ ಸಲಾಮು ಹೊಡೆಯುವಿಕೆಗಳ ವಿರುದ್ಧ ಆಕ್ರೋಶ ಮತ್ತು ಅಂತಹ ಗುಣಗಳ ಬಗ್ಗೆ ತೀವ್ರ ಅಸಹ್ಯ ಇದ್ದುದರಿಂದಲೇ ಅಷ್ಟು ದಿಟ್ಟತನದಿಂದ ಮತ್ತು ನಿಷ್ಠುರತೆಯಿಂದ ಬರೆಯಲು ಸಾಧ್ಯವಾದದ್ದು. ಲಂಕೇಶರು ಯಾರಿಗೂ ಹೆದರದೆ ಬರೆದರೂ, ಅವರ ಬರಹಗಳಿಗೆ ಟೀಕೆಗಳು ಬಂದರೂ, ಓದುಗರ ಮನಸ್ಸಿನಲ್ಲಿ ಅವರ ಬರವಣಿಗೆ ಸತ್ಯವನ್ನೇ ಹೇಳುತ್ತದೆ ಎಂಬ ಭಾವನೆಯನ್ನು ಹುಟ್ಟು ಹಾಕಿದವು.

ಸಂಪ್ರದಾಯವಾದಿಗಳಂತೆ, ಗೊಡ್ಡುಗಳ ಹಾಗೆ ಕೃತಿಯಲ್ಲಿರುವ ಒಂದೇ ಒಂದು ಮುಖದ ಚಿತ್ರಣ ಮೂಡಿಸಿಕೊಂಡು ಹೆಸರಿಡುವುದು, ಯಾವುದೋ ತಮಗೆ ಅಹಿತವಾದ ಅಂಶ ಇದೆ ಎಂದು ಹೀಯಾಳಿಸುವುದು. ಇಂತಹ ಎಲ್ಲವನ್ನೂ ಮೀರಿದ ವಿಮರ್ಶೆ ಲಂಕೇಶರದು. ಜೀವಂತಿಕೆಯ ನೆಲೆಯ ಮೇಲೆ ಕಣ್ಣು ನೆಟ್ಟು ನಾಣ್ಯದ ಎರಡೂ ಮುಖಗಳಿಗೆ ಪ್ರಾಮುಖ್ಯವಿರುವ ಹಾಗೆ ಕೃತಿಯ ಎಲ್ಲಾ ಮುಖಗಳನ್ನು ಸೂಕ್ಷ್ಮವಾಗಿ ಗಮನಿಸಬೇಕೆಂಬುದು ಲಂಕೇಶರ ಆಶಯ.

ಸೂಕ್ಷ್ಮಗ್ರಹಿಕ ಹುಟ್ಟು ಹಾಕುವ ಮೌಲ್ಯವನ್ನು ನಂಬಿದರೆ ಸಾಹಿತ್ಯ ಸರಿಯಾದ ದಿಕ್ಕಿನಲ್ಲಿ ಚಲಿಸುತ್ತದೆ. ಅದು ಹೊಸದಾದರೂ ಆಗಿರಬಹುದು. ಹಳೆಯದಾದರೂ ಆಗಿರಬಹುದು.

---

[2] 'ಪ್ರಸ್ತುತ' : ಪಿ. ಲಂಕೇಶ್ : ಪತ್ರಿಕೆ ಪ್ರಕಾಶನ, 2006

[3,4] 'ದೊರೆ ಈಡಿ ಪಸ್ ಮತ್ತು ಅಂತಿಗೊನೆ' 'ಪ್ರಸ್ತುತ'ದ ಲೇಖನ, ಪತ್ರಿಕೆ ಪ್ರಕಾಶನ, 2006.

ಮೌಲ್ಯಗಳನ್ನು ಉಳಿಸಿಕೊಂಡು ಹೋಗುವುದಷ್ಟೇ ಮುಖ್ಯವಾಗಬೇಕು ಅದು ಅವರ ವಿಮರ್ಶೆಯಲ್ಲಿ ಫಲಿಸಿದೆ.

ಲಂಕೇಶರ ವಿಮರ್ಶಾ ಪ್ರಜ್ಞೆಯಲ್ಲಿ ಗಮನಿಸಬೇಕಾದ ಅಂಶಗಳು ಕ್ರಿಯೆ-ಪ್ರತಿಕ್ರಿಯೆ, ಸತ್ಯ-ಪ್ರಾಮಾಣಿಕತೆ, ಪ್ರೀತಿ-ಟೀಕೆ, ಸ್ನೇಹ - ಸಿನಿಕತೆ ಮುಂತಾದವು. ಭಾಷೆಗೆ ಮೌಲ್ಯ ಬರುವುದು ನಿಜವನ್ನು ಹೇಳುವ ಮೂಲಕ ಆದ್ದರಿಂದ ಸುಳ್ಳಿಗೆ ಅವರ ಬರಹದಲ್ಲಿ ವಿಮರ್ಶೆಯಲ್ಲಿ ಜಾಗವಿಲ್ಲ. ಅವರ ದೊಡ್ಡತನ ಕಾಣುವುದು ಆದಷ್ಟು ಹೆಚ್ಚುಜನ ಓದುವಂತಿರಬೇಕೆಂಬ ಗುರಿ.

ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ. ಕನ್ನಡ ಭಾಷೆ, ಜೀವನ, ಆಡಳಿತ, ಶಿಕ್ಷಣದಲ್ಲಿ ಬಳಸಲ್ಪಡಬೇಕು ಎಂಬುದನ್ನು ಲಂಕೇಶ್ ಒಪ್ಪಿದರೂ, 'ಅಭಿಮಾನ'ದ ಹೆಸರಿನಲ್ಲಿ ಜನರನ್ನು ತಪ್ಪುದಾರಿಗೆ ಎಳೆಯುತ್ತಿರುವ ಕ್ರಮದ ಕುರಿತು ಅವರ ವಿರೋಧವಿದೆ. ಪತ್ರಿಕೋದ್ಯಮದ ಚಾರಿತ್ರ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಲಂಕೇಶ್, ತಾವು ಕಂಡಿದ್ದ ಸತ್ಯಗಳನ್ನು ಖಚಿತವಾಗಿ ಮತ್ತು ನಿಖರವಾಗಿ ವರದಿಮಾಡಿ ಚರ್ಚಿಸಬಲ್ಲ ಪತ್ರಕರ್ತ. ಆದರೆ ಈ ಗುಣಗಳಿಲ್ಲದ ಪತ್ರಿಕೋದ್ಯಮ ಸೊರಗುತ್ತಿರುವುದರ ಬಗ್ಗೆ ಪತ್ರಕರ್ತರು ಬೌದ್ಧಿಕ ಗುಲಾಮಗಿರಿಗೆ ಹೋಗುತ್ತಿರುವುದರ ಬಗ್ಗೆ ಅವರು ತೀವ್ರ ಆಕ್ಷೇಪ ವ್ಯಕ್ತ ಪಡಿಸುತ್ತಾರೆ.

ಈ ಕುರಿತ ಲಂಕೇಶರ ಆಡುವ ಮಾತು ಕಟು ಎನಿಸಿದರೂ ಅರಿವು ಸಮಕಾಲೀನ ವ್ಯವಸ್ಥೆಯೊಳಗಿನ ಹುಳುಕುಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನವಾಗಿ ಜೀವನ ಪ್ರೀತಿ, ಆತ್ಮ ವಿಶ್ವಾಸ, ವೈಚಾರಿಕತೆಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದ (ಕುವೆಂಪು) ಕವಿಯ ಧೋರಣೆಗಳು ಸರಿ ಎನಿಸಿದಾಗ ನಮ್ರವಾಗಿಯೇ ಸ್ವೀಕರಿಸುವ ಲಂಕೇಶ್ ಮಿತಿಗಳನ್ನೂ ತೋರಿಸುವುದರಲ್ಲಿ ಹಿಂಜರಿಯುವುದಿಲ್ಲ. ಭ್ರಷ್ಟರೊಂದಿಗೆ ನಿಂತುಕೊಳ್ಳಲೂ ಅಸಹ್ಯಪಡುತ್ತಿದ್ದರು ಅವರು.

ಸಹನೆಯಿಂದ ರಮ್ಯವಾಗಿ ಬರೆಯಬಲ್ಲ ಲಂಕೇಶರಿಗೆ ಕಠೋರ ನುಡಿಗಳನ್ನಾಡುವುದೂ ಅಷ್ಟೇ ಸುಲಭ. ಆದರೆ ಪೂರ್ವಾಗ್ರಹ ಪೀಡಿತರಾಗಿರದೆ ಅಥವಾ ಹೊಟ್ಟೆಕಿಚ್ಚಿನಿಂದ ಹೊಂದಿದ ನಿಲುವುಗಳನ್ನು ತೋರದೆ ಇರುವುದು ಗಮನಾರ್ಹ ಲಂಕೇಶರ ಕಟು ಟೀಕೆಯಲ್ಲಿ ಅಡಿಗರ ಸಿನಿಕತನ ಸ್ಪಷ್ಟವಾಗಿ ಬಿಂಬಿತವಾಗಿದೆ.

ಸಾಮಾಜಿಕ, ಸಾಹಿತ್ಯಿಕ ಸಂದಿಗ್ಧಗಳನ್ನು ನಿವಾರಿಸುವ ನೆಪದಲ್ಲಿ ಲಂಕೇಶ್ ವರ್ತಮಾನದ ಸಡಿಲತೆಗಳನ್ನು ಸೂಚಿಸುತ್ತಾರೆ. ಕೃತಿಯ ಸತ್ವ ಮತ್ತು ಲೋಪಗಳನ್ನು ಹೇಳುವಾಗ ಲಂಕೇಶ್ ಮೂಲಾಜಿಗೆ ಒಳಗಾಗುವುದಿಲ್ಲ. ಅವರ ವಿಮರ್ಶಾತ್ಮಕ ನಿಲುವುಗಳಲ್ಲಿ ಅವರದೇ ಆದ 'ಪ್ರಜ್ಞೆ' ಕಾಣಸಿಗುತ್ತದೆ.

ಪ್ರತಿಯೊಂದನ್ನು ಅನುಮಾನಿಸಿ ನಂಬುವ, ನಂಬಿದ್ದನ್ನು ಖಚಿತ ಪಡಿಸುವ ಜಾಯಮಾನ ಲಂಕೇಶರದು. ಕಾಲ ಮತ್ತು ಸಂದರ್ಭದ ಒತ್ತಾಯದಿಂದ ಬರೆಯುತ್ತಿದ್ದ ಟೀಕೆ-ಟಿಪ್ಪಣಿಯಂಥ ಅಂಕಣ ಬರಹಗಳು ವಿಮರ್ಶೆಯ ಪರಿಕರಗಳನ್ನು ಒಳಗೊಂಡು ಅಪೂರ್ವವಾದ ವಿಷಯ ವೈವಿಧ್ಯವನ್ನು ಹೊಂದಿವೆ. ಜವಾಬ್ದಾರಿಯ, ವಿವೇಕದ ಬರಹಗಳವು; ಒಂದೇ .... ಎರಡೇ........ ವಿಷಯ ವಿಸ್ತಾರ ನೂರು. ಯಾವುದೇ ಸಂಗತಿಯಾಗಲೀ, ಅಲ್ಲಿ ವಾಸ್ತವ ಸತ್ಯ, ಮೆಚ್ಚುಗೆ, ಟೀಕೆ ಅನಾವರಣ ಆಗುವುದು ಖಂಡಿತ. ಅದು ಒಂದು ಬಗೆಯ ಸೃಜನಶೀಲ ಸಿಟ್ಟು ಮಾತ್ರ, ನಾಶ ಪ್ರವೃತ್ತಿ ಅಲ್ಲ.

ಮೇಲಿನ ಅಂಶಗಳ ನೆಲೆಯಲ್ಲಿ ಲಂಕೇಶರ ವಿಮರ್ಶಾ ಕೃತಿಗಳನ್ನು ಮುಂದಿನ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಈ ಮಾದರಿಗೆ 'ಪ್ರಸ್ತುತ' ಮತ್ತು 'ಕಂಡದ್ದು ಕಂಡ ಹಾಗೆ' ಎಂಬ ಅವರ ವಿಮರ್ಶಾ ಸಂಕಲನಗಳನ್ನು ಆಯ್ದುಕೊಂಡಿದೆ.

3.2. ಪ್ರಸ್ತುತ

ಈ ಕೃತಿಯ ಲೇಖನಗಳಲ್ಲಿ ಮೇಲ್ನೋಟಕ್ಕೆ ಗಮನಿಸಬಹುದಾದ ಅಂಶವೆಂದರೆ, ಸಾಹಿತ್ಯ ಕೃತಿಯೊಂದನ್ನು ಆಧಾರವಾಗಿರಿಸಿಕೊಂಡು ಆ ಕೃತಿಯ ಕರ್ತೃ ಅಥವಾ ಲೇಖಕರು ಕೃತಿಯಲ್ಲಿ ಮೂಡಿದ ಹೊಸ ಪ್ರಯೋಗಶೀಲತೆ ಮತ್ತು ಅದರಿಂದ ಎಷ್ಟು ಯಶಸ್ಸು ಸಾಧಿಸಿದರು ಮತ್ತು ಕೃತಿಯ ಮಿತಿಗಳೇನು ಎಂಬುದನ್ನು ವಿಶ್ಲೇಷಿಸಿರುವ ಬಗೆ.

ಈ ಕೃತಿಯಲ್ಲಿರುವ ಲೇಖನಗಳು ಅಂದಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ತಾಕಲಾಟಗಳು ದ್ವಂದ್ವಗಳನ್ನು ಹೊಂದಿವೆ ಎಂಬುದರ ಕಡೆ ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ: 'ಇಂಗ್ಲೀಷಿನಲ್ಲಿ ಬರೆಯುವ ಕನ್ನಡಿಗ: ರಾಜಾರಾವ್', 'ಚಂದ್ರಶೇಖರ ಕಂಬಾರ – ನಾರ್ಸಿಸಿಸ್, 'ಬೆಂಗಳೂರಲ್ಲಿ ಬರ್ನಾರ್ಡ್‌ಷಾ ಮತ್ತು ಪಿಂಟರ್' ಇನ್ನು ಮುಂತಾದವು.

ಇಲ್ಲಿ ಲೇಖಕರ ಧೋರಣೆಗಳನ್ನು ಸಾಕಷ್ಟು ಅಧಿಕೃತ ಪುರಾವೆಗಳೊಂದಿಗೆ ಮತ್ತು ಅಂದಿನ ಸಮಕಾಲೀನ ಸಾಹಿತ್ಯ ಬಿಕ್ಕಟ್ಟುಗಳನ್ನು ಸಾಕ್ಷಿ – ಆಧಾರಗಳೊಂದಿಗೆ ಚರ್ಚಿಸಿದ್ದಾರೆ. 'ಸಾಹಿತ್ಯ ಕೃತಿಯೊಂದನ್ನು ಮುಖ್ಯವಾಗಿ ಇರಿಸಿಕೊಂಡು, ಆಯಾಯ ಲೇಖಕರ ಪ್ರಯೋಗಶೀಲತೆ ಮತ್ತು ಮಿತಿಗಳನ್ನು ಗುರುತಿಸುವ ಅಂದಂದಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ದ್ವಂದ್ವಗಳ ಕಡೆ ಗಮನ ಸೆಳೆಯುವ ಪ್ರಯತ್ನವನ್ನು' ಈ ಲೇಖನಗಳಲ್ಲಿ ಮಾಡಲಾಗಿದೆ.

ಕವಿ ಅಥವಾ ಲೇಖಕರ ಗುಣಗಳನ್ನು ಮೆಚ್ಚುವ ಲಂಕೇಶ್ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಹೇಳುವಾಗ ಯಾವ ಹಂಗಿಲ್ಲದೆ ಹೇಳುತ್ತಾರೆ, ಸತ್ಯವನ್ನು ಮರೆಮಾಚದಿರುವುದು ಅವರ ವಿಶೇಷ.

ಲಂಕೇಶ್ ಒಂದು ಕೃತಿಯನ್ನು ವಿಮರ್ಶಿಸುವ ಸಂದರ್ಭದಲ್ಲಿ ಲೇಖಕನ ಜೀವನಕ್ರಮ, ಆತನ ಸ್ವಭಾವಜನ್ಯ ಪರಿಣಾಮಗಳು, ಸಮಕಾಲೀನ ಬಿಕ್ಕಟ್ಟುಗಳೆಲ್ಲ ತೆರೆದು ಕೊಳ್ಳುತ್ತವೆ. ಕೃತಿಕಾರ ಎಷ್ಟರಮಟ್ಟಿಗೆ ತನ್ನ ಸಾಚಾ ಅನುಭವಗಳನ್ನು ಪ್ರಾಮಾಣಿಕವಾಗಿ ನಿರೂಪಿಸುತ್ತಾನೆ ಎಂಬುದರ ಕಡೆಗೇ ಅವರ ಗಮನ ಹೆಚ್ಚು.

ಸುಮತೀಂದ್ರರ ಮೆದುವಾದ ಧ್ವನಿ, ಎ.ಕೆ. ರಾಮಾನುಜನ್ ಅವರ 'ಸಂಗ್ರಹ ಗುಣದ ಖಚಿತತೆ', ಕಂಬಾರರ ನಾಟಕಗಳಲ್ಲಿನ 'ಅಸಂಗತತೆ', ಕಾವ್ಯವಂತಿಕೆ, 'ತುಘಲಕ್'ನಲ್ಲಿನ ಅಪರೂಪದ ಕಥಾ ವಿನ್ಯಾಸ, ತೇಜಸ್ವಿ ಮತ್ತು ಅನಂತಮೂರ್ತಿಯವರ ಕಥನ ಶಿಲ್ಪ – ಇವುಗಳನ್ನು ಅತ್ಯಂತ ಸೂಕ್ಷ್ಮವಾಗಿ ಗುರುತಿಸಿರುವ ರೀತಿ ಬೆರಗು ಹುಟ್ಟಿಸುತ್ತದೆ.

ಬೆಕೆಟ್, ಬರ್ನಾರ್ಡ್‌ಷಾ, ಪಿಂಟರ್‌ನಂತ ಪಾಶ್ಚಾತ್ಯ ನಾಟಕಕಾರರ ಆಲೋಚನೆಗಳನ್ನು ಕನ್ನಡಕ್ಕೆ ಒಗ್ಗಿಸಿಕೊಳ್ಳುವ ಪ್ರಯತ್ನ ಗಮನಾರ್ಹ ರೀತಿಯಲ್ಲಿ ದಾಖಲಾಗಿದೆ.

ಈ ಕೃತಿಯ ಹದಿನೇಳು ಲೇಖನಗಳೂ ವಿವಿಧ ವಸ್ತು ವಿಷಯಗಳಿಗೆ ಸಂಬಂಧ ಪಟ್ಟಿವೆ. ಹಾಗಾಗಿ ಅವುಗಳನ್ನು ಸೃಜನಶೀಲ–ಸಾಹಿತ್ಯ–ಸಾಹಿತ್ಯೇತರ ಎಂದು ನಿಖರವಾಗಿ ವಿಂಗಡಿಸಲು ಬರುವುದಿಲ್ಲ ಅಥವಾ ಸಾಹಿತ್ಯ – ಪತ್ರಿಕೋದ್ಯಮ – ರಾಜಕೀಯ–ಸ್ವಭಾಷೆ–ನಾಟಕ – ಸಣ್ಣಕತೆ ಎಂಬ ಶೀರ್ಷಿಕೆಗಳಡಿಯಲ್ಲಿಯೂ ಗಮನಿಸಬಹುದು. ಅಧ್ಯಯನದ ಅನುಕೂಲಕ್ಕಾಗಿ ಭಾಷೆ – ಸಾಹಿತ್ಯ ಮತ್ತು ಲೇಖಕ ಆಧಾರಿತ ವಿಮರ್ಶಾ ಲೇಖನಗಳು ಎಂಬ ಶೀರ್ಷಿಕೆಗಳಡಿಯಲ್ಲಿ ಮುಂದೆ ವಿಶ್ಲೇಷಿಸಲಾಗಿದೆ.

3.2.1. ಭಾಷೆ ಆಧಾರಿತ ವಿಮರ್ಶಾ ಲೇಖನಗಳು.

'ಸ್ವಭಾಷಾ ಚಳುವಳಿ'ಯ ಹೆಸರಲ್ಲಿ ಹಿಂದಿಗೆ ಆಹ್ವಾನ[1] ಲೇಖನದಲ್ಲಿ ಮಾತೃಭಾಷೆಯನ್ನೂ ಬಿಡಲಾಗದೆ, ರಾಷ್ಟ್ರಭಾಷೆಯೆಂದು ಹಿಂದಿಯನ್ನೂ ಒಪ್ಪಿಕೊಳ್ಳದವರ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಹೊರಗೆ ನೋಡಲು ಮಾತ್ರ ಎಲ್ಲರ ಕೈಯಲ್ಲಿ ಸೈ ಎನಿಸಿಕೊಳ್ಳುವ ಸಲುವಾಗಿ ಹಿಂದಿಯನ್ನು ಒಪ್ಪಿಕೊಂಡು, ಬೇಕಾದಾಗ ಮಾತ್ರ ಕನ್ನಡವನ್ನು ಬಳಸುವ ಗೋಸುಂಬೆ ಗುಣದ ವ್ಯಕ್ತಿಗಳ ವಿರುದ್ಧ ಕಿಡಿ ಕಾರುತ್ತಾರೆ.

ಸ್ನೇಹಿತನ ಶತ್ರು ಸ್ನೇಹಿತ ಎಂಬಂತೆ ಇಲ್ಲಿ ಇಂತ ವ್ಯಕ್ತಿಗಳು ಕೌರವರನ್ನು ಮಟ್ಟಹಾಕಲು ಶಕುನಿ ಪಾಂಡವರನ್ನು ಬಳಸಿಕೊಂಡಂತೆ ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ತರಲು ಇಂಗ್ಲೀಷನ್ನು ಗಾಳವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಕಾಳಜಿ ಇದೆ. ರಾಜಕೀಯದವರು ಹೇಗೆ ಮುಗ್ಧ ಜನರ

---

[1] 'ಪ್ರಸ್ತುತ' : ಪು.ಸಂ. 70: ಪತ್ರಿಕೆ ಪ್ರಕಾಶನ, 2006.

ಮನಸ್ಸಿನಲ್ಲಿ 'ಸ್ವಭಾಷೆ', 'ಪರಭಾಷೆ' ಎಂಬಂತ ಪದಗಳ ಬಳಕೆಯಿಂದ ರೊಚ್ಚಿಗೇಳುವ ಮನೋಭಾವವನ್ನು ಉಂಟುಮಾಡುತ್ತಿದ್ದಾರೆ ಎಂಬುದನ್ನು ವಿವರಿಸುತ್ತಾರೆ.

ಕನ್ನಡ ಹೇಗೆ ಬಡವಾಗುತ್ತಿದೆ? ಸರ್ಕಾರದ ನೀತಿಗಳೇಕೆ ಕನ್ನಡ ಪರವಾಗಿಲ್ಲ ಎಂಬ ಚಿಂತನೆ ಕನ್ನಡದ ಕುರಿತು ಮಾತಾಡಿದ ಇಂಗ್ಲೀಷ್ ಡಾಕ್ಟರೊಬ್ಬರು "ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಕನ್ನಡದಲ್ಲಿ ವಚನಗಳನ್ನು ಬರೆದಾಗ ಇಂಗ್ಲೀಷ್ ಕಾಡು ಭಾಷೆಯಾಗಿತ್ತು "[2] ಹೀಗೆ ಸಾಗುತ್ತದೆ ಮಾತುಗಳು. ಇದನ್ನು ಕೇಳಿದ ಲಂಕೇಶರು ಭಾಷಾಭಿಮಾನ ಇರುವಷ್ಟಿದ್ದರೆ ಸಾಕು ಅತಿಯಾದರೆ ಅದು ಬೇರೆ ಭಾಷೆಯನ್ನು ಹಾಳು ಮಾಡುವುದಕ್ಕಿಂತ ನಮ್ಮನ್ನೇ ನುಂಗಿ ಹಾಕಿಬಿಡುತ್ತದೆ ಎಂದೂ ಎಚ್ಚರಿಸುತ್ತಾರೆ.

ಇತರ ಭಾಷೆಗಳಾದ ಸಂಸ್ಕೃತ, ಉರ್ದು ಮುಂತಾದುವು ಕನ್ನಡದ ಮೇಲೆ ಬೀರುತ್ತಿರುವ ಪ್ರಭಾವವನ್ನು ಹೋಗಲಾಡಿಸಲು ಪ್ರಯತ್ನ ನಡೆಯಬೇಕು. ಇದಕ್ಕೆ ಇಂಗ್ಲೀಷ್ ಒಂದು ಪ್ರಮುಖ ಸಾಧನ ಎಂದು ಹೇಳುವ ಲಂಕೇಶ್ ಎಷ್ಟಾದರೂ ಇಂಗ್ಲೀಷ್ ಪ್ರಾಧ್ಯಾಪಕರಲ್ಲವೇ? ಎನಿಸುತ್ತಾರೆ.

'ಅಸ್ವಸ್ಥತೆ – ಸಾಹಿತ್ಯ'[3] ಲೇಖನ ಒಬ್ಬ ಅಧ್ಯಾಪಕನ ಮನಸ್ಸಿನ ತೊಳಲಾಟದ ಸೂಕ್ಷ್ಮ ನಿರ್ವಚನ. ಮೇಲ್ನೋಟಕ್ಕೆ ಎಷ್ಟೇ ಗಟ್ಟಿ, ಸ್ಥಿರ ಎಂದು ತೋರಿಸಿಕೊಂಡರೂ ಮಾತೃಭಾಷೆಯ ಬಗ್ಗೆ ಏನೂ ಮಾಡುತ್ತಿಲ್ಲವೆಂಬ ಅರಿವೂ ಕಾಣುತ್ತದೆ. ಇಲ್ಲೇ ಲಂಕೇಶರ ಬರವಣಿಗೆಯ ವೈಶಿಷ್ಟ್ಯ ಕಾಣಿಸುವುದು ಎಲ್ಲರೂ ಕಳಕಳಿಯನ್ನು ಬರಿಯ ಮಾತಿನಲ್ಲಿ ತೋರಿಸಿ ಅನುಕಂಪ ಬೀರಿ ನಂತರ ಆ ಕಡೆ ಯೋಚಿಸದೆ ತಮ್ಮ ಜೀವನದಲ್ಲಿ ಲೀನವಾಗುತ್ತಾರೆ. ಆದರೆ ಲಂಕೇಶ್ ಮಾತ್ರ ಇವರೆಲ್ಲರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಏಕೆಂದರೆ ಅವರಿಗೆ ಮಾತಿಗಿಂತ ಕೃತಿ ಮುಖ್ಯ. ತಮ್ಮ ಲೇಖನಗಳಲ್ಲಿ ಅದನ್ನು ತೋರಿಸುತ್ತಾರೆ ಕೂಡ. ಉದಾಹರಣೆಗೆ: 'ಸಾಹಿತ್ಯ ಪಾಠ ಮಾಡುವವನನ್ನೇ ತೆಗೆದುಕೊಳ್ಳೋಣ......... ಒಂದು ಆಧುನಿಕ ಸಂದರ್ಭದಲ್ಲಿ ನಿಂತು ಆಧುನಿಕ ಜೀವನವನ್ನು ಕುರಿತು ಹೇಳುತ್ತಾನೆ........ ಯಾರಾದರೂ ಪ್ರಶ್ನೆ ಕೇಳಿದರೆ? ಎಂಬ ಭಯದಲ್ಲಿ ಅವನ ಜೀವನ ಸಾಗುತ್ತದೆ .... ಹೀಗೇಕೆ?"[4] ಎಂಬಲ್ಲಿ ಲಂಕೇಶರು ಯೋಚನೆ ಯಾವಾಗಲೂ ಸ್ವಂತದ್ದಾಗಿರಬೇಕು. ನಿಜವಾಗಿ ಆ ಪರಿಸ್ಥಿತಿಯೊಂದಿಗೆ ಪರಸ್ಪರ ಕಲೆತಾಗ ಮಾತ್ರ ನೈಜತೆ ಸಿಗಲು ಸಾಧ್ಯ ಇಲ್ಲದಿದ್ದರೆ ಭಾಷೆಯೊಲ್ಲಾ ಕ್ಲೀಷೆಗಳಿಂದ ತುಂಬಿಹೋಗುತ್ತದೆ. ಆಗ ಜೀವಂತಿಕೆ ಎಂಬುದನ್ನು ಕಾಣಲೂ ಸಾಧ್ಯವಿಲ್ಲ ಎಂಬ ನಿಲುವನ್ನು ಪ್ರಕಟಿಸಿದ್ದಾರೆ.

---

[2] 'ಪ್ರಸ್ತುತ' : ಪುಟ ಸಂ. 71

[3] ಅದೇ : ಪು. ಸಂ. 39.

[4] 'ಪ್ರಸ್ತುತ' –ಪು.ಸಂ. 41:

ಒಂದು ಭಾಷೆ ತನ್ನ ಬೆಳವಣಿಗೆಯ ಹಂತದಲ್ಲಿ ಎದುರಿಸಿದ ಸವಾಲುಗಳು ಮತ್ತು ಕಂಡುಕೊಂಡ ಅರ್ಥಪೂರ್ಣ ಉತ್ತರಗಳ ಮಾದರಿಯನ್ನು ಓದುಗರ ಮುಂದಿಡುತ್ತಾರೆ. ಭಾಷಾಭಿಮಾನದ ದೃಷ್ಟಿಯಿಂದ ಉಂಟಾಗುತ್ತಿದ್ದ ಸಣ್ಣ ಪುಟ್ಟ ಕಲಹಗಳ ಸಂದರ್ಭದಲ್ಲಿ ಆ ಕ್ಷಣದಲ್ಲಿ ಅದೇ ಮುಖ್ಯ ಎಂದುಕೊಂಡು ಕಾರಣ – ಪರಿಣಾಮಗಳ ಸಾಮಾಜಿಕ ಕ್ರಿಯೆಯಲ್ಲಿ ಆಳವಾಗಿ ತೊಡಗಿಸಿಕೊಂಡುದರ ಫಲವನ್ನು ಈ ಲೇಖನಗಳಲ್ಲಿ ಗುರುತಿಸಬಹುದು. ಇಂಥ ಯೋಚನಾ ಲಹರಿ ರೂಪುಗೊಳ್ಳುವುದು ಜೀವನವನ್ನು ಗ್ರಹಿಸುವ ರೀತಿಯಲ್ಲಿನ ಮುಕ್ತತೆ, ಜೊತೆ ಜೊತೆಗೆ ನಿರಂತರ ಚಲನಶೀಲತೆಯನ್ನು ಹೊಂದಿರುವ ಲೇಖಕರಲ್ಲಿ ಮಾತ್ರ. ಅಂಥ ಅಪರೂಪದ ಲೇಖಕ ಲಂಕೇಶ್.

ಭಾರತೀಯತೆ ಎಂದಾಗ ಎಲ್ಲಾ ಭಾಷೆಗಳಿಂದ ಕೂಡಿದ್ದು, ಆಗ ಮಾತ್ರ ಪೂರ್ಣತ್ವಕ್ಕೆ ಬೆಲೆ, ಹಾಗಾಗಿ ಭಾಷೆಗಳೆಲ್ಲವೂ ಕೂಡಿದಾಗ ಮಾತ್ರ ಅನುಭವಗಳನ್ನು ಸಜೀವವಾಗಿರಿಸಲು ಸಾಧ್ಯ. ಅದು ಸಾಹಿತ್ಯವನ್ನೂ ಫಲವತ್ತಾಗಿಸುತ್ತದೆ ಎಂದು ಅವರು ಹೇಳುತ್ತಾರೆ. ಅವರ ಈ ನಿಲುವು ಸ್ಥಳೀಯತೆ – ದೇಶೀಯತೆಗಳ ಸಂಗಮವಾಗಿದೆ.

3.2.2. ಸಾಹಿತ್ಯಾಧಾರಿತ ವಿಮರ್ಶಾ ಲೇಖನಗಳು

'ತುಘಲಕ್; ಒಂದು ಟಿಪ್ಪಣಿ' ಲೇಖನದಲ್ಲಿ ಸಾಮಾನ್ಯ ವಿಮರ್ಶಕರಿಗಿಂತ ಭಿನ್ನ ನೆಲೆಯಲ್ಲಿ ಲಂಕೇಶ್ ಚಿಂತಿಸಿದ್ದಾರೆ ಮೊದಲಿಗೆ ಗಿರೀಶ್ ಕಾರ್ನಾಡರ ಪ್ರಯತ್ನವನ್ನು ಮೆಚ್ಚಿಕೊಳ್ಳುತ್ತಾರೆ; "ತುಘಲಕ್‌ನನ್ನು ಚರಿತ್ರೆಯ ಪುಟಗಳಿಂದ ಎತ್ತಿಕೊಂಡು ಚರಿತ್ರೆಗೆ ಚ್ಯುತಿ ಬಾರದಂತೆ ಗಿರೀಶ್ ಕಾರ್ನಾಡರು ಬರೆದಿದ್ದಾರೆ........."[5] ಎಂಬ ಮಾತು ಲಂಕೇಶರ ವಿಮರ್ಶನದ ಸೂಕ್ಷ್ಮತೆ, ಖಚಿತತೆ, ನಿಷ್ಪಕ್ಷಪಾತ ರೀತಿಯನ್ನು ಸಾಬೀತು ಪಡಿಸುತ್ತವೆ. ಈ ನಾಟಕದ ವಿಶ್ಲೇಷಣೆಯಲ್ಲಿ ಕೃತಿಯಲ್ಲಿರುವ ಒಳ್ಳೆಯ ಅಂಶಗಳ ಜೊತೆಗೆ ಯಾವುದನ್ನು ಇನ್ನಾವ ರೀತಿಯಲ್ಲಿ ಬಳಸಿದ್ದರೆ ಸರಿ ಇರುತ್ತಿತ್ತು ಎಂಬುದನ್ನೂ ಹೇಳುತ್ತಾರೆ. ಲಂಕೇಶರು ಸಾಮಾನ್ಯವಾಗಿ ಎಲ್ಲವನ್ನೂ ತಮಗೆ ತಾವೇ ಅನ್ವಯಿಸಿಕೊಂಡು ತೀವ್ರವಾಗಿ ಬರೆಯುವ ವಿಮರ್ಶಕ ಹಾಗಾಗಿ ಇಲ್ಲಿ ಉಳಿದ ವಿಮರ್ಶಕರು ಗಮನಿಸಲಾರದ ಅಂಶವನ್ನು – ತುಘಲಕ್ ನಾಟಕದ ಆರಂಭವನ್ನು – ಗಮನಿಸಿದ್ದಾರೆ.

ನಾಟಕ ಪ್ರಾರಂಭವಾಗುವುದು ತುಘಲಕ್ ತಂದೆಯ ಕೊಲೆಯ ವಿಷಯದ ಪ್ರಸ್ತಾಪದೊಂದಿಗೆ. ಇಲ್ಲಿ ತುಘಲಕ್ ಎಂತವನೆಂಬುದರ ಪರಿಚಯ ಆಗಲೇ ನೋಡುಗರಿಗೆ ಆಗಿ ಬಿಟ್ಟಿರುತ್ತದೆ. ಜೊತೆಗೆ ಎಲ್ಲರೂ ತುಘಲಕ್‌ನೊಂದಿಗೆ ತಮ್ಮನ್ನು ತಾವು ನೋಡಿಕೊಳ್ಳುವ

[5] 'ಪ್ರಸ್ತುತ' ಪು. ಸಂ. 98: ಪತ್ರಿಕೆ ಪ್ರಕಾಶನ, 2006.

ಪ್ರಯತ್ನದಲ್ಲಿ ತೊಡಗಿರುತ್ತಾರೆ. ಏಕೆಂದರೆ ಶುದ್ಧ ಮನಸ್ಸಿರದವ ತನ್ನ ಬಲಹೀನತೆಯನ್ನು ಮುಚ್ಚಿಟ್ಟು ಕೊಳ್ಳಲು ದರ್ಪ ಮತ್ತು ಅಹಂಕಾರದ ಬಲದಿಂದ ಸುತ್ತಲೂ ಇರುವವರನ್ನು ನಿಯಂತ್ರಿಸಲು ಬಯಸುತ್ತಾನೆ ಹಾಗೆಯೇ ತುಘಲಕ್ ಕೂಡ ಖಾಸಗಿ ಬದುಕಿನ ನೈರ್ಮಲ್ಯ ತನ್ನ ವ್ಯಕ್ತಿತ್ವದ ತಳಹದಿಯೆಂದು ತಿಳಿದುಕೊಳ್ಳದೇ ತೋಳ ಬಲದಿಂದ ಮಾತ್ರ ಜನರನ್ನು ಹದ್ದುಬಸ್ತಿನಲ್ಲಿಡುವ ಪ್ರಯತ್ನ ಮಾಡಿರುವುದನನು ಲಂಕೇಶ್ ಗುರುತಿಸುತ್ತಾರೆ.

ಪಾಶ್ಚಿಮಾತ್ಯ ಗ್ರೀಕ್ ದುರಂತ ನಾಟಕಗಳ ಹೋಲಿಕೆಯೊಂದಿಗೆ ಇಲ್ಲಿ ಕಾರ್ನಾಡ ತುಘಲಕ್‌ನ ಪಾತ್ರ ಪೋಷಣೆಯಲ್ಲಿ ಎಷ್ಟರ ಮಟ್ಟಿಗಿನ ಯಶಸ್ಸು ಸಾಧಿಸಿದ್ದಾರೆ ಎಂಬುದನ್ನು ಗುರುತಿಸುತ್ತಾರೆ. ಖಾಸಗಿ ಬದುಕು ಎಂದರೇನು? ಅದು ಆದರ್ಶಗಳ ಹಿನ್ನಲೆಯಲ್ಲಿ ಹೇಗೆ ಬದಲಾಗುತ್ತದೆ? ಉತ್ತಮ ಆರಂಭ ಇಲ್ಲದಿದ್ದರೆ, ಉತ್ತಮ ಅಂತ್ಯವನ್ನು ಹೇಗೆ ಬಯಸಲು ಸಾಧ್ಯ? ಹೀಗೆ ದ್ವಂದ್ವಗಳಿಗೆ ಸಿಲುಕಿಕೊಂಡ ತುಘಲಕ್ ಯಾವುದೇ ಬಲವಿಲ್ಲದೆ ನಿಲ್ಲಲು ನೆಲೆಯಿಲ್ಲದೆ ತನ್ನ ಜೀವನವನ್ನು ಅಂತ್ಯಗೊಳಿಸಿಕೊಳ್ಳುವುದು ಮನುಷ್ಯ ಜೀವನದಲ್ಲಿ ಏನನ್ನೋ ಪಡೆಯುವ ಹಂಬಲ ತಡಕಾಟಗಳಲ್ಲೇ ಯಾತ್ರ ಮುಗಿಸಿ ಬಿಡುತ್ತಾನೆ ಎಂಬ ಸಂದೇಶವನ್ನು ಹೊಂದಿರುವುದನ್ನು ಎಳೆ ಎಳೆಯಾಗಿ ವಿಶ್ಲೇಷಿಸಿರುವ, ಬಿಚ್ಚಿಟ್ಟರುವ ಬಗೆ ತೀವ್ರ ಪರಿಣಾಮಕಾರಿಯಾಗಿದೆ.

'ಒಬ್ಬ ಲೇಖಕನ ಕೆಲವು ಟಿಪ್ಪಣಿಗಳು'[6] ಲೇಖನದಲ್ಲಿ ಚೇಷ್ಟೆ, ವ್ಯಂಗ್ಯ, ವಿನೋದ, ವಿಡಂಬನೆ, ಇವುಗಳಿಂದ ಕೂಡಿದ ತಾತ್ವಿಕ – ಸಾಮಾಜಿಕ ನಿಲುವುಗಳನ್ನು ಹಾಗೂ ಧೋರಣೆಗಳನ್ನು ಧ್ವನಿಸುತ್ತಾರೆ.

ಲಂಕೇಶರಿಗೆ ಯಾವುದೇ ಹೊಗಳಿಕೆಯ ಆಸೆಯಿಲ್ಲ ಅಥವಾ ಹೊಗಳುವುದು ಅವರ ಜಾಯಮಾನವಲ್ಲ. ಹಾಗಾಗಿ ಅವರನ್ನು ಕಾಡುತ್ತಿರುವುದು ಜನರ ಅಭಿರುಚಿಯ ಮಟ್ಟ. ಅದು ಸಾಹಿತ್ಯ ರಚನೆಕಾರರಲ್ಲಿ ನೀರವತೆ ಅಥವಾ ಕ್ಲೀಷೆ ಮತ್ತು ಹೊಸತನವನ್ನು ತುಂಬುವ ಉತ್ಸಾಹವನ್ನು ಕಡಿಮೆ ಮಾಡುತ್ತಿದೆ.

ಇದರೊಂದಿಗೆ ವಿಮರ್ಶೆ ಮಾಡಲು ಬರುವ ಪುಸ್ತಕಗಳಲ್ಲಿ. ಇರುವುದನ್ನು ಇಲ್ಲದಿರುವುದನ್ನು ಗುರುತಿಸಿ, ಒಂದೆರಡು ಸಲಹೆಗಳನ್ನು ಕೊಟ್ಟರೆ ತೆಗೆದುಕೊಳ್ಳದಷ್ಟು ಭಂಡತನದ ಲೇಖಕರನ್ನು ಕಂಡರೆ ಎಲ್ಲಿಲ್ಲದ ಸಿಟ್ಟು ಲಂಕೇಶರಿಗೆ. ಜೊತೆಗೆ ಅವರು ಅದನ್ನು ಮತ್ತೊಬ್ಬರಿಗೆ ಕಳಿಸಿ ವಿಮರ್ಶೆ ಮಾಡಿಸಿದಾಗ ತುಂಬಾ ಚೆನ್ನಾಗಿದೆ ಎಂದು ಹೇಳಿದರೆ, ಲೇಖಕ ವಿಮರ್ಶಕನನ್ನು

[6] 'ಪ್ರಸ್ತುತ' – ಪು.ಸಂ. 85 : ಪತ್ರಿಕೆ ಪ್ರಕಾಶನ: 2006.

ನಿಯಂತ್ರಿಸುತ್ತಿದ್ದಾನೆ ಎಂದು ಯಾರಾದರು ಗುರುತಿಸುತ್ತಾರೆಯೇ? ಇಲ್ಲ. ಇದೇ ಕಾರಣಕ್ಕೆ ಓದುಗರ ಅಭಿರುಚಿಯ ಬಗ್ಗೆ ಅವರಿಗೆ ಒಳ್ಳೆಯ ಅಭಿಪ್ರಾಯವಿಲ್ಲ.

ಇಲ್ಲಿ ಗಮನಿಸಬೇಕಾದದ್ದು ಲೇಖಕರು ವಿಮರ್ಶಕರನ್ನು ನಿಯಂತ್ರಿಸುವುದರ ಬಗ್ಗೆ ಅಲ್ಲ. ಲಂಕೇಶರ ಅಭಿಪ್ರಾಯದ ಬಗ್ಗೆ. ಅದನ್ನು ಅವರ ಮಾತುಗಳೇ ಹೇಳುತ್ತವೆ. "ನನಗೆ ಹೊಳೆಯದ್ದನ್ನು ವಿಮರ್ಶಕ ಹೇಳಿದರೆ ಹೆಮ್ಮೆಯಾಗುತ್ತದೆ. ತಪ್ಪು ತೋರಿಸಿದರೆ ನಾಚಿಕೆಯಾಗುತ್ತೆ, ಮೊದಲನೆಯದರಿಂದ ಲೇಖಕನಿಗಿಂತ ಇನ್ನೊಬ್ಬ ಓದುಗನಿಗೆ ಹೆಚ್ಚು ಉಪಯೋಗ ಆಗಬಹುದು; ಎರಡನೆಯದರಿಂದ ಮುಂಚೆಯೇ ಹೇಳಿದ್ದರೆ ಸರಿ ಮಾಡಿ ಬಿಡುತ್ತಿದೆನಲ್ಲಾ ಎಂಬ ವ್ಯಥೆ ...."[7]

ಆದರ್ಶ ವಿಮರ್ಶಕನ ಲಕ್ಷಣಗಳಿವೆ ಅವರ ಬರಹಗಳಲ್ಲಿ. ಇದರ ಜೊತೆಗೆ, ಹೀಗೆ ವಿಮರ್ಶಕರನ್ನು ನಿಯಂತ್ರಿಸುವ ಲೇಖಕರಿಂದಾಗುವ ಅಪಾಯದ ಬಗ್ಗೆ ಬರೆಯುತ್ತಾ ಲೇಖಕನಿಗೂ ಲೇಖನಕ್ಕೂ ಇರುವ ಸಂಬಂಧವನ್ನು ನೋಡುತ್ತಾರೆ. ಖ್ಯಾತಿಗಾಗಿ ಆಸೆ ಪಟ್ಟು ಅದನ್ನು ಪಡೆಯ ಬಲ್ಲವನು ಅಗ್ಗದ ಜನಪ್ರಿಯ ಲೇಖಕ. ಇಂತಹ ಲೇಖಕರಿಗೆ ಇರುವ ನಿರ್ಲಕ್ಷ್ಯ, ಸ್ವತಂತ್ರ್ಯ ಮನೋಭಾವದ ಲೇಖಕರನ್ನು ಮೂಲೆ ಗುಂಪಾಗಿಸುತ್ತದೆ ಎಂಬ ಕಾಳಜಿ ಲಂಕೇಶರದು.

ತಮ್ಮ ಬರವಣಿಗೆಯ ಹಿಂದಿನ ಸೃಜನಶೀಲ ಪ್ರೇರಣೆಗಳ ಕಡೆ ಅವರು ಗಮನ ಕೊಡುತ್ತಾರೆ. ಹೀಗೆ ಅವರ ಗಮನ ಹೋಗುವುದು ಕಳೆದ ಇಪ್ಪತ್ತು ವರ್ಷಗಳ ಸಣ್ಣಕತೆಗಳ ಪ್ರಪಂಚದಲ್ಲಿ ಆತ್ಮ ವಿಶ್ವಾಸದ ಕೊರತೆ ಇರುವ ಲೇಖಕರ ಬಗ್ಗೆ ಮರುಕ ಇಡುವ ಲಂಕೇಶ್ ಎಲ್ಲರೂ ತಮ್ಮನ್ನು ಸ್ವತಂತ್ರ ಲೇಖಕರೆಂದು ಭಾವಿಸಿದರೂ, ಯಾರಿಂದಲೂ ಯಾವುದನ್ನೂ ಎರವಲು ಪಡೆದಿಲ್ಲವೆಂದು ತಿಳಿದರೂ, ತಮ್ಮ ಸುತ್ತಮುತ್ತಣ, ತನ್ನಂತೇ ಯೋಚಿಸುವ ಒಂದು ಗುಂಪಿನ ಅನುಭವ ಸಾಮಾನ್ಯತೆಯ ಪ್ರೇರಣೆಯಾದರೂ ಇದ್ದೇ ಇರುತ್ತದೆ ಎಂಬ ನಿಲುವು ತೋರುತ್ತಾರೆ. ಈ ಮಾತನ್ನು ತಳ್ಳಿ ಹಾಕುವುದು ಸಾಧ್ಯವಿಲ್ಲ.

ಹೀಗಾಗಿ ಸಾಹಿತ್ಯವನ್ನು ನೋಡುವಾಗ ಅಳೆದು ತೂಗಿ ವಿಭಾಗಿಸಲು ಸಾಧ್ಯವಿಲ್ಲ ಆದರೆ ಕೃತಿ ವಿಮರ್ಶೆ ಬಗ್ಗೆ ಹಾಗೆ ಮಾಡದಿದ್ದರೆ ನಡೆಯುವುದಿಲ್ಲ. ಉದಾಹರಣೆಗೆ ಇಲ್ಲಿಯವರೆಗಿನ ಸಣ್ಣಕತೆ ಬೆಳೆದು ಬಂದ ದಾರಿಯನ್ನು ನೋಡಿದರೆ ಅದನ್ನು ಸ್ವಾತಂತ್ರ್ಯ ಪೂರ್ವ ಮತ್ತು ನವ್ಯ ಎಂದು ವಿಂಗಡಿಸಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಬರುವ ತ್ರಿವೇಣಿ, ಕಟ್ಟೀಮನಿ (ಬೂಟ್ ಪಾಲಿಶ್) ಆನಂದರ ಕತೆಗಳಲ್ಲಿನ ಕೆಲವು ಕೊರತೆಗಳನ್ನು ಗುರುತಿಸುತ್ತಾರೆ. ಅಲ್ಲಿ ಭಾಷೆಯ ಬಗ್ಗೆ

---

[7] 'ಪ್ರಸ್ತುತ' – ಪು.ಸಂ. 87 : ಪತ್ರಿಕೆ ಪ್ರಕಾಶನ: 2006.

ಮೊದಲಿಗೆ ಗಮನ ಹರಿಸದ ಲೇಖಕರು ಬೂಟ್ ಪಾಲಿಶ್ ಹುಡುಗನ ಭಾಷಾ ಮಟ್ಟಕ್ಕೆ ಇಳಿಯಲು ವಿಫಲರಾದುದು ಕತೆಯಲ್ಲಿ ಎದ್ದು ಕಾಣುವ ತಾಂತ್ರಿಕತೆಯ ಕೊರತೆ ಎಂದು ಗುರುತಿಸುತ್ತಾರೆ.

ಭಾರತೀಪ್ರಿಯರ ಮೋಚಿಯಲ್ಲಿಯೂ ಆದರ್ಶಮಯ ಸ್ವಾಭಿಮಾನವನ್ನು ಹುಸಿ ಅನುಕಂಪದಲ್ಲಿ ಮುಚ್ಚಿಡುವ ಲೇಖಕನ ಪ್ರಯತ್ನವನ್ನು ಅವರು ಎತ್ತಿ ತೋರಿಸುತ್ತಾರೆ. 'ನಾನು ಕೊಂದ ಹುಡುಗಿ' ಕತೆಯಲ್ಲಿ ಆಗಿನ ಸಂದರ್ಭಕ್ಕೆ ಒಗ್ಗದಿದ್ದರೂ ದುರಂತತೆಯನ್ನು ಬಿಂಬಿಸಬೇಕಾದ ಅನಿವಾರ್ಯವೆಂಬಂತೆ ಸತ್ಯವನ್ನು ತಿಳಿದೂ ಕೊನೆಗೆ ದಿಗ್ಭ್ರಮೆಯಾಗುವಂತೆ ಮಾಡುವ 'ಮೊಲೊಡ್ರಾಮ'ವನ್ನು ಸೃಷ್ಟಿಸಿದ ಕತೆಗಾರರನ್ನು ಅವರು ಅಸಮರ್ಥನೆಂದು ನಿರ್ಣಯಿಸುತ್ತಾರೆ.

ಹೀಗೆ ಪ್ರಗತಿಶೀಲ ಎನ್ನಿಸಿಕೊಂಡು ಬಂದ ಈ ಕಾಲದ ಕತೆಗಳು ಕೂಡ ಆದರ್ಶ, ಆಕರ್ಷಕ ನಯವಾದ ಭಾಷೆಯನ್ನು ಹೊಂದಿದ್ದರೂ ಸಾರ್ಥಕತೆಯನ್ನು ಪಡೆದುಕೊಳ್ಳಲಿಲ್ಲ. ಮೇಲಾಗಿ ಯಾವುದೇ ರೀತಿಯ ಹೆಚ್ಚಿನದನ್ನು ಹೇಳುವ ಪ್ರಯತ್ನ ಮಾಡಲಿಲ್ಲವೆಂದು ಅವರ ಅಭಿಪ್ರಾಯ ಸಕಾರಣವಾದುದು ನವ್ಯ ಕತೆಗಳ ಬರುವ ಪ್ರಶ್ನಿಸುವ, ದಂಗೆಯೇಳುವ ಪ್ರವೃತ್ತಿ ನುಡಿವಂತರನ್ನು, ಸಭ್ಯರೆನಿಸಿಕೊಂಡವರನ್ನು ಬೆಚ್ಚಿ ಬೀಳಿಸುವಂತೆ ಮಾಡಿದ್ದು ಲಂಕೇಶರಿಗೆ ಉತ್ತಮ ಬೆಳವಣಿಗೆಯಾಗಿ ಕಂಡಿದೆ. ವಸ್ತು ನಿಷ್ಠತೆಯ ಹೆಸರಲ್ಲಿ ಅಡ್ಡ ಗೋಡೆಯ ಮೇಲೆ ದೀಪವಿಡುವ ಜಾಯಮಾನ ಇವರದಲ್ಲವಾದ್ದರಿಂದ ತಮಗೆ ಅನಿಸಿದ್ದನ್ನು ಖಚಿತವಾಗಿ ದಿಟ್ಟವಾಗಿ ನೇರವಾಗಿ ಅವರು ದಾಖಲಿಸಿದ್ದಾರೆ.

ಸಾಮಾಜಿಕ ಸಭ್ಯತೆಯ ಹೆಸರಿನಲ್ಲಿ ತಾವು ಕಂಡ ಸತ್ಯವನ್ನು ಲಂಕೇಶ್ ಹೇಳಿಯೇ ತೀರುತ್ತಾರೆ. ಹೊಸ ಲೇಖಕರ ಹೊಸ ಆರಂಭದ ಬಗ್ಗೆ ಆಸ್ಥೆಯನ್ನು ಹೊಂದಿದ್ದಾರೆ ಲಂಕೇಶ್. ಸಣ್ಣ ಕತೆಗಳ ಕುರಿತ ತಮ್ಮ ಆಳ ತಿಳುವಳಿಕೆಯಿಂದ ಲಂಕೇಶ್ ಮಾಸ್ತಿಯವರು ಬರೆಯುತ್ತಿದ್ದ ಸರಳ, ಒಪ್ಪವಾದ ರೀತಿಗೆ ಮಾರು ಹೋದವರು. ಕತೆಗಳು ಒಳ್ಳೆಯ ಕಾವ್ಯದ ಪರಿಣಾಮವನ್ನು ಉಂಟು ಮಾಡುವುದರಿಂದ ಕತೆಗಾರನ ಉದ್ದೇಶ ಸ್ಪಷ್ಟವಾಗಿ ಕಾಣುತ್ತದೆ ಎಂಬ ಅವರ ಹೇಳಿಕೆ ಸಮರ್ಥನೀಯ.

ಕೆಲವು ಕತೆಗಳಲ್ಲಿ ಬರವಣಿಗೆ 'ನೀಟ್' ಆಗಿಲ್ಲ. ಸಾಮಾನ್ಯ ರೀತಿಯಲ್ಲಿ ತರ್ಕ ಬದ್ಧವಾಗಿಲ್ಲದಿದ್ದರೂ ಸಭ್ಯತೆಯ ಮಿತಿಯೊಳಗಿಲ್ಲದಿದ್ದರೂ ಬೇರೆ ರೀತಿಯ ತರ್ಕ ಬದ್ಧತೆ, ವಸ್ತುವಿನ ಮೇಲೆ ಹತೋಟಿ ಇರುವ ಕತೆಗಳನ್ನು ಜಗತ್ತಿನೆದುರು ತೋರಿಸುತ್ತಾರೆ. ಭಾಷೆಯಲ್ಲಿ ಅನುಭವಗಳು ಸಾರ್ಥಕ ರೂಪ ಪಡೆದುಕೊಳ್ಳುವ ಕತೆಗಳು, ಸಾಮಾಜಿಕವಾಗಿ ಮುಖ್ಯವಾಗುವ ಕತೆಗಳು, ದುರಂತ ಕಥೆಗಳು ಹೀಗೆ ವಿವಿಧ ವಸ್ತು, ಸ್ಥಿತಿಯನ್ನು ಹೊಂದಿರುವ ಕತೆಗಳನ್ನು ವಿಶ್ಲೇಷಿಸುತ್ತಾ ಸಣ್ಣ ಕತೆಗಳು ಮಾಸ್ತಿಯ ಕಾಲಕ್ಕೇ ನಿಂತು ಹೋಗಿಲ್ಲಾ ಅವು ಜೀವಂತವಾಗಿವೆ.

ಅವನ್ನು ಇನ್ನೂ ಜೀವಂತವಾಗಿ ಇರಿಸಲು ಅನುಕರಣೀಯ ಮಾರ್ಗವನ್ನು ಒಡಿಯದೇ ಸ್ವಂತಿಕೆಯಿಂದ ರಚನೆಯಾಗಬೇಕು ಎಂಬುದರ ಕಡೆ ಒತ್ತು ಕೊಡುವುದು ಗಮನಾರ್ಹ.

ನಾಟಕಗಳ ಕುರಿತ ಬರಹ ವಿಶೇಷ ಅವುಗಳಲ್ಲಿ ಪ್ರಮುಖವಾದದ್ದು ಬರ್ನಾರ್ಡ್‌ಷಾ ಮತ್ತು ಪಿಂಟರ್‌ನದು. ಬರ್ನಾರ್ಡ್ ಷಾ ನ 'ಮಿಸಲೈಯನ್ಸ್' ಮತ್ತು ಪಿಂಟರ್‌ನ 'ಬರ್ತಡೇ ಪಾರ್ಟಿ' ನಾಟಕಗಳನ್ನು ನೋಡಿ ಅದರ ಬಗ್ಗೆ ಅದರ ಹಿಂದಿನ ಪ್ರಯತ್ನದ ಬಗ್ಗೆ ಬರೆದ 'ಬೆಂಗಳೂರಲ್ಲಿ ಬರ್ನಾರ್ಡ್ ಷಾ ಮತ್ತು ಪಿಂಟರ್' ಲೇಖನದಲ್ಲಿ ಅವರಿಬ್ಬರು ಇಷ್ಟು ಸಫಲರಾಗಲು ಕಾರಣಗಳನ್ನು ಹೆಕ್ಕಿ ಹೆಕ್ಕಿ ತೆಗೆಯುತ್ತಾ ಹೋಗುತ್ತಾರೆ. ಈ ಬಗ್ಗೆ ಪ್ರಾಯೋಗಿಕ ವಿಮರ್ಶೆ, ಸಾಂಸ್ಕೃತಿಕ ವಿಮರ್ಶೆಯ ಹೊಳಹುಗಳನ್ನು ಧ್ವನಿಸಿದೆ.

ಒಂದು ನಾಟಕವನ್ನು ಪ್ರದರ್ಶನ ಮಾಧ್ಯಮದಲ್ಲಿ ಯಶಸ್ವಿಗೊಳಿಸುವ ಏಕೈಕ ಸಾಧನಗಳೆಂದರೆ ಪಾತ್ರಗಳು ಹಾಗೆ ಅದ್ಭುತ ಪಾತ್ರ ನಟನೆಯಿಂದ ನಾಟಕಕಾರರನ್ನು ವಿಶ್ವ ಪ್ರಸಿದ್ಧಿ ಮಾಡಿದ ನಟರನ್ನು ಕುರಿತು ಮೆಚ್ಚುಗೆ ವ್ಯಕ್ತ ಪಡಿಸುತ್ತಾರೆ. ಇಬ್ಬರು ದೊಡ್ಡ ನಾಟಕಕಾರರಲ್ಲಿನ ವಿಭಿನ್ನ ದೃಷ್ಟಿ ಕೋನಗಳನ್ನು ಚಿತ್ರಿಸುತ್ತಾ, ಷಾಗೆ ವಿಕ್ಟೋರಿಯನ್ ಯುಗದ ಪಲಾಯನ ಭ್ರಮೆ; ಜಡ ಸೌಖ್ಯವನ್ನು ಮೂದಲಿಸುವ ಹಠವಿದೆ; ಆದರೆ ಪಿಂಟರ್‌ಗೆ ಈ ಮೂದಲಿಸುವಿಕೆಗಿಂತ ದುರಂತವನ್ನು ತೋರುವುದೇ ಮುಖ್ಯ ಉದ್ದೇಶ ಎಂದು ಹೇಳುವುದು ಅವರ ತೌಲನಿಕ ವಿಮರ್ಶೆಯ ಸಾಮರ್ಥ್ಯವನ್ನು ಬಿಂಬಿಸಿವೆ.

ಈ ಪ್ರಯತ್ನದಲ್ಲಿ ತಮಗೆ ತಾವೇ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಹುಡುಕುವ ಪ್ರಯತ್ನ ಮಾಡಿದ್ದಾರೆ ಲಂಕೇಶ್. ಸಮಾಜಕ್ಕೆ ನಾವು ಎಷ್ಟು ಜವಾಬ್ದಾರರು? ನಮಗೆ ಸಮಾಜ ಎಷ್ಟು ಮುಖ್ಯ? ನಮ್ಮ ವೈಯಕ್ತಿಕ ಸಾತಂತ್ರ್ಯದ ಇತಿಮಿತಿ ಏನು? ಎಂಬ ಪ್ರಶ್ನೆಗಳು ಕೊನೆಯಲ್ಲಿ ಬದುಕಿನ ಮತ್ತು ರಂಗದ ಪ್ರಜ್ಞೆಯನ್ನು ಉಳಿಸಿಹೋಗುತ್ತವೆ ಎನ್ನುತ್ತಾ ಬದುಕಿನ ಕುರಿತು ಇರುವ ಪ್ರೀತಿ–ದ್ವೇಷಗಳನ್ನು ವಿವರಿಸುವ ಬಗೆ ಆಳ ಚಿಂತನೆಗಳ ರೂಪದಲ್ಲಿ ವ್ಯಕ್ತವಾಗಿದೆ.

3.2.3. ಲೇಖಕ ಆಧಾರಿತ ವಿಮರ್ಶಾ ಲೇಖನಗಳು.

ಕೆಲವು ಲೇಖಕರನ್ನು ಕುರಿತು ಬರೆಯುವ ಸಂದರ್ಭದಲ್ಲಿ ಲಂಕೇಶರು ತಮ್ಮ ವೈಯಕ್ತಿಕ ಜೀವನದ ಎಷ್ಟೋ ಕ್ಷಣಗಳನ್ನು ಸೂಕ್ಷ್ಮವಾಗಿ ದಾಖಲಿಸಿದ್ದಾರೆ. ತಾವು ಬೆಳೆದು ಬಂದ ಪ್ರಕ್ರಿಯೆಯನ್ನು ಅಲ್ಲಲ್ಲಿ ಸೂಚಿಸುತ್ತಾ ಹೋಗಿದ್ದಾರೆ. ಈ ಸೂಚನೆಗಳನ್ನು ಗಮನಿಸುತ್ತಾ ಹೋದ ಹಾಗೆ, ಲಂಕೇಶರ ಬೆಳವಣಿಗೆಯನ್ನು ಓದುಗ ಚಿತ್ರಿಸಿಕೊಳ್ಳಬಹುದು.

ಓದಲು ಬಲ್ಲ ಅತ್ಯಂತ ಸಾಮಾನ್ಯ ಮನುಷ್ಯನಿಗೂ ತಿಳಿಯುವಂತೆ ಜಟಿಲವಾದ, ಅತ್ಯಂತ ಕಷ್ಟದ ವಿಷಯಗಳನ್ನು ತಿಳಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿದ್ದಾರೆ. ಏಕೆಂದರೆ ವೈಯಕ್ತಿಯವಾಗಿ ನಮಗೆ ಬೇಕು ಎನ್ನಿಸುವ ವಿಷಯಗಳು ಸಾಮಾನ್ಯರಿಗೆ ಬೇಡ ಎಂಬ ಭಾವನೆ ತಪ್ಪು. ಇಲ್ಲಿ ತಿಳಿಯಬೇಕಾದ ಸಂಗತಿ ಎಂದರೆ ಯಾವುದೋ ಒಂದು ವಿಷಯದಲ್ಲಿ ಯಾರಾದರೂ ಸಾಮಾನ್ಯರಾಗಿರುತ್ತಾರೆ. ಆದಕಾರಣ, ನನಗೆ ಬೇಕೆನಿಸಿದ್ದು ಸಾಮಾನ್ಯನಿಗೂ ಬೇಕಾಗುತ್ತದೆ. ಹಾಗಾಗಿ ತಿಳಿಯುವ ಅವಕಾಶವನ್ನು ನಾವು ಮಾಡಿಕೊಡಬೇಕು ಎನ್ನುವ ಹಂಬಲವನ್ನು ಕಾಣುತ್ತೇವೆ. ಎಷ್ಟು ಜನ ವಿಮರ್ಶಾ ಲೇಖಕರಲ್ಲಿ ಇಂತಹ ಗುಣವನ್ನು ಕಾಣಬಹುದು? ಇದು ಲಂಕೇಶರ ವೈಶಿಷ್ಟ್ಯ.

ಮೂಲತಃ ಕನ್ನಡಿಗರಾಗಿದ್ದು ಇಂಗ್ಲೀಷನ್ನು ತನ್ನದಾಗಿಸಿಕೊಂಡ ರಾಜಾರಾವ್ ಅವರ ಬಗ್ಗೆ ಬರೆಯುತ್ತಾ "ಗೊಂದಲಗಳಿಗೆ ಸಕ್ಕರೆ ಸವರಿ ಕೇಳುವವರ ತಲೆದೂಗಿಸುವ ಅಸಾಮಾನ್ಯ, ವಿದ್ವತ್ ಪ್ರದರ್ಶನ ಪ್ರವೀಣ, ಪಲಾಯನವಾದಿ, ಜಾಣಬ್ರಾಹ್ಮಣ"[8] ಎಂದು ವ್ಯಂಗ್ಯವಾಡುತ್ತಾರೆ.

ಪ್ರಶ್ನೋತ್ತರಗಳಲ್ಲಿ ಸಾಗುವ ಲೇಖನ ರಾಜಾರಾಯರನ್ನು ಯಾವ ಮಟ್ಟದಲ್ಲಿ ತಂದು ನಿಲ್ಲಿಸಿದೆ ಎಂದರೆ, ಅವರನ್ನು ಮಹಾಲೇಖಕನೆನ್ನಬೇಕೋ ಇಲ್ಲವೇ ಸುಂದರ ಮಾತುಗಳ ಬೋಳೇ ಮನುಷ್ಯನೆನ್ನಬೇಕೋ ಎಂದು? ಇಲ್ಲಿನ ನಿರ್ಣಯ ನಿಲುವು ವಿಮರ್ಶೆಯ ಮಾನದಂಡಗಳಿಂದ ಕೂಡಿರುವುದು ಗಮನಾರ್ಹ.

ಕನ್ನಡದ ಕವಿ, ರಾಷ್ಟ್ರಕವಿಯ ಮಟ್ಟಕ್ಕೆ ಬೆಳೆದ ಕುವೆಂಪು ಅವರ ಬಗ್ಗೆ ಆದರ ಗೌರವ. ಅವರ ಕಾವ್ಯ ಮತ್ತು ವ್ಯಕ್ತಿತ್ವದ ಬಗ್ಗೆ ಲಂಕೇಶ್ ಬರೆದಿರುವ ರೀತಿ ಅದ್ಭುತವಾಗಿದೆ. ಎಂಥ ಸಂಕೀರ್ಣ ವಿಷಯಗಳನ್ನೂ ಲಂಕೇಶ್ ಅವುಗಳ ಸಂಕೀರ್ಣತೆಯನ್ನು ನಾಶಮಾಡದೆ ಸರಳವಾಗಿ ಮಂಡಿಸಬಲ್ಲರು ಎಂಬುದಕ್ಕೆ 'ರಮ್ಯ ಪ್ರಜ್ಞೆಯ ಉನ್ನತ ಶಿಖರ' ಕುವೆಂಪು"[9] ಎಂಬ ಲೇಖನವೇ ಸಾಕ್ಷಿ. ಕಂದಾಚಾರದ ವಿರುದ್ಧ ದಂಗೆ ಎದ್ದ, ಉಚ್ಚರೆನ್ನಿಸಿಕೊಂಡ ನೀಚರನ್ನು ಖಂಡಿಸಿದ ಕುವೆಂಪು ಕೃತಿಗಳ ಬಗ್ಗೆ ಅವರಿಗೆ ಅಪಾರ ಪ್ರೀತಿ ಇದೆ. ತರುಣರಲ್ಲಿ ಅವರ ಪದ್ಯಗಳು ತುಂಬುತ್ತಿದ್ದ ಜೀವನೋತ್ಸಾಹ ಭಾಷೆಯ ಸುಶಿಕ್ಷಿತತನ ಎಲ್ಲವೂ ಲಯಬದ್ಧವಾಗಿಯೇ ಸಾಗಿರುವುದನ್ನು ಲಂಕೇಶ್ ಗುರುತಿಸಿದ್ದಾರೆ.

ಲೋಕದ ರಾಕ್ಷಸರ ಬಗ್ಗೆ ಕೂಡ ಉದಾರವಾದ ಪೂರ್ಣದೃಷ್ಟಿ, ಚಿರಪರಿಚಿತ ಕತೆ ಹೇಳುತ್ತಲೇ, ಸಾಂಕೇತಿಕತೆಯನ್ನು ಸ್ಥಾಪಿಸುವ ಸಾಮರ್ಥ್ಯದ ಕುವೆಂಪು ಅವರ ಕೊಡುಗೆಯ

---

[8] 'ಪ್ರಸ್ತುತ': ಪು. ಸಂ. 10. ಪತ್ರಿಕೆ ಪ್ರಕಾಶನ, 2006.

[9] 'ಪ್ರಸ್ತುತ': ಪು.ಸಂ. 16; ಪತ್ರಿಕೆ ಪ್ರಕಾಶನ 2006.

ಮುಂದೆ ಅವರ ಎಲ್ಲ ದೋಷಗಳನ್ನು ಮರೆಯುವುದು ಸೂಕ್ತ ಎನ್ನುತ್ತಾರೆ ಲಂಕೇಶ್ ಕುವೆಂಪು ಮರು ಓದಿಗೆ ಒಳಗಿಗುತ್ತಿರುವ ಈ ಸಂದರ್ಭದಲ್ಲಿ ಲಂಕೇಶರ ಈ ಕಾರ್ಣಿ ಅಪೂರ್ವ ಎನಿಸುತ್ತದೆ.

ಲಂಕೇಶರನ್ನು ಕನ್ನಡದ ಸಾಹಿತಿಗಳೊಂದಿಗೆ ಇಂಗ್ಲೀಷಿನ ಸಾಹಿತಿಗಳೂ ಅಷ್ಟೇ ಮಟ್ಟದಲ್ಲಿ ಆಕರ್ಷಿಸಿದ್ದಾರೆ. ಸ್ಯಾಮುಯಲ್ ಬೆಕೆಟ್‌ನಲ್ಲಿ ಎದ್ದ ದ್ವಂದ್ವವನ್ನು ಸ್ವತಃ ಅನುಭವಿಸುವುದರ ಮೂಲಕ ವಿಶ್ಲೇಷಿಸಿರುವ ಲಂಕೇಶ್ ಬೆಕೆಟ್‌ನ ಹೆಮ್ಮೆಯ ನಿರರ್ಥಕತೆಯ ಬಗ್ಗೆ, ಸಾಹಿತ್ಯದ ನಿರರ್ಥಕತೆಯ ಬಗ್ಗೆ ಇರುವ ಗೊಂದಲಗಳನ್ನು ಕನ್ನಡಿಗರ ಮುಂದೆ ಬಿಚ್ಚಿಡುವ ಪ್ರಯತ್ನ ಮಾಡಿದ್ದಾರೆ. ಭೂತಕಾಲದ ಕುರಿತು ಪುನರ್ರಚಿಸುವ, ಭವಿಷ್ಯದ ಬಗ್ಗೆ ಕನಸು ಕಾಣುವ, ಆದರೆ ಅದನ್ನು ವ್ಯಕ್ತಪಡಿಸುವಾಗ ವರ್ತಮಾನಕ್ಕೆ ಹತ್ತಿರವಾದ ನಾಟಕ ಮಾಧ್ಯಮವನ್ನೇ ಆರಿಸಿಕೊಳ್ಳುವ ಬೆಕೆಟ್ ಸಂಪ್ರದಾಯಸ್ಥ ರಂಗಭೂಮಿಯ ವಿರುದ್ಧ ತಿರುಗಿ ಬದ್ದುದರ ಸಂಕೇತವನ್ನು ಸೂಚಿಸುತ್ತದೆ. "ಈ ಜಗತ್ತಿನ ಕಾಲ, ದೇಶ ವರ್ತಮಾನದಲ್ಲಿ ಸಿಕ್ಕಿಕೊಂಡ ಎಲ್ಲ ಕೈದಿಗಳ ಸ್ಥಿತಿಯಾಗಿ ಕಂಡಿತ್ತು ಗೋಡೋ" ಎಂಬಲ್ಲಿ ಶೂನ್ಯತೆ, ಅರ್ಥಹೀನತೆಯನ್ನು ಸಾಮಾಜಿಕ ಪ್ರಪಂಚದಲ್ಲಿ ನಾಗರಿಕರು ಎನ್ನಿಸಿಕೊಂಡವರಿಗಿಂತ ಹೆಚ್ಚಾಗಿ, ಜೈಲಿನಲ್ಲಿ ಇರುವವರಿಗೆ ಗೊತ್ತು ನಿಜವಾದ ಜೀವನ ಅಂದರೇನು ಎಂದು ಎಂಬ ಉಲ್ಲೇಖ ಗಮನಾರ್ಹ.

ನಾಗರಿಕ ಪ್ರಪಂಚದಲ್ಲಿ ಸೋತ ನಾಟಕ ಅನಾಗರಿಕ ಕ್ರೂರರಿರುವ ಜಾಗ ಎನ್ನಿಸಿಕೊಂಡ ಜೈಲಿನಲ್ಲಿ ಗೆದ್ದಿದ್ದು ಯಾಕೆ? ಯಾರು ಈ ಗೋಡೋ? ಎಂಬ ಮಾತಿಗೆ ಉತ್ತರವಾಗಿ ಬೆಕೆಟ್ ಉತ್ತರ ಹುಡುಕುವ ಕೆಲಸವನ್ನು ಓದುಗರಿಗೆ ನೋಡುಗರಿಗೆ ಬಿಡುತ್ತಾರೆ. ಮನುಷ್ಯನನ್ನು ಮನುಷ್ಯನನ್ನಾಗಿ ನೋಡಿದಾಗ ಮಾತ್ರ ಆಳ ನಿರರ್ಥಕತೆಯ ಅರಿವಾಗುತ್ತದೆ. ಹೊರನೋಟಕ್ಕಿಂತ ಆಂತರ್ಯ ಇಲ್ಲಿ ಮುಖ್ಯವಾಗುತ್ತದೆ. ಏಕೆಂದರೆ ಲಂಕೇಶರ ಪ್ರಕಾರ ಬೆಕೆಟ್‌ನ ಮಾತಿಗಿಂತ ಮೌನವೇ ಹೆಚ್ಚು ಒರಟು. ಬಹುಶಃ ನೊಬೆಲ್ ಬಹುಮಾನ ಬಂದಿರುವುದು ಅವರ ಮೌನದೊಳಗಿನ ಮಾತಿಗೇ ಏನೋ? ಯಾರೂ ಇಷ್ಟಪಡದ ಸೋಲನ್ನು, ಸೋಲುವುದಕ್ಕಾಗಿ ಹೇಳುತ್ತಾ ಹೋದ ಬೆಕೆಟ್‌ನ ಸಾಹಿತ್ಯ ಸೋತವರನ್ನೇ ಆಕರ್ಷಿಸಿ ಯಶಸ್ವಿಯಾಗಿದ್ದು ಇಂದು ಇತಿಹಾಸ ಈ ಅಂಶಗಳನ್ನು ಲಂಕೇಶರು ವಿಶ್ಲೇಷಿಸಿರುವ ಬಗ್ಗೆ ಸೊಗಸಾಗಿದೆ.

ಅನಂತ ಮೂರ್ತಿ ಅವರ 'ಪ್ರಶ್ನೆ' ಕಥಾ ಸಂಕಲನದ ಬಗೆಗಿನ ಸೂಕ್ಷ್ಮ 'ಸಮಗ್ರ ವಿಶ್ಲೇಷಣೆ' ಗಮನಾರ್ಹ. ಅನಂತ ಮೂರ್ತಿ ಅವರ ಎಂದಿನ ಕಥೆಗಳನ್ನು ಓದಿದವರಿಗೆ ಇದು ಖಂಡಿತ ಅಚ್ಚರಿಯನ್ನುಂಟು ಮಾಡುತ್ತದೆ. ಏಕೆಂದರೆ ಉಳಿದ ಕಥೆಗಳಲ್ಲಿ ವಸ್ತುಗಳಲ್ಲಿ ಇಲ್ಲದ ವಿವಿಧತೆಯನ್ನು ಇಲ್ಲಿನ ಕಥೆಗಳು ಹೊಂದಿದೆ. ಭಾಷೆ ಎಷ್ಟು ಪರಿಣಾಮಕಾರಿಯಾಗಿ ಬಳಕೆಯಾಗಿದೆಯೆಂದರೆ ಕೇಳಿದ್ದೇ ಕೇಳಿದವರಿಗೆ ಒಂದು ಹೊಸತನದ ಅನುಭವ ನೀಡುತ್ತದೆ. ರಂಗನಾಥ, ಶಾರದೆ,

ಶಂಕರಯ್ಯನಂಥ ಪಾತ್ರಗಳ ಮೂಲಕ ಅನಂತಮೂರ್ತಿಯವರು ತಮ್ಮ ಜೀವನ ದೃಷ್ಟಿಯನ್ನು ಸಂಕೇತಗಳ ಮೂಲಕ ಬಚ್ಚಿಡುವ ಪ್ರಯತ್ನ ಮಾಡುತ್ತಾರೆ.

ಸಾವು ಬದುಕು ಮತ್ತು ಸಾಯಿಸುವ ಬದುಕಿಸುವ ಶಕ್ತಿಗಳ ಘರ್ಷಣೆಯನ್ನು ಹುಲಿ, ಶಾಕುಂತಲ, ಅಹಲ್ಯೆ ಹೀಗೆ ಹಲವಾರು ಸಂಕೇತಗಳ ಮೂಲಕ ಕಟ್ಟಿ ಕೊಡುತ್ತಾ ಹೋಗುತ್ತಾರೆ. ಪರಂಪರೆ, ತಲೆಮಾರಿನಿಂದ ತಲೆಮಾರಿಗೆ ಸಾಗುವ ಕತೆ ಆದರ್ಶ, ಎದುರಾಡುವ ಪ್ರವೃತ್ತಿಯಲ್ಲಿ ಹಿರಿಜರಿಕೆಗಳೂ ಬಂದು ಹೋಗುತ್ತವೆ. ಆದರೆ ಅನಂತ ಮೂರ್ತಿಯವರು ಕೆಲವೊಮ್ಮೆ ಪಲಾಯನವಾದಿಯಂತೆ ಕಾಣುತ್ತಾರೆ ಎನ್ನುವುದನ್ನು ಲಂಕೇಶರು "ಕೇಂದ್ರ ವ್ಯಕ್ತಿಯೊಂದಿಗೆ ಲೇಖಕ ಒಂದಾಗುವ ಘಟ್ಟಕ್ಕೆ ಬಂದಾಗಲೆಲ್ಲ, ಹಿಂದೇಟು ಹಾಕಿ ತೇಲಿಸಿ ಬರೆದಿದ್ದಾರೆ. ಇಲ್ಲವೆ ಅನಗತ್ಯ ಎನಿಸುವ ರೂಪಕಗಳ ಹಿಂದೆ ಅವಿತಿದ್ದಾರೆ........."[10] ಎಂಬ ಮಾತುಗಳಲ್ಲಿ ವ್ಯಕ್ತಪಡಿಸುತ್ತಾರೆ.

ಅನಂತ ಮೂರ್ತಿ ಅವರ ಕತೆಗಳಲ್ಲಿ ಅವರು ತಮ್ಮ ಮುಂದೆ ಬಂದ ಪ್ರಶ್ನೆಗಳನ್ನು ಎತ್ತಿರುವಲ್ಲಿ ಯಶಸ್ವಿಯಾದರೂ, ಉತ್ತರಗಳನ್ನು ಕಂಡುಕೊಳ್ಳುವ ಕೊನೆಯ ಹಂತದಲ್ಲಿ ಎಡವಿರುವುದು ಕಥೆಗಳ ಓದಿನಿಂದ ತಿಳಿಯುತ್ತದೆ ಎಂಬ ವಿಶ್ಲೇಷಣೆ ಅನಂತಮೂರ್ತಿಯವರ ಕತೆಗಳ ಮರು ಓದಿಗೆ ಪ್ರೇರೇಪಿಸುವಂತಿವೆ.

ತೇಜಸ್ವಿಯವರ ಬರವಣಿಗೆಯ ಶೈಲಿಯನ್ನು ಪ್ರಯತ್ನಶೀಲ ಮನೋವೃತ್ತಿಯನ್ನು ಜವಾಬ್ದಾರಿಯುತ ಮನಸ್ಸನ್ನು ಮೊದಲಿಗೆ ಗುರುತಿಸಿದವರು ಲಂಕೇಶ್. ಮಲೆನಾಡನ್ನು ತಮ್ಮ ಪ್ರತಿಯೊಂದು ಕೃತಿಯಲ್ಲಿ ತರುವ ಲೇಖಕರ ಗುಂಪಿನಲ್ಲಿ ವಿಶಿಷ್ಟತೆಯನ್ನು ಹೊಂದಿರುವ ತೇಜಸ್ವಿ ಯಾವಾಗಲೂ ಎಲ್ಲರಲ್ಲಿ ಒಬ್ಬನು ನಾನು ಎಂಬ ವಿನಮ್ರ ಭಾವವನ್ನು ತಾಳುತ್ತಾರೆ. 'ಹುಲಿಯೂರಿನ ಸರಹದ್ದು'ವಿನ ಕತೆಗಳಲ್ಲಿ ವಿವಿಧ ರೂಪದಲ್ಲಿ ಖಾಸಗಿ ಬದುಕು ಮತ್ತು ಭಾವನೆಗಳ ನಡುವೆ ಒಂದು ಸಮತೋಲಿತ, ಇದ್ದದ್ದನ್ನು ಇದ್ದ ಹಾಗೆ ಹೇಳುವ ಅವರ ಗುಣವನ್ನು ಸ್ಪಷ್ಟವಾಗಿ ಗುರುತಿಸಿರುವ ಲಂಕೇಶರು ಅಡಿಗರು, ಕುರ್ತುಕೋಟಿಯವರ 'ಪ್ರಜ್ಞೆ' ಎಂಬ ಲೇಖನದಲ್ಲಿ ಇದನ್ನು ಕಾಣುತ್ತೇವೆ.

ಯಾವ 'ಇಸಮ್'ಗಳಿಗೂ ಒಳಗಾಗದೇ, ಯಾರ ಅಂಜಿಕೆಯಿಲ್ಲದೆ ಬಗೆಯುವ ಲಂಕೇಶ್ ಕುವೆಂಪು ಅವರ ವಿಮರ್ಶೆಗಳ ಬಗ್ಗೆ ಅಂತಹ ವಿಮರ್ಶೆಯ ಹೆಸರಲ್ಲಿ ಬಂದ ಲೇಖನಗಳು ಸಾಹಿತ್ಯ ಲೋಕದಲ್ಲಿ ಉಂಟಾಗಬಹುದಾದ ತಲ್ಲಣಗಳ ಬಗ್ಗೆ ಲಂಕೇಶರು ತೋರಿರುವ ಕಳಕಳಿ ಉಲ್ಲೇಖನೀಯ.

---

[10] 'ಪ್ರಸ್ತುತ' ಪು.ಸಂ. 34.

ಪ್ರಯೋಜನವಿಲ್ಲದ ಚರ್ಚೆಗಿಂತ, ಪ್ರಶ್ನೆಗಳಿಗಿಂತ ಚರ್ಚೆಗಳಿಂದ ಬರಬಹುದಾದ ತೀರ್ಮಾನಗಳಿಂದ ಉಪಯೋಗವಾಗಬಹುದು. ಏಕೆಂದರೆ ಚರ್ಚೆಯಲ್ಲಿ ಯಾರೊಬ್ಬರ ವೈಯಕ್ತಿಕ ಅಭಿಪ್ರಾಯಗಳನ್ನು ಇನ್ನೊಬ್ಬರು ಒಪ್ಪದೇ ಹೋಗಬಹುದು. ಹಾಗಾದಾಗ ವಿಮರ್ಶೆಯ ಹೆಸರಲ್ಲಿ ಟೀಕೆಗಳು ಮತ್ತು ಕೊರತೆಗಳನ್ನು ಹುಡುಕುವ ಕೆಲಸವಾಗುತ್ತದೆಯೇ ಹೊರತು ಮತ್ತೇನೂ ಅಲ್ಲ. ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಲಂಕೇಶ್ ಶೇಕ್ಸ್‌ಪಿಯರ್ ಮೇಲೆ ಕೋಲ್‌ರಿಜ್ ಬರೆದ ವಿಮರ್ಶೆ, ನಂತರ ಅದೇ ವಿಷಯದ ಮೇಲೆ ಎಲಿಯಟ್, ಲೆವಿಸ್, ನೈಟ್ಸ್ ಬರೆದ ಉದಾಹರಣೆಗಳನ್ನು ಪ್ರಸ್ತಾಪಿಸುತ್ತಾರೆ. ಹೀಗಾಗಿ ವಿಮರ್ಶಕ ವಿಮರ್ಶಕನಾಗುವ ಮೊದಲು ಕವಿಯಾಗಬೇಕು. ಆಗಲೇ ನಿಜವಾದ ವಿಮರ್ಶೆ ಹೊರ ಬರಲು ಸಾಧ್ಯ. ಸಮಕಾಲೀನ ಪ್ರಜ್ಞೆ ಇರದಿದ್ದರೆ ನಿಖರವಾದ ವಿಮರ್ಶೆ ಮಾಡಲಾಗುವುದಿಲ್ಲ ಎಂದು ಹೇಳುವಾಗ, ತಮಗಾದ ಅನುಭವವೊಂದನ್ನು ಪ್ರಸ್ತಾಪಿಸುತ್ತಾ, ಹೇಗೆ ಈ ಸಮಕಾಲೀನ ಪ್ರಜ್ಞೆ ಇಲ್ಲದವರು ಸಾಹಿತ್ಯಾಸಕ್ತರನ್ನು ತಪ್ಪು ದಾರಿಗೆ ಎಳೆಯುತ್ತಾರೆ ಎಂಬುದನ್ನು ವಿವರಿಸಿರುವ ಬಗೆ ಆಳದ ಅಭಿವ್ಯಕ್ತಿಯಾದಂತೆ ವಿಮರ್ಶೆಯ ಸಮತೋಲನವನ್ನು ಒಳಗೊಂಡಿದೆ.

ಯಾವ ವಿಷಯದ ಕುರಿತೂ ಒಂದು ನಿರ್ದಿಷ್ಟ ಅಭಿಪ್ರಾಯವಿಲ್ಲದ ಕುವೆಂಪು ಅವರ ಅಡಿಗರ ಕಾವ್ಯದ ಕುರಿತು ಮಾಡಿದ ವಿಮರ್ಶೆಯೂ ಅಷ್ಟರ ಮಟ್ಟಿಗೆ ಉತ್ತಮವೇನಿಲ್ಲ. ನೆಹರೂ ಅವರ ಅಭಿಪ್ರಾಯಗಳ ಕುರಿತು ಮಾತಾಡುವಾಗ ಅವರ ನಿರಾಶೆ, ನೋವುಗಳು ಕಂಡು ಬರುವುದರ ವರ್ಣನೆ ಮಾಡುತ್ತಾರೆಯೇ ಹೊರತು ಅದರ ಹಿಂದಿರುವ ಸತ್ಯಾಸತ್ಯತೆಗಳ ಕುರಿತು ಅಲ್ಲ. ಇದರಿಂದ ವಿಮರ್ಶೆ ಹಾಸ್ಯಕ್ಕೆ ತುತ್ತಾಗಿದೆ ಎಂದು ಹೇಳುವಲ್ಲಿ ಲಂಕೇಶರ ವಿಮರ್ಶನ ಶಕ್ತಿಯ ಸೂಕ್ಷ್ಮತೆ ಗೋಚರವಾಗುತ್ತದೆ.

ಅಡಿಗರ ನವ್ಯ ಕಲ್ಪನೆಯ ಬಗ್ಗೆ ಕುರ್ತುಕೋಟಿಯವರ ಆದರ್ಶವಾದವಾದದ ಬಗ್ಗೆ ಹೇಳುತ್ತಾ, ಆದರೆ ಅದರಲ್ಲಿ ಒಂದಕ್ಕೊಂದು ಪರಸ್ಪರ ಸಂಬಂಧವಿಲ್ಲದ ಹಾಗೆ ವಿಶ್ಲೇಷಿಸಿದ್ದಾರೆ. ಉದಾಹರಣೆಗೆ' "ಅವರ (ಅಡಿಗರ) ಕಾವ್ಯ ಪ್ರಜ್ಞೆಯಲ್ಲಿ ತತ್ವ ಪ್ರಣಾಲಿಯ ಅಂಶಗಳಾಗಲೀ ಧಾರ್ಮಿಕ ಸತ್ವವಾಗಲೀ ಇರುವುದಿಲ್ಲ......." ಎಂಬ ಮಾತು ಲಂಕೇಶರ ಸೂಕ್ಷ್ಮ ನಿರೀಕ್ಷೆಗಳನ್ನು ಹೇಳುತ್ತವೆ.

ಸುಮತೀಂದ್ರ ನಾಡಿಗರ 'ಕಪ್ಪುದೇವತೆ'ಯ ಬಗ್ಗೆ ಬರೆಯುತ್ತಾ ಹೊಸ ಪ್ರಯತ್ನದಲ್ಲಿ ತೊಡಗಿಕೊಂಡಿರುವ ಕವಿ ಎಂದು ಹೇಳುತ್ತಾರೆ. ಕಂಬಾರ, ಪಾಟೀಲ, ನಿಸಾರ್‌ರಂತಹ ದೊಡ್ಡ ಮಟ್ಟದ ಕವಿಗಳಲ್ಲಿ ತಮ್ಮದೇ ಆದ ವಿನೂತನ, ಪ್ರಯೋಗಶೀಲತೆಯಿಂದ ಹೊಸ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮ ವೈಯಕ್ತಿಕ ಅನುಭವಗಳನ್ನು ಅಷ್ಟಾಗಿ ವ್ಯಕ್ತ ಪಡಿಸದೇ

ತಾವು ಹೇಳಬೇಕೆಂದಿರುವ ವಿಷಯವನ್ನು ಬಹಳ ನಾಜೂಕಾಗಿ ಓದುಗರಿಗೆ ತಲುಪಿಸುತ್ತಾರೆ, ನೋವನ್ನು ವರ್ಣಿಸುವ ಅಗತ್ಯವಿರುವ ಹಾಗೆ, ಸಂತೋಷ, ಬಾಲ್ಯದ ತುಂಟಾಟ, ಚಂಚಲತೆಗಳೂ ಇಲ್ಲಿ ಅಷ್ಟೇ ಮಹತ್ವ ಪಡೆದುಕೊಳ್ಳುತ್ತವೆ. ಇಲ್ಲಿ ಕವನ ಬರೆಯುವ ಕೆಲಸವಲ್ಲ, "ಕಟ್ಟುವ" ಕೆಲಸ ನಡೆದಿದೆ. ಹಾಗಾಗಿ 'ಕಟ್ಟುವಿಕೆ'ಯ ಹಿಂದೆ ಇರುವ ಶ್ರಮವನ್ನು ಅವರ ಕವಿತೆಗಳು ಪ್ರತಿಬಿಂಬಿಸುತ್ತವೆ ಎಂದು ಹೇಳಿರುವ ಮಾತು ಕಾವ್ಯಕಟ್ಟುವ ರೀತಿಯನ್ನು ತೋರಿವೆ.

ಕವಿ ತಮ್ಮ ಬಾಲ್ಯದ ತಬ್ಬಲತನದ ತಾವನುಭವಿಸಿದ ಒಂಟಿತನವನ್ನು ಕಪ್ಪುದೇವತೆ ಸಂಕೇತವನ್ನು ಬಳಸಿಕೊಂಡು ಅದರ ಮೂಲಕ ಹೊಸದೊಂದು ಬಗ್ಗೆ ವ್ಯಕ್ತಪಡಿಸುವ ಕಲೆಯತ್ತ ನಮ್ಮ ಗಮನ ಸೆಳೆಯುತ್ತಾರೆ. ಸರಳವಾದ ಬದುಕನ್ನು ಸಂಕೀರ್ಣವಾಗಿಸಿಕೊಳ್ಳುತ್ತಾ ಲೌಕಿಕದಲ್ಲೇ ಸಿಕ್ಕಿಹಾಕಿಕೊಂಡು ಇಷ್ಟಾನಿಷ್ಟಗಳ ಬಲೆಯಿಂದ ಹೊರ ಬರಲಾರದಂತೆ ಆಗಿದೆ. ತಮ್ಮ ಬಾಲ್ಯದ ಪರಿಸರವನ್ನು ಕವಿತೆಯಲ್ಲಿ ತುಂಬುತ್ತಾ, ಬಾಲ್ಯದ ಮೂಡ್‌ಗಳನ್ನು ಹೇಳುವಾಗಲೂ ಪ್ರಬುದ್ಧತೆಯನ್ನು ಮೆರೆದಿದ್ದಾರೆ. ಹೀಗಾಗಿ ಇದು ಸುಮಂತೀಂದ್ರರ ಅತ್ಯುತ್ತಮ ಕವನ ಎನ್ನಬಹುದು ಎಂಬ ಲಂಕೇಶ್‌ರ ವಿವರಣೆ ವಿಮರ್ಶನ ರೀತಿಗೆ ಹೊಸ ತೌಲನಿಕ ಆಯಾಮ ನೀಡಿರುವುದನ್ನು ಗುರುತಿಸಬಹುದು.

ಉದಾಹರಣೆಗೆ: 'ವ್ಯಾಕರಣದಾರೋಗ್ಯಕಾರಿಯಲ್ಲದ' ಎಂದು ಬಳಸಿರುವಲ್ಲಿ 'ವ್ಯಾಕರಣದ', 'ಆರೋಗ್ಯಕರ', 'ಅಲ್ಲದ', ಎಂದು ಬರೆದಾಗ 'ಆರೋಗ್ಯ', 'ಅಲ್ಲದ' ಎಂಬ ಪದಗಳಿಗೆ ಹೆಚ್ಚು ಒತ್ತುಬಿದ್ದು ಅವರು ಹೇಳುವುದಕ್ಕೆ ಹೆಚ್ಚು ಶಕ್ತಿ ಬರುತ್ತದೆ ಎಂಬುದನ್ನು ಗಮನಿಸಬಹುದು."

ತೀರ ಗಂಭಿರ ಅಬ್ಬರವಿಲ್ಲದೆ ಎಲ್ಲರೂ ಬಯಸುವ ಮುಗುಳು ನಗೆಯೊಂದಿಗೆ ವಿನಯತೆಯಿಂದ ಮೌಲ್ಯವನ್ನು ತಲುಪಿಸುವ ಕಾರ್ಯ ನಡೆಸಿದ್ದಾರೆ. ದೊಡ್ಡ ದೊಡ್ಡ ಶ್ಲೋಕಗಳು, ಷಟ್ಪದಿ ಪದ್ಯಗಳು ಮಾಡಲಾಗದ ಕೆಲಸವನ್ನು ಕೆಲವೇ ಕೆಲವು ಪದಗಳು ಮಾಡಿರುವುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ ಎನ್ನುವ ಲಂಕೇಶರು ಕಾವ್ಯ ಕಟ್ಟುವ ಕ್ರಿಯೆಯನ್ನು 'ರೂಪಕ' ರೂಪದಲ್ಲಿ ಈ ಕೆಳಗಿನಂತೆ ವಿವರಿಸುತ್ತಾರೆ.

ಕೈಗಳನ್ನು ಬಳಸಿಯೂ ಒಂದು ಗೂಡು ಕಟ್ಟಲಾಗದ ಮನುಷ್ಯನಿಗೂ, ಯಾವುದೇ ಸಾಧನವಿಲ್ಲದೆ ಕೊಕ್ಕಿನಿಂದಲೇ ಸುಂದರವಾದ ಗೂಡು ಕಟ್ಟಿಕೊಳ್ಳುವ ಹಕ್ಕಿಗೂ ಇರುವ ವ್ಯತ್ಯಾಸ ಇಷ್ಟೆ. ಹಕ್ಕಿ ಗೂಡಿಗೆ ಸಿಗುವ ಬೆಲೆ, ಮೌಲ್ಯ ನಾಣ್ಯದ ತೂಕದಲ್ಲಿ ಅಳೆಯುವಂಥದ್ದಲ್ಲ. ಅಂತಹ ಅಳತೆಗೋಲಿಗೆ ಮೀರಿದ ಕುಸುರಿ ಕೆಲಸ ಪ್ರಯತ್ನ ಶೀಲತೆ, ತೊಡಗಿಸಿಕೊಳ್ಳುವಿಕೆ ಕಾಣುವುದು ರಾಮಾನುಜನ್ ಅವರ ಕಾವ್ಯಗಳಲ್ಲಿ ಅಡಿಗರು ನಿಸಾರರ ಕಾವ್ಯ ಧೋರಣೆಯೊಂದಿಗೆ ಹೋಲಿಕೆ, ಮಾಡುತ್ತಾ, ಹೇಗೆ ಅವರೊಂದಿಗೆ ಕೆಲವದರಲ್ಲಿ ಸಾಮ್ಯತೆ ಹೊಂದಿ ಬಹಳಷ್ಟರಲ್ಲಿ ಭಿನ್ನತೆಯೊಂದಿಗೆ

ತಮ್ಮ ಕಾವ್ಯ ಕಣ್ಣು ಕುಕ್ಕುವಂತಿರದೆ, ತಿಳಿ ಹಾಸ್ಯ, ಸಹನೆಯೊಂದಿಗೆ ಹೇಳಬೇಕಾದುದನ್ನು ಹೇಳುವಂತಿರುವ ಕಾವ್ಯಗಳು ಅವರಿಗಿದ್ದ ಸಿದ್ಧಿಯನ್ನು ತೋರಿಸುತ್ತವೆ." ಮೇಲಿನ ಉಲ್ಲೇಖ ರಾಮಾನುಜರ ಕಾವ್ಯವನ್ನು ಲಂಕೇಶ್ ಗ್ರಹಿಸಿರುವ ರೀತಿಗೆ ನಿದರ್ಶನವಾಗಿದೆ.

ಉತ್ತರ ಕರ್ನಾಟಕದ ಧಾರವಾಡ ಕೊಟ್ಟಿರುವ ಅತ್ಯುತ್ತಮ ನಾಟಕಕಾರ ಕಂಬಾರರು. ಅವರ ನಾಟಕಗಳು ನವ್ಯ ಕಾವ್ಯದ ರೀತಿಯಲ್ಲಿ ನಮ್ಮನ್ನು ಮೂರನೇ ಅರ್ಥವನ್ನು ಹೊಳೆಸಿಕೊಳ್ಳುವಂತೆ ಮಾಡುವಶಕ್ತಿ ಹೊಂದಿವೆ ಎಂಬ ಕಂಬಾರರ ಕುರಿತ ಮಾತು ಲಂಕೇಶರು ಸಮಕಾಲೀನ ಲೇಖಕರನ್ನು ಗ್ರಹಿಸುವ ಬಗೆಗೆ ಉದಾಹರಣೆಯಾಗಿದೆ. ಕಂಬಾರರೊಂದಿಗೆ ಚಂದ್ರಶೇಖರ ಪಾಟೀಲರನ್ನು ಹೋಲಿಸಿ ಹೇಳಿರುವ ಮಾತು ಕೂಡ ವಿಶಿಷ್ಟವಾಗಿವೆ.

"ತೀರಾ ಕಠಿಣವಾದ ಬರವಣಿಗೆ ಶೈಲಿ ಕಂಬಾರರದಲ್ಲ. ಕಾವ್ಯಕ್ಕಿಂತ ಹೆಚ್ಚಿಗೆ ಪರಿಣಾಮಕಾರಿಯಾದ ಮಾಧ್ಯಮ ನಾಟಕ ಅದನ್ನು ಅಷ್ಟೇ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಕಂಬಾರರು" ಎಂಬ ಹಾಗೂ 'ನಾರ್ಸಿಸಿಸ್' ತತ್ವ ಕುರಿತ ಲಂಕೇಶರ ಮಾತು ಕುತೂಹಲ ಮೂಡಿಸುವಂತಿವೆ.

ಅಹಂಕಾರ ಮನುಷ್ಯನನ್ನು ಯಾವ ಮಟ್ಟಕ್ಕೆ ಎಳೆದೊಯ್ಯುತ್ತದೆ? ಆದರೆ ಅದನ್ನೂ ಕೂಡ ನಿಷ್ಕಲ್ಮಶ ಪ್ರೀತಿ, ಕಡಿಮೆ ಮಾಡುತ್ತದೆ. ಅಹಂಕಾರದಿಂದ ತಪ್ಪನ್ನೂ ಸರಿ ಎಂದು ಒಪ್ಪಿಕೊಳ್ಳುವ ಆತ್ಮವಂಚನೆಯಂತಹ ಪ್ರವೃತ್ತಿಯೇ ಸಮಾಜದ ಎಲ್ಲಾ ಅನಾಹುತ, ಘಾತಕಗಳಿಗೆ ಕಾರಣವಾಗಿದೆ" ಲಂಕೇಶರ ಮಾತು ಗಮನಾರ್ಹ.

ಪ್ರತಿಯೊಬ್ಬ ಮನುಷ್ಯನಲ್ಲೂ, ಸಹಜವಾಗಿ ಕಾಣುವ ಕಾಮ, ಪ್ರೇಮ, ಮೋಸ, ಅಸೂಯೆಗಳ ಪ್ರತಿಬಿಂಬ ಈ ನಾಣಿ. ತನ್ನ ಕಳ್ಳ ಮನಸ್ಸನ್ನು ಮುಚ್ಚಿಟ್ಟುಕೊಳ್ಳಲು ಮುಖವಾಡ ಧರಿಸುವಂತೆ, ಅವನು ಕೋಪ, ಕ್ರೌರ್ಯದ ಮುಖವಾಡ ಹಾಕಿ ಬೇರೆಯವರನ್ನು ಮೋಸ ಮಾಡುತ್ತಿದ್ದೇನೆ ಎಂಬ ಭಾವದಲ್ಲಿ ತನ್ನ ಆತ್ಮವಂಚನೆಯನ್ನೇ ಮಾಡಿಕೊಳ್ಳುವುದು. ನಾವು ಇಂದಿನ ಜಗತ್ತಿನಲ್ಲಿರುವ ಎಲ್ಲ ಮನುಷ್ಯರಿಗೆ ಕನ್ನಡಿ ಹಿಡಿದಂತಿದೆ.

ಜೀವನದ ಅತಿ ಮುಖ್ಯ ಘಟ್ಟವಾದ ಬಾಲ್ಯ ಅದರ ಮುಗ್ಧತೆ ಹೇಗೆ ಅದು ಬೆಳೆಯುತ್ತಾ ಹೋದ ಹಾಗೆ ಕಪಟತನದಲ್ಲಿ ಪರ್ಯಾವಸಾನವಾಗುತ್ತದೆ" ಎಂದು ದೀರ್ಘವಾಗಿ ವಿವರಿಸಿರುವ ಮೂಲಕ ತಮ್ಮ ವಿಮರ್ಶೆಯ ಗ್ರಹಿತೆ ಮತ್ತು ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ.

ಇಂತಹ ಪ್ರಬುದ್ಧ ನಾಟಕವನ್ನು ವಿಮರ್ಶಿಸುವಾಗ ಅದಕ್ಕೆ ತನ್ನದೇ ಆದ ತಯಾರಿಬೇಕು. ಅದರ ತಯಾರಿಯಲ್ಲಿ ಓದುಗರೂ ಇಂಥ ವಿಚಾರಗಳ ಕಡೆಗೆ ಗಮನ ಹರಿಸಬೇಕೆಂಬುದು ಲಂಕೇಶರ ಅಭಿಪ್ರಾಯ.

ಸಮಕಾಲೀನ ಸಾಹಿತ್ಯ ಸಾಹಿತಿಗಳನ್ನು ಕುರಿತ ಲಂಕೇಶರ ನಿಲುವು ಗಾಢ, ನಿರ್ಭೀತ, ಸಕಾಲಿಕ, ಸಾಂದರ್ಭಿಕ ಮತ್ತು ಸಾಂಸ್ಕೃತಿಕ ಎಚ್ಚರದಿಂದ ಕೂಡಿರುವ ಕಾರಣಕ್ಕೆ ಮೇಲಿನ ವಿಶ್ಲೇಷಣೆಗಳು ಲಂಕೇಶರ ವಿಮರ್ಶನ ಪ್ರಜ್ಞೆಯ ನಿದರ್ಶನಗಳಾಗಿವೆ.

3.3. ಕಂಡದ್ದು ಕಂಡ ಹಾಗೆ

'ಕಂಡದ್ದು ಕಂಡ ಹಾಗೆ' ಲಂಕೇಶರ ವಿಮರ್ಶಾ ಲೇಖನಗಳ ಸಂಗ್ರಹವಾಗಿದ್ದರೂ ಅದಕ್ಕಿಂತಲೂ ಬೇರೆಯದೇ ಆದ ಆಲೋಚನಾ ವಿಧಾನ ಈ ಕೃತಿಯಲ್ಲಿ ಕಾಣಿಸುತ್ತದೆ. ಪ್ರಸ್ತುತದಲ್ಲಿರುವ ಲೇಖನಗಳಿಗೆ ಹೋಲಿಸಿದರೆ ಇನ್ನಷ್ಟು ನಿಷ್ಠುರವಾಗಿ, ವರ್ತಮಾನಕ್ಕೆ ಸಂಬಂಧಪಟ್ಟ ಹಾಗೆ ಪ್ರಬುದ್ಧತೆ ಬಿಂಬಿಸಿರುವ ಲೇಖನಗಳು ಇಲ್ಲಿವೆ.

ಸಾಹಿತ್ಯ ಸಮಾಜವನ್ನು ಬದಲಾಯಿಸುತ್ತದೆ, ಸುಧಾರಣೆ ಮಾಡುತ್ತದೆ ಎಂಬುದು ದಡ್ಡಮಾತು. ಆದರೆ ಸಮಾಜದ ಹಲವಾರು ಸ್ಥಿತಿಗಳ ಪರಿಣಾಮಗಳು ಸಾಹಿತ್ಯದ ಮೇಲಾಗುತ್ತದೆ. ಹೀಗಾಗಿ ಲೇಖಕನಿಗೆ ಸಾಮಾಜಿಕ ಪ್ರಜ್ಞೆ ಇರಬೇಕಾದುದು ಮುಖ್ಯ. ಈ ನೆಲೆಯಲ್ಲಿ ಲಂಕೇಶ್ ಆದರ್ಶ ಮತ್ತು ವಾಸ್ತವಿಕತೆಯನ್ನು ಏಕಾಏಕಿ ತೊರೆದು ಬರವಣಿಗೆಯಲ್ಲಿ ತೊಡಗುವವನ ದೌರ್ಬಲ್ಯಗಳನ್ನು ಗುರುತಿಸುತ್ತಾರೆ.

ರಂಗಭೂಮಿ, ನಾಟಕ, ನಾಟಕಕಾರ ಈ ಬಗ್ಗೆ ಅವರ ಖಚಿತ ನಿರ್ಧಾರಗಳು ಮತ್ತು ಅಭಿಪ್ರಾಯಗಳು ಇಲ್ಲಿವೆ. ಎಪ್ಪತ್ತರ ದಶಕದಲ್ಲಿ ರಚನೆಯಾದ ನಾಟಕಗಳ ಹಿನ್ನಲೆ. ಪ್ರೇರಣೆ, ಮಾರ್ಪಾಡುಗಳನ್ನು ಕುರಿತು ಸಕಾರಣವಾದ ಚರ್ಚೆ ಮೂಡಿಸಿದ್ದಾರೆ. ಕಂಬಾರರ 'ಜೋಕುಮಾರ ಸ್ವಾಮಿ' ನಾಟಕ, ಹಯವದನ, ತುಘಲಕ್ ನಾಟಕಗಳ ಬಗ್ಗೆ ಒಳ್ಳೆಯ ಮಾತುಗಳನ್ನು ಆಡುವ ಲಂಕೇಶ್, ಬಿ.ವಿ. ಕಾರಂತರ ವ್ಯಕ್ತಿ ಚಿತ್ರಣವನ್ನು ಬಹು ಆಪ್ತವಾಗಿ ಚಿತ್ರಿಸಿದ್ದಾರೆ.

ಅಧ್ಯಯನದ ದೃಷ್ಟಿಯಿಂದ ಈ ಕೃತಿಯಲ್ಲಿರುವ ಹದಿನೇಳು ಲೇಖನಗಳನ್ನು ಸಾಹಿತ್ಯ ಮತ್ತು ಸಾಹಿತ್ಯೇತರ ವಿಮರ್ಶಾ ಲೇಖನಗಳು ಎಂದು ವಿಂಗಡಿಸಿಕೊಳ್ಳಲಾಗಿದೆ. ಬೇರೆ ಎಲ್ಲಾ ಆಗು ಹೋಗುಗಳು, ಅನುಭವಗಳು, ಸಾಹಿತ್ಯದ ಬೇರೆ ಆಯಾಮಗಳೂ ಇಲ್ಲಿ ನಿಖರ ಚರ್ಚೆಗೆ ಒಳಗಾಗಿರುವ; ವಾಗ್ವಾದಕ್ಕೆ ಎಡೆ ಮಾಡಿಕೊಟ್ಟಿರುವ ಬಗೆಯನ್ನು ಮುಂದೆ ವಿಶ್ಲೇಷಿಸಲಾಗಿದೆ.

3.3.1. ಸಾಹಿತ್ಯ ಕುರಿತ ವಿಮರ್ಶಾ ಲೇಖನಗಳು.

ಒಂದಕ್ಕೊಂದು ಸಂಬಂಧವಿರುವ ಇಲ್ಲಿನ ಲೇಖನಗಳು ಪ್ರತ್ಯೇಕತೆಯನ್ನೂ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಇವುಗಳಲ್ಲಿ ಲಂಕೇಶ್ ತಮ್ಮ ಸಮಕಾಲೀನ ಸಾಹಿತ್ಯ ಕುರಿತ ಚರ್ಚೆಯನ್ನು ಪ್ರತಿಯೊಂದು ಲೇಖನದ ಸಂದರ್ಭದಲ್ಲಿ ಅವಶ್ಯಕತೆ ಎಂಬಂತೆ ಪ್ರಸ್ತಾಪಿಸಿರುವುದು ಗಮನಾರ್ಹ. ಪ್ರಜ್ಞಾಪೂರ್ವಕ ಒರಟು ಮನೋಸ್ಥಿತಿ ಅಲ್ಲಲ್ಲಿ ಕಾಣಿಸಿದರೂ ತಮ್ಮ ವ್ಯಕ್ತಿತ್ವವನ್ನು, ತೀರಾ ವೈಯಕ್ತಿಕ ಅನುಭವಗಳನ್ನು ಪೂರ್ತಿಯಾಗಿ ತೊಡಗಿಸಿಕೊಂಡು ಬರೆದಿರುವ ಈ ಲೇಖನಗಳಲ್ಲಿ ಓದುಗರಿಗೆ ತೀರಾ ಹತ್ತಿರವಾಗುತ್ತಾರೆ ಲಂಕೇಶ್.

ಪ್ರಜಾಪ್ರಭುತ್ವದ ಅಳಿವಿನ ಕುರಿತು ಚಿಂತೆ ವ್ಯಕ್ತ ಪಡಿಸಿರುವ ಲಂಕೇಶ್ ಅದರಿಂದಾಗುತ್ತಿರುವ ಅನಾಹುತವನ್ನು ಕಣ್ಮುಂದೆ ಕಟ್ಟಿ ಕೊಟ್ಟಿದ್ದಾರೆ. ರಾಜಕೀಯದ ಸುಳಿಯ ಅರಿವಿಲ್ಲದೆ ಚುನಾವಣೆಗೆ ನಿಂತು ಸೋತ ಅಡಿಗರ ಘಟನೆ ಒಂದು ಕಿಡಿಯಾಗಿ ಮಾರ್ಪಟ್ಟು ಇಡೀ ಲೇಖನದ ತುಂಬ ಜ್ವಾಲೆಯಾಗಿ ಹರಡಿದೆ ಅವರ ಚಿಂತನೆಗಳು ಕಂಡಿದ್ದರ ನೈಜ ಚಿತ್ರಣವನ್ನು ಓದುಗರ ಮುಂದೆ ಬಿಚ್ಚಿಡುವ ಪ್ರಯತ್ನ ಈ ಲೇಖನದಲ್ಲಿದೆ.

ಪ್ರಜಾಪ್ರಭುತ್ವ ಕೊಟ್ಟ ಸ್ವಾತಂತ್ರ್ಯವೆಲ್ಲವೂ ನಿಷ್ಪ್ರಯೋಜಕವಾಗಿದ್ದು, ಎಲ್ಲಾ ಇದ್ದೂ ಇಲ್ಲದಂತೆ ಬದುಕುತ್ತಿದ್ದೇವೆ ಎಂಬುದೇ ದುರಂತ. ಏಕೆಂದರೆ ಹೊಸ ನಾಯಕನೊಬ್ಬ ಹುಟ್ಟಿಕೊಳ್ಳುವಾಗ ಕೊಡುವ ಆಶ್ವಾಸನೆಗಳು ಹೇಗೆ ಹುಸಿಯಾಗುತ್ತವೆ. ಅಲ್ಲಿ ನಡೆಯುವ ಚರ್ಚೆಗಳು ನಾಯಕನನ್ನು ಸಮಾಜದ ಹತ್ತಿರ ಕೊಂಡೊಯ್ಯುವ ಬದಲು ಮಧ್ಯದಲ್ಲಿರುವ ಅಂತರವನ್ನು ಹೆಚ್ಚು ಮಾಡುತ್ತಿರುವುದು ವಿಪರ್ಯಾಸ ಎಂಬ ನಿಲುವು ಗಮನಾರ್ಹ.

ಇಲ್ಲಿ ಲಂಕೇಶರು ಇಂದಿರಾ ಗಾಂಧಿಯವರ ಅಧಿಕಾರದಾಹ ಕುರಿತು ನೇರವಾಗಿಯೇ ಪ್ರಹಾರ ಮಾಡಿದ್ದಾರೆ. ಅವರ ಗೆಲುವು ಪ್ರಜಾತಂತ್ರದ ಕೊಲೆ. ಇದು ಬರಿ ಆರ್ಥಿಕ, ಸಾಮಾಜಿಕ ಸ್ಥಿತಿಯ ಮೇಲಲ್ಲದೆ, ಸಾಹಿತ್ಯದ ಮೇಲೂ ಪರಿಣಾಮ ಬೀರಿದೆ ಎಂಬ ಲಂಕೇಶರ ಅಭಿಪ್ರಾಯ ಸಮರ್ಥನೀಯ. ಇಂತ ಸನ್ನಿವೇಶಗಳಿಗೆ ಪ್ರತಿಕ್ರಿಯೆ, ಪ್ರತಿಭಟನೆ ವ್ಯಕ್ತ ಪಡಿಸಲು ಇರುವ ಮಾರ್ಗ ಒಂದೇ, ಅದು ಸಾಹಿತ್ಯದ ಮೂಲಕ ಆ ನೆಲೆಯಲ್ಲಿ ಹಿಂದಿನವರ ಅಭಿಪ್ರಾಯವಾದ ಕಾವ್ಯ ಸಮಾಜವನ್ನು ಬದಲಾವಣೆ ಮಾಡುತ್ತದೆ ಎಂಬುದನ್ನು ಅಲ್ಲಗಳೆಯುತ್ತಾ ಸಮಾಜದ ಸ್ಥಿತಿಯೇ ಕಾವ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಲಂಕೇಶ್ ಒತ್ತಿ ಹೇಳುತ್ತಾರೆ.

ಹಾಗೆಂದು ಕಾವ್ಯ ಬರೆಯಬಲ್ಲವರೆಲ್ಲರೂ ಧೈರ್ಯದಿಂದಲೇ ಬರೆಯುತ್ತರೆಂದಲ್ಲ. ಆದರೆ ಪ್ರಜಾಪ್ರಭುತ್ವದ ಮೂಲ ಧ್ಯೇಯವಾದ ವಾಕ್ ಸ್ವಾತಂತ್ರ್ಯದ ದುರ್ಬಳಕೆಯ ಪರಾಕಾಷ್ಠತೆ ಮತ್ತು

ನಿಷ್ಪ್ರಯೋಜಕತನದ ವಾಸ್ತವತೆಯ ಅರಿವು ಮೂಡುವಂತೆ ಲಂಕೇಶ್ ಮಾಡುತ್ತಾರೆ. ವಾಕ್ ಸ್ವಾತಂತ್ರ್ಯದ ಖಚಿತ, ಪರಿಪೂರ್ಣ ವ್ಯಾಖ್ಯೆಯನ್ನು ಹೀಗೆ ಕೊಟ್ಟಿದ್ದಾರೆ. "ವಾಕ್ ಸ್ವಾತಂತ್ರ್ಯ ಎಂದರೆ, ಅಭಿವ್ಯಕ್ತ ಸಾಧ್ಯವಾಗುವ ಸ್ಥಿತಿ ಹಾಗೆ ಸಾಧ್ಯವಾಗುವುದರ ಮೂಲಕ ಒಂದು ಅನುಭವದ ಅನ್ನಿಸಿಕೆಯ ಬೇರೆ ಬೇರೆ ಸಾಧ್ಯತೆ ಕಂಡು ಕೊಳ್ಳುವ ಅವಕಾಶ"[1] ಎಂದು.

ಇಷ್ಟೆಲ್ಲ ವಿವರಣೆಯನ್ನು ಕೊಡುವುದು ಅವರು ತಮ್ಮ ಲೇಖನದ ಪೀಠಿಕೆಯಾಗಿ, ಓದುಗರನ್ನು ತಮ್ಮ ಲೇಖನದ ಕುರಿತು ಸಿದ್ಧವಾಗಿರುವಂತೆ ಮಾಡಲು ಬಳಸಿದ ತಂತ್ರವೆಂಬಂತೆ ಭಾಸವಾಗುತ್ತದೆ. ಸಾಮಾಜಿಕ ಪ್ರಜ್ಞೆ ಜಾಗೃತವಾಗಿರುವುದರಿಂದಲೇ ಕವಿ ಕವಿಯಾಗಿ ಉಳಿದು ಎಂತಹ ದುಸ್ತರ ಸ್ಥಿತಿಯನ್ನು ತಲುಪಿದ್ದಾನೆ ಅಂದರೆ ಅತ್ತ ನಾಯಕ ಆಗಲಾರದೆ, ಮಾತುಗಾರನಾಗದೆ ಆದರ್ಶಗಳಿಂದ ಪಡುವ ಕಷ್ಟವಂತೂ ನೀರಿನಿಂದ ಹೊರತೆಗೆದ ಮೀನಿನಂತೆ ಒದ್ದಾಡುವ ಸ್ಥಿತಿ. ಇಂತಹ ಸ್ಥಿತಿಯನ್ನು ವರ್ಣಿಸುವ ಮೂಲಕ ಏನು ಮಾಡಬೇಕು? ಇದನ್ನು ಸುಧಾರಿಸಲು? ಎಂದು ಹೇಳುವ ಮೂಲಕ ತೀರ್ಮಾನ ಕೈಗೊಳ್ಳುವ ಜವಾಬ್ದಾರಿ ಓದುಗರಿಗೆ ಬಿಟ್ಟಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅವರ ಜೊತೆ ನಡೆದ ಪ್ರಶ್ನೋತ್ತರ ಸಂಭಾಷಣೆಗಳು ಅವರ ತಹತಹಗಳನ್ನು ನಿಖರವಾದ ಸಂಗತಿಗಳನ್ನು ಹೊರ ಹಾಕಿವೆ.

ಹಿಂದಿನವರು, ಹಿರಿಯರು ಹೇಳಿದ ಮೌಲ್ಯಗಳನ್ನು ಮುಂದುವರೆಸುವುದರಲ್ಲೇ ತಪ್ಪಿದೆಯಾ? ಗೊತ್ತಿಲ್ಲ. ಆದರೆ ಅವುಗಳ ಅಂಧಾನುಕರಣೆ ಮಾತ್ರ ಸಲ್ಲ, ಏಕೆಂದರೆ ಜೀವಂತವಾಗಿರಲು ಪಡುವ ಪಾಡು ಕಂಡಾಗ, ಒಂದು ವಿಷಯವನ್ನು ಚರ್ಚೆಗೆ ಒಳಪಡಿಸಿದಾಗ ಬರುವ ತೀರ್ಮಾನಗಳು ಸತ್ಯವನ್ನು ಹೇಳದಿದ್ದರೂ ನಡೆಯುತ್ತದೆ ಎಂಬ ಭಾವನೆ ಯುವ ಜನರಲ್ಲಿ ಬೆಳೆಯುತ್ತಿರುವುದು ಆತಂಕಕಾರಿ ವಿಷಯ. ಹೀಗಾಗಿ ಭಾಷೆ ತನ್ನ ಸತ್ವವನ್ನು ಕಳೆದು ಕೊಳ್ಳುತ್ತದೆ. ಸಂಸ್ಕೃತದಂತೆ ಕನ್ನಡವು ಜೀವಂತವಲ್ಲದ ಭಾಷೆಯಾಗಿ ಬಿಡುತ್ತದೆ. ಆಧುನಿಕ ಸಮಸ್ಯೆಗಳ ಜೊತೆಗೆ ವಾಸ್ತವಿಕತೆಯ ಪ್ರಜ್ಞೆಯನ್ನೊಳಗೊಂಡ ಮೌಲ್ಯಯಂತ ಸಾಹಿತ್ಯ ಹೊರಬರಬೇಕಾಗಿದೆ.

ಆದ ಕಾರಣ ಮೌಲ್ಯ ಬೆಳೆಸುವ ಕಾರ್ಯ ನಡೆಸಬೇಕು. ಬೆಳೆಯದೆ ಒಂದೇ ಕಡೆ ನಿಂತರೆ ಕೊಳೆಯುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇದು ಆದಷ್ಟು ಬೇಗ ಸ್ವಚ್ಛಗೊಳ್ಳುವ ಅನಿವಾರ್ಯತೆ ಇದೆ. ಇದಕ್ಕಾಗಿ ಬೇರೆಯವರ ಮೇಲೆ ಹರಿಹಾಯದೆ, ವಿತಂಡವಾದದಲ್ಲಿ ಸಮಯ ಹಾಳುಮಾಡದೆ, ಪವಾಡಗಳಲ್ಲಿ ನಂಬಿಕೆ ಇಡದೆ ಶ್ರದ್ಧೆಯಿಂದ ದುಡಿಯಬೇಕು ಎಂಬ ಮಾತು ಸಮಾಜ, ಮೌಲ್ಯ, ಪೀಳಿಗೆ, ಬದಲಾವಣೆ ಕುರಿತಂತೆ, ಲಂಕೇಶರ ಧನಾತ್ಮಕ ಚಿಂತನೆ ಬಿಂಬಿಸಿವೆ.

[1] 'ಕಂಡದ್ದು ಕಂಡಹಾಗೆ' : ಪು.ಸಂ. 34; ಲಂಕೇಶ್ ಪ್ರಕಾಶನ: 2011

ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಉಪದೇಶವನ್ನು ಆಧುನಿಕ ಸಂದರ್ಭಕ್ಕೆ ಅಳವಡಿಸಿಕೊಳ್ಳುವ ಲಂಕೇಶ್ ಯಾವುದು ಮೌಲ್ಯವಾಗಿರಲಿ ಚಲನಶೀಲವಾಗಿದ್ದರೆ, ಬೆಲೆ. ಇಲ್ಲದಿದ್ದರೆ ಧರ್ಮವಿಲ್ಲದ ಅರ್ಥ, ಅರ್ಥವಿಲ್ಲದ ಕಾಮ ಅಥವಾ ಈ ಮೂರೂ ಇಲ್ಲದ ಮೋಕ್ಷದ ಪ್ರತಿಪಾದನೆ ಅಸಾಧ್ಯದ ಮಾತು, ಎಂದು ವ್ಯಕ್ತಿ ವಿಶಿಷ್ಟ ಅನಿಸಿಕೆಗಳನ್ನು ಸಹ್ಯವಾಗುವಂತೆ ವಸ್ತುನಿಷ್ಠವಾಗಿ ಮಂಡಿಸಿದ್ದಾರೆ.

'ಸಾಹಿತ್ಯ ದೃಷ್ಟಿಯಲ್ಲಿ ಪತ್ರಕರ್ತ'[2] ಲೇಖನದಲ್ಲಿ ಪತ್ರಿಕೋದ್ಯಮದ ಮೇಲೆ ಕ್ಷ-ಕಿರಣ ಬೀರಿರುವ ಲಂಕೇಶ್ ಅಚ್ಚರಿಮೂಡಿಸುವಂತ ವಿಚಾರಗಳನ್ನು ಖುದ್ದು ಪತ್ರಕರ್ತರಾಗಿಯೂ, ಹೊರ ಹಾಕುವಲ್ಲಿ ಹಿಂಜರಿದಿಲ್ಲ. ಪುಸ್ತಕ ವಿಮರ್ಶಕರಾಗಿ, ರಾಜಕೀಯ ವಿಶ್ಲೇಷಕರಾಗಿ ಬರೆದಾಗಿನ ಬರವಣಿಗೆಗೂ ಪತ್ರಕರ್ತರಾಗಿ ಪತ್ರಿಕೋದ್ಯಮದ ಕೆಲವು ಹೇಳಬಾರದ ಸಂಗತಿಗಳನ್ನು ಹೇಳುವಾಗಲೂ ಯಾವುದೇ ವ್ಯತ್ಯಾಸ ಕಾಣದೆ ಸ್ಥಿಮಿತತೆಯನ್ನು ಕಾಯ್ದುಕೊಂಡಿರುವುದನ್ನು ನೋಡಬಹುದು.

ಪತ್ರಿಕೋದ್ಯಮದಲ್ಲಿ ನಡೆಯುತ್ತಿರುವ ಬೌದ್ಧಿಕತೆಯ ಬಿಕರಿ, ವಾಣಿಜ್ಯೋದ್ದೇಶದಿಂದ ಓದುಗರನ್ನು ತಪ್ಪು ದಾರಿಗೆ ಎಳೆಯುತ್ತಿರುವ ವರದಿಗಾರರು, ರಾಜಕೀಯ ವ್ಯಕ್ತಿಗಳ ಕೈಗೊಂಬೆಗಳಾಗಿರುವುದನ್ನು ನೋಡಿದರೆ, ಯಾವುದನ್ನು ಹೇಗೆ ತಿರುಚಿ ಹೇಳಿದರೆ ಜೇಬು ತುಂಬುತ್ತದೆಯೆಂಬುದರ ಕಡೆಯೇ ಪತ್ರಿಕೋದ್ಯಮ ಸಾಗುತ್ತಿದೆಯೇ? ಎಂಬ ಅನುಮಾನ ಮೂಡದಿರಲಾರದೇ? ನಿಜವಾಗಿಯೂ ಬೌದ್ಧಿಕ ಗುಲಾಮಗಿರಿ ಇಷ್ಟರ ಮಟ್ಟಿಗೆ ತನ್ನತನವನ್ನು ಕಳೆದು ಕೊಂಡಿದೆಯೇ? ಎಂಬ ಪ್ರಶ್ನೆಗೆ ಹೌದು ಎಂದುತ್ತರಿಸುತ್ತಾರೆ ಲಂಕೇಶ್. ಈಗಿನ ಎಲೆಕ್ಟ್ರಾನಿಕ್ ಮತ್ತು ಪ್ರಿಂಟ್ ಮಾಧ್ಯಮ ಸಾಗುತ್ತಿರುವ ದಾರಿಯನ್ನು ನೋಡಿದಾಗ ಮೂವತ್ತು ವರ್ಷದ ಹಿಂದಿನ ಲಂಕೇಶರ 'ಕಾಣ್ಕೆ'ಯ ವ್ಯಾಪ್ತಿ ಅರಿವಾಗುತ್ತದೆ.

ಇಲ್ಲಿರುವ ಯಾವೊಂದು ಲೇಖನಗಳೂ ಒಂದು ಅಳತೆಗೋಲಿಗೆ ಅಥವಾ ಮಿತಿಗೆ ಒಳಗಾಗದೆ ಎಲ್ಲವನ್ನೂ ಒಳಗೊಂಡಿದ್ದರೂ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ತಾನು ಬರೆದದ್ದೇ ಸರಿ ಎಂಬ ಭಾವವಿಲ್ಲದೆ ತಾನು ಬರೆದುದ್ದೆಲ್ಲವು ಸರಿಯಿಲ್ಲ ಎನ್ನುವಷ್ಟು ಮುಕ್ತವಾಗಿ ಹೇಳಿಕೊಳ್ಳುತ್ತಾರೆ ಲಂಕೇಶ್.

ಲಂಕೇಶ್ ಅವರ ಕಾಳಜಿ ಇರುವುದು ಲೇಖಕರು ತೋರಿಸುತ್ತಿರುವ ಗುಣಗಳ ಬಗ್ಗೆ, ಅವರು ಲೇಖನದ ಕಷ್ಟ ಮತ್ತು ಅದಕ್ಕೆ ಬೇಕಾಗುವ ಅನುಭವ ಮತ್ತು ಉಗ್ರ ಪ್ರಾಮಾಣಿಕತೆ

---

[2] 'ಕಂಡದ್ದು ಕಂಡ ಹಾಗೆ' : ಪು.ಸಂ. 48.

ಇಲ್ಲದವರಾಗುತ್ತಿರುವುದು ಖೇದಕರ ಸಂಗತಿ ಎಂಬ ಲಂಕೇಶರ ನಿಲುವು ವಾಸ್ತವಕ್ಕೆ ಒಡಿದ ಕನ್ನಡಿಯಾಗಿದೆ.

ಲೇಖಕನ ವ್ಯಕ್ತಿತ್ವದ ಕಾಣುವ-ಕಟ್ಟುವ ಸಾಮರ್ಥ್ಯದಲ್ಲಿ ಆದ ವಿಕಾಸದ ಪರಿಣಾಮವಾಗಿ ಅವೆಲ್ಲದರಿಂದ ಆಚೆ ಇರುವ ಭಾಷಿಕ ಶರೀರದಲ್ಲಿ ಅಡಗಿರುವ ಅರ್ಥವಂತಿಕೆ ಕಾಣುವಂತಿರಬೇಕು ಎಂಬ ಆಶಯ ಲಂಕೇಶರದು. ಬರವಣಿಗೆ ಓದುಗನಲ್ಲಿ ಹೊಸ ಜೀವ ಪಡೆಯಲೆಂದು ಕಾಯುವಂತಿರಬೇಕೇ ಹೊರತು, ಅಪರಿಚಿತತೆಗೆ, ಅನಿರೀಕ್ಷಿತತೆಯ ಕಡೆ ಕರೆದೊಯ್ಯುವಂತಲ್ಲ. ತಮ್ಮ ಈ ಮಾತುಗಳನ್ನು ಪುಷ್ಟಿಗೊಳಿಸಲು, ಶೇಕ್ಸ್ ಪಿಯರ್, ಕಾನಾನ್ ಡೈಲ್, ಡ್ಯಾಂಟೆಯಂತಹ ಲೇಖಕರು, ಟಾಲ್ಸ್‌ಡಾಯ್ ಶಿಷ್ಯ ಟೆಕಾವ್ ಇವರ ಸಾಹಿತ್ಯದ ಉದಾಹರಣೆಯಾಂದಿಗೆ ಲೇಖಕಿಯೊಬ್ಬರ ಸೀದಾ-ಸಾದಾ ಕತೆಗಳಲ್ಲಿ ಅಡಗಿರುವ ಸಭ್ಯ ಸಂಗತಿಗಳನ್ನೂ ಉದಾಹರಣೆಯಾಗಿ ಬಳಸಿಕೊಂಡಿದ್ದಾರೆ. ತಮ್ಮನ್ನು ತಾವು ಬದ್ಧನಾದ ಲೇಖಕ ಎಂದು ಕರೆದುಕೊಳ್ಳುವ ಲಂಕೇಶ್ ತಮ್ಮ ಬಾಲ್ಯದಲ್ಲಿ ನಡೆದ ಘಟನೆಯು ಹೇಗೆ ತಮ್ಮನ್ನು ಡಾಕ್ಟರರಾಗುವ ಬದಲು ಲೇಖಕನಾಗುವಂತೆ ಮಾಡಿತು ಎಂಬುದನ್ನು ತಿಳಿ ಹಾಸ್ಯದೊಂದಿಗೆ ವಿವರಿಸುತ್ತಾರೆ. ಈ ವಿವರಣೆ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಸ್ಥಿತ್ಯಂತರಗಳಿಗೆ ಸ್ಪಂದಿಸಿರುವುದು ಉಲ್ಲೇಖಾರ್ಹ.

ಸ್ವಯಂ ಘೋಷಿತ ನೈತಿಕತೆಗೂ, ಪ್ರವೃತ್ತಿಯಿಂದ ಹುಟ್ಟಿದ ಸಮಾಜದ ನಡವಳಿಕೆಗಳಿಗೂ ಇರುವ ಅಂತರದಿಂದ ಉಂಟಾದ ರಾಜಕೀಯ ಕಲಹಗಳು-ಸಂಸ್ಕೃತಿ – ಮಾನವೀಯತೆ ನಡುವ ಘರ್ಷಣೆಗೆ ಕಾರಣವಾದ ಬಗೆಗೆ ಲೇಖನದಲ್ಲಿ ದಟ್ಟವಾದ ಕಾಳಜಿಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿರುವ ವಾಕ್‌ಸ್ವಾತಂತ್ರ್ಯದ ಬಗೆಗಿನ ಅವರ ಮಾತುಗಳು ಅನುಸರಿಸಲು, ವಿಶ್ಲೇಷಿಸಲು ಯೋಗ್ಯವಾಗಿವೆ.

'ನಾನೇಕೆ ಬರೆಯುತ್ತೇನೆ?' ಎಂದು ವಿವರಿಸುತ್ತ ಅವರೇ ಹೇಳುವ ಹಾಗೆ ಅವರ ತಲೆ ಮಾರಿನಲ್ಲಿ ಲೇಖಕರಾದ ಯಾರೊಬ್ಬರ ಉದಾಹರಣೆಯೂ ಇಲ್ಲವೇ ಇಲ್ಲ. ನೆನಪಿನಲ್ಲಿರುವುದು ಅಪ್ಪ-ಅಮ್ಮನ ಜಗಳ ಮಾತ್ರ. ಜೊತೆಗೆ ತುಂಬಾ ಚಿಕ್ಕ ವಯಸ್ಸಿನಲ್ಲಿಯೇ ಪ್ರೇಮದ ಬಲೆಯಲ್ಲಿ ಬಿದ್ದು ತಮ್ಮನ್ನು ತಾವು 'ಕುಡುಮಿ' ಎಂದು ಕರೆದುಕೊಳ್ಳುತ್ತಾರೆ. ಅಪೂರ್ಣತೆ, ದೊರೆತ ನೋವು, ಅನುಮಾನಗಳನ್ನು ಮೀರಲು ಬರವಣಿಗೆಯನ್ನೇ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ ಹೇಳುವ ಮಾತುಗಳಲ್ಲಿ ಸಭ್ಯತೆ, ಯೌವನ, ಮುಗ್ಧತೆ, ಆಕ್ರಮಣ, ಎಲ್ಲವೂ ಹದವಾಗಿ ಬೆರೆತಿರುವುದು ವಿಶೇಷ.

ಈ ಲೇಖನದ ಉದ್ದೇಶ ಸ್ಪಷ್ಟವಾಗಿದೆ. ಭವಿಷ್ಯದ ಸಾಧ್ಯತೆಗಳ ಕಡೆಗೆ ಯುವ ಪೀಳಿಗೆಯನ್ನು ಕೊಂಡೊಯ್ಯುವುದು, ಲೇಖಕರಿಗೆ ಕಾಣ್ಕೆಯನ್ನು ಕಾಣುವುದನ್ನು ಹೇಳಿಕೊಡುವುದು ಕನಸುಗಳ ಬೆಳಕಿನಲ್ಲಿ ವಾಸ್ತವವನ್ನು, ವಾಸ್ತವ ರೂಪದಲ್ಲಿ ನೋಡುವುದನ್ನು ಮರೆಸದಿರುವುದು. ಆರೋಗ್ಯಕರ, ಸಮಾಜ, ರಾಜಕೀಯ ವ್ಯವಸ್ಥೆಯನ್ನು ತರುವಲ್ಲಿ ಲೇಖನಿಯ ಮೂಲಕ ಪ್ರಯತ್ನಿಸುವುದು. ಹೀಗೆ ಕೆಲವು ಗೂಢ ಕ್ರಿಯೆಗಳ ನೆಲೆಗಳು ಇಲ್ಲಿ ಭಾಸವಾಗುತ್ತದೆ.

3.3.2.ಸಾಹಿತ್ಯೇತರ ವಿಮರ್ಶಾ ಲೇಖನಗಳು

3.3.2.1. ವ್ಯಕ್ತಿಚಿತ್ರ

ಬಿ.ವಿ. ಕಾರಂತರ ಒಡನಾಟ ಕುರಿತ ದೀರ್ಘ ಲೇಖನದಲ್ಲಿ ಕಾರಂತರು ಅಹಂಕಾರವಿರುವ, ಚಾಕ ಚಕ್ಯತೆ ಹೊಂದಿರುವ ವ್ಯಕ್ತಿಯಂತೆ ಕಂಡರೂ, ನಿಧಾನವಾಗಿ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳಬೇಕಾದ ಸಂದರ್ಭ ಎದುರಾಗಿದ್ದನ್ನು ವಿವರವಾಗಿ ದಾಖಲಿಸಿದ್ದಾರೆ. ತಮ್ಮ ಕಾವ್ಯವನ್ನು ಹೊಗಳಿದ ಕಾರಣಕ್ಕಾಗಿ ಒಳ್ಳೆಯವರಾಗಿ ಕಾಣುತ್ತಾರೆ ಕಾರಂತರು. ಇದಾದ ಮೇಲೆ ತಾವು ಕಾರು ತೆಗೆದು ಕೊಂಡಾಗ ಆದ ಹಾಸ್ಯ ಪ್ರಸಂಗವೊಂದರ ಮೇಲೆ ಬೆಳಕು ಚೆಲ್ಲುತ್ತಾ, ವೈಯಸ್ಕಿ ಅವರು ಕಾರಂತರಿಗೆ 'ಫಾ' ಅಂದರು 'ಫಾ' ಅಂದರೆ ಅದು 'Cruious word. It exprerses one's affection also'[6] ಎಂದು ಲಂಕೇಶರು ಕಾರಂತರನ್ನು ಸಮಾಧ್ಯನ ಪಡಿಸಲು ಹೇಳಿದ್ದು ನಿಜವಾಗಿದ್ದು, ನಿಜವಾಗಿಯೂ ಪವಾಡವೇ ಸರಿ.

ಕಾರಂತರ ಬಾಲ್ಯ, ಹಿಂದೀಪರೀಕ್ಷೆ ಪಾಸು ಮಾಡಿದ ಕತೆ, ಗುಬ್ಬಿ ಕಂಪನಿಯಲ್ಲಿ ಏಳು ವರ್ಷ ಕಳೆದ ಸಂದರ್ಭ, ಎಲ್ಲವನ್ನೂ ಬರವಣಿಗೆಯಲ್ಲಿ ಹಿಡಿದಿಟ್ಟಿದ್ದಾರೆ. ಕೊನೆಗೆ ಶಿವರಾಮ ಕಾರಂತರೊಂದಿಗೆ ಬಿ.ವಿ. ಅವರನ್ನು ಹೋಲಿಸುತ್ತಾ, ಅವರಾಗಿದ್ದರೆ ಹಾಸ್ಯವನ್ನೂ ಗಂಭೀರವಾಗಿ ತೆಗೆದುಕೊಂಡು ಮುನಿದು ಬಿಡುತ್ತಿದ್ದರೆ, ಈ ಕಾರಂತರು ಅಸಹಾಯಕತೆಯಿಂದ ಸುಮ್ಮನಾಗಿ ಬಿಡುತ್ತಿದ್ದರಂತೆ' ಎಂಬ ಮಾತು ಲಂಕೇಶರ ಗ್ರಹಿಕೆಯ ವಿಶೇಷತೆಯನ್ನು ಬಿಂಬಿಸಿದ್ದಾರೆ.

ದಕ್ಷಿಣ ಕನ್ನಡದ ವ್ಯಕ್ತಿಗಳು ನಂಬಿಕೆಗೆ ಅರ್ಹರಲ್ಲ ಎಂಬ ಸಿದ್ಧಾಂತದ ದೃಷ್ಟಿಯಿಂದ ನೋಡಿದಾಗ ಕಾರಂತರನ್ನೂ ಅದೇ ಸಿದ್ಧಾಂತದಡಿಯಲ್ಲಿ ಅಳೆದದ್ದೂ ಇದೆ. ಅವರು ನಾಟಕಗಳನ್ನು ಮಾಡಿಸಲು, ಯಶಸ್ವಿಯಾಗಿಸಲು ಮಾಡುತ್ತಿದ್ದ ತಂತ್ರಗಳನ್ನು ಇದಕ್ಕೆ ಸಾಕ್ಷಿಯಾಗಿ ಕೊಡುತ್ತಾರೆ. ಆದರೆ ಕಾರಂತರ ತನ್ನ ತನವನ್ನು ನೋಡಿದಾಗ ಮತ್ತದೇ ಹಳೆಯ ಲಂಕೇಶ್ – ಕಾರಂತರ ಮಿಲನವಾಗುತ್ತದೆ. ದಕ್ಷಿಣ ಕನ್ನಡದ ಎಲ್ಲರಂತೆ ಇಂಗ್ಲೀಷ್ ಬರದಿದ್ದರೂ, ಅದರ ವ್ಯಾಮೋಹ

---

[6] ಕಂಡದ್ದು ಕಂಡ ಹಾಗೆ : ಪು.ಸಂ. 54

ಬಿಡದ ಕಾರಂತರು ಇದರಿಂದ ಅನುಭವಿಸಿದ ಆಭಾಸಗಳನ್ನು ಹಂಚಿಕೊಳ್ಳುತ್ತಾರೆ. ಬೇರೆ ದೇಶದಲ್ಲಿ ತಪ್ಪಾಗಿ ಮಾತಾಡಿದರೆ ಭಾರತೀಯರಂತೆ ನಗುವ ಹಂಗಿಸಿಕೊಳ್ಳುವ ಭಯವಿರುವುದಿಲ್ಲ. ಆದರೆ ಇಲ್ಲಿ ಭಯದಿಂದಲೇ ಗೊತ್ತಿರುವುದೂ ಮರೆಯುವ ಸಾಧ್ಯತೆ ಇರುತ್ತದೆ ಎನ್ನುತ್ತಾರೆ ಕಾರಂತರು.

ಕಾರಂತರ ಪ್ರತಿಯೊಂದು ಗುಣದ ಮೇಲೆ ಬೆಳಕು ಚೆಲ್ಲಿರುವ ಲಂಕೇಶರು. ಅವರು ಕೆಳವರ್ಗದಿಂದ ಬಂದ ಹುಡುಗರ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ, ಅವರಲ್ಲಿದ್ದ ಬಹಳಕಾಲ ಉಳಿಯಬಲ್ಲ ಪ್ರತಿಭೆ, ಗುಬ್ಬಿ ವೀರಣ್ಣ ಮತ್ತು ಗಿರೀಶರ ಜೊತೆ ಸೇರಿಕೊಂಡು ಸುಖಪಟ್ಟ ಕಾರಂತರ ಕಥೆ–ವ್ಯಥೆ, ಎಲ್ಲವನ್ನು ಮನ ಮುಟ್ಟುವಂತೆ ಬರೆದಿದ್ದಾರೆ.

ಕಾರಂತರ ಪುರುಸೊತ್ತಿಲ್ಲದ ಚಟುವಟಿಕೆಗಳ ಬೆನ್ನು ಹತ್ತಿದ ದಿನಚರಿಯ ಹಿಂದೆ ಬೆಚ್ಚನೆಯ ಸ್ನೇಹವಿದೆ ಎಂಬ ಮಾತಂತೂ ಎಲ್ಲ ದೌರ್ಬಲ್ಯಗಳನ್ನು ಮರೆತು ಹಾಸ್ಯವನ್ನು ಒಪ್ಪಿಕೊಳ್ಳುವ ವ್ಯಕ್ತಿ ಮಾತ್ರ ಎಂದಿಗೂ ಸಿಗುವುದಿಲ್ಲ. ನಾಟಕ ಜೀವನದಂತೆ ಬರುತ್ತದೆ ಹೋಗುತ್ತದೆ. ಆದರೆ ವ್ಯಕ್ತಿಯಲ್ಲಿ ಇಟ್ಟ ವಿಶ್ವಾಸ ಮಾತ್ರ ಶಾಶ್ವತವಾದದ್ದು ಎನ್ನುತ್ತಾರೆ ಲಂಕೇಶ್.

ವ್ಯಕ್ತಿ, ಅವರ ಕ್ರಿಯೆ ಮನೋಧರ್ಮ ಕುರಿತಂತೆ ಲಂಕೇಶರು ಹೊಂದಿರುವ 'ನಿಲುವು' ಧನಾತ್ಮಕ. ಅದು ಸಾಮಾಜಿಕ ಬದ್ಧತೆ, ಸಾಂಸ್ಕೃತಿಕ ಎಚ್ಚರಗಳಿಂದ ಕೂಡಿದ್ದಾಗಿದೆ. ಮನದಾಳದ ಚಿಂತನೆಗಳನ್ನು ಸರಳವಾಗಿ, ಎಳೆ ಎಳೆಯಾಗಿ ಅಭಿವ್ಯಕ್ತಿಸುವ ಅವರ 'ಶೈಲಿ', ಕನ್ನಡ ಗದ್ಯದ ಅಪರೂಪದ ನಿದರ್ಶನವಾಗಿದೆ.

3.3.2.2. ಭಾಷಣ

ಟಿ.ಪಿ. ಕೈಲಾಸಂ ಎಂತಹ ವ್ಯಕ್ತಿ ಎಂದು ಕೆಲವು ಲಕ್ಷಣಗಳ ಮೂಲಕ ವಿವರಿಸುತ್ತಾರೆ ಲಂಕೇಶ್;

ಕೈಲಾಸಂ ಬಹಳ ಪ್ರತಿಭಾವಂತ ಇದ್ದಿರಬೇಕು.

ಕೈಲಾಸಂ ತುಂಬ ಹೃದಯವಂತ ವ್ಯಕ್ತಿಯಾಗಿರಬೇಕು.

ಕೈಲಾಸಂ ಅವರಿಗೆ ಅಖಂಡ ಧೈರ್ಯ ಇದ್ದಿರಬೇಕು.

ಈ ಎಲ್ಲಾ ಗುಣಲಕ್ಷಣಗಳಿಗೂ ಸೂಕ್ತವಾಗಿ ಕಾರಣಕೊಡುವ ಲಂಕೇಶ್, ಯಾರನ್ನೂ ಸುಖಾ ಸುಮ್ಮನೆ ಮೆಚ್ಚುವುದಿಲ್ಲ. ಅವರು ಮೆಚ್ಚುತ್ತಾರೆಂದರೆ ಮೆಚ್ಚಿಸಿ ಕೊಳ್ಳುತ್ತಿರುವ ವ್ಯಕ್ತಿಯ ಪ್ರಭಾವ ಲಂಕೇಶರ ಮೇಲೆ ಬಹಳವಾಗಿಯೇ ಆಗಿರಬೇಕು. ಆಗಿತ್ತುಕೂಡ ಏಕೆಂದರೆ ಹಣವೆಂದರೆ ಹೆಣವೂ ಬಾಯಿ ಬಿಡುವ ಕಾಲದಲ್ಲಿ ದುಡ್ಡಿಗೆ ಕಸದ ಬುಟ್ಟಿಯೂ ಒಂದು ಜಾಗ ಎಂದು

ತೋರಿಸಿದವರು ಕೈಲಾಸಂ. ಅವರಿಗೆ ಜೀವನದ ಬಗ್ಗೆ ಸನ್ಯಾಸತ್ವ ಬಂದಿದ್ದರೂ, ಜೀವನೋತ್ಸಾಹ ಮಾತ್ರ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ.

ಕೈಲಾಸಂ ಅವರ ಬಹಳಷ್ಟು ನಾಟಕಗಳ ಮುಕ್ತ ಪರಿಚಯ ಮಾಡಿಕೊಡುವ ಈ ಭಾಷಣದಲ್ಲಿ ಅವರ ಉತ್ತಮಿಕೆಯ ಮೂರ್ತ ಸ್ವರೂಪವನ್ನು ನಮ್ಮ ಮುಂದೆ ಇರಿಸುತ್ತಾರೆ. ಕೊನೆಯಲ್ಲಿ ಅವರ ಅತೀ ಹೃದಯವಂತಿಕೆ ಅತೀ ಸಿಡುಕಿನಂತೆ ಕೆಟ್ಟದ್ದು ಎಂಬುದಕ್ಕೆ ಅವರ ಕಾದಂಬರಿಗಳೇ ಸಾಕ್ಷಿ ಎಂದೂ ಹೇಳುವ ಮಾತು ಲಂಕೇಶರು ಕೈಲಾಸಂ ಅವರನ್ನು ವ್ಯಕ್ತಿಯಾಗಿ ಸಾಹಿತಿಯಾಗಿ ಗ್ರಹಿಸಿರುವ ಬಗೆಯನ್ನು ಬಿಂಬಿಸಿವೆ.

ಕಾನೂನಿನ ಕುರಿತು ತನ್ನ ನೆಚ್ಚಿನ ಲೇಖಕ ಕಾಫ್ಕಾ ಬರೆದುದನ್ನು ವಿದ್ಯಾರ್ಥಿಗಳಿಗೆ ಹೇಳುತ್ತಾ, ಹೇಗೆ ಅವರ ನ್ಯಾಯದ ಗೊಂಡಾರಣ್ಯ ಪಾಪಿಗಳ, ಅಪರಾಧಿಗಳ ಸ್ಥಾನವಾಗುತ್ತದೆ? ಎಂಬುದನ್ನು ಉದಾಹರಿಸುತ್ತಾರೆ. ನಮ್ಮಲ್ಲಿರುವ ಕಾನೂನಿಗೆ ಶಕ್ತಿ ತುಂಬಬೇಕಾದ ಅಗತ್ಯವಿದೆ. ಕಾನೂನಿಗೆ ಎಲ್ಲ ವಲಯಗಳನ್ನು ಒಳಪಡಿಸಬೇಕಿದೆ.

ನ್ಯಾಯ ದೊರಕಿಸುವಂತಹ ಸರಿಯಾದ ಕಾನೂನಿನ ಪಾಲನೆ ಆಗಬೇಕಿದೆ. ದೇಶದ ಕೊನೆಯ ಕೊಂಡಿಯವರೆಗೂ ಕಾನೂನು ತಲುಪಬೇಕೆಂಬ ಲಂಕೇಶರ ಆಶಯ ಈ ಬರಹದಲ್ಲಿ ಅಭಿವ್ಯಕ್ತಗೊಂಡಿದೆ.

3.3.2.3. ಮುನ್ನುಡಿ

'ಕಿಸ್ಮಿ'[7] ಎಂಬ ಮುನ್ನುಡಿಯ ಲೇಖನದಲ್ಲಿ ಸಿಂಹ ಅವರನ್ನು ಸಂಬೋಧಿಸಿ ಅವರ ಕೃತಿಗೆ ಬರೆದ ಲೇಖನವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರಲ್ಲಿ ಅವರ ಪದ್ಯಗಳನ್ನು ತಮ್ಮ ಮನೆಯವರೆಲ್ಲ ಓದಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಜೊತೆಗೆ ವ್ಯಕ್ತವಾಗುವ ನಮ್ಮ ಅಸ್ವಾಭಾವಿಕಗಳಿಗೆ ಹಿಡಿದ ಕನ್ನಡಿ, ಪದ್ಯದಲ್ಲಿ ಬರುವ ಹಿಪ್ಪಿಗಳು; ಲಂಕೇಶರಿಗೆ ಸಹಜತೆಯನ್ನು ಸಹಜವಾಗಿಯೇ ಸ್ವೀಕರಿಸುವವರೆಂದರೆ ಬಹಳ ಪ್ರೀತಿ.

ಮಾತಿಗೆ ಚೈತನ್ಯ ಕೊಡುವ ಮುಗ್ಧತೆ, ಅಚ್ಚರಿಗೊಳಿಸುವ ತಿಳುವಳಿಕೆಯುಳ್ಳ ಕವನರಚನೆಯೇ ಉತ್ತಮ ಎಂದು ಹೇಳುತ್ತಲೇ ಹಿಂದಿನ ಕವಿಗಳ ಧಾಟಿಯಲ್ಲೇ ಕವಿಸಮಯವನ್ನು ಬಳಸಿಕೊಳ್ಳುವುದರ ಕುರಿತ ಅಸಮಾಧಾನವೂ ಎದ್ದು ಕಾಣುತ್ತದೆ. ಕಾವ್ಯದಲ್ಲಿ ಸಿಗುವ ನೈತಿಕತೆಗೂ ಹೋಲಿಕೆ ಮಾಡುತ್ತಾ, ಯಾವುದನ್ನೂ, ವಿಮರ್ಶೆ ಮಾಡುವ ಜಾಯಮಾನದವರು ಲಂಕೇಶ್ ಎನ್ನುವುದನ್ನು ಸಾಬೀತು ಮಾಡಿದ್ದಾರೆ.

---

[7] ಕಂಡದ್ದು ಕಂಡ ಹಾಗೆ: ಪು. ಸಂ. 74

ಕಾವ್ಯವಿರುವುದು ಹೆಣ್ಣಿನ ಮೇಲಾದ್ದರಿಂದ ವಸ್ತು ಬಹಳ ಹಳೆಯದೇ ಆದರೂ ಸುಲಭವೇನಲ್ಲ. ಅದಕ್ಕಾಗಿ ಹೆಚ್ಚು ಹೆಚ್ಚು ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದರ ಕುರಿತು, ಕಾಣ್ಕೆಯನ್ನು ಅನುವಿಸುವುದರ ಕುರಿತು ಗಮನ ಸೆಳೆಯುತ್ತಾರೆ.

ತಮಗಿಷ್ಟವಾದ ಸಾಹಿತ್ಯ ಪ್ರಕಾರವಾದ ನಾಟಕ – ನಾಟಕಕಾರನ ಕುರಿತು ಬರೆಯುವಾಗ ಇಂಗ್ಲೆಂಡಿನ ದುರಾದೃಷ್ಟತೆಯನ್ನೂ ಬರೆಯುತ್ತಾರೆ. ಇಂಗ್ಲೆಂಡ್, ರಷ್ಯಾ, ಫ್ರೆಂಚರ ಅತ್ಯುತ್ತಮವಿರುವ ಪ್ರಕಾರದ ಕುರಿತು ಪೀಠಿಕೆ ಹಾಕಿ, ಐರ್ಲೆಂಡಿನ ಕಡೆಗೆ ಹೊರಳಿ, ಬರ್ನಾರ್ಡ್ ಷಾ ಕುರಿತು ತಮಗಿರುವ ಆಪ್ತ ಅಭಿಪ್ರಾಯವನ್ನು ಹೊರಹಾಕಿದ್ದಾರೆ.

ಬರ್ನಾರ್ಡ್ ಷಾ ಅವರ ಗದ್ಯಕ್ಕೆ ಮನಸೋತ ಲಂಕೇಶ್ ಅವರ ಸರಳ ಸ್ಪಷ್ಟ, ಅಸ್ಖಲಿತ ರೀತಿಗೆ ಮಾರು ಹೋಗಿದ್ದಾರೆ. ಐರ್ಲೆಂಡ್ ನೀಡಿದ ಮೂರು ಸಾಹಿತಿಗಳಲ್ಲಿ ಷಾ ಕೂಡ ಒಬ್ಬರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಹತ್ತೊಂಭತ್ತನೆಯ ಶತಮಾನದ ಹೊತ್ತಿಗೆ ಡಾರ್ವಿನ್, ಇಬ್ಸೆನ್, ಮಾರ್ಕ್ಸ್ ಇವರ ಪರಿಣಾಮವಾಗಿ ಇಂಗ್ಲೆಂಡ್‌ನ ಇತಿಹಾಸದತ್ತ ಓದುಗರ ಗಮನ ಸೆಳೆಯುವ ಲಂಕೇಶರು ಷಾ ಕುರಿತು ಇದ್ದ ಮೂರು ಅಭಿಪ್ರಾಯಗಳನ್ನು ಹೇಳುತ್ತಾರೆ. ಆದರೆ ಇವ್ಯಾವುದರ ಕಡೆಗೂ ಗಮನ ಕೊಡದ ಷಾ ತನ್ನ ತೇಜಸ್ಸನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ಷಾ ಕೃತಿಗಳ ಸಂಪೂರ್ಣ ಪರಿಚಯ ಮಾಡಿ ಕೊಟ್ಟಿರುವ ಲಂಕೇಶ್ ಅವರ ಬರವಣಿಗೆ ಶೈಲಿಯ ಬಗ್ಗೆ.

"ಯಾವ ಮಾತು ಎಲ್ಲಿ ಹೇಳಬೇಕೋ, ಅಲ್ಲಿ ಹೇಳುತ್ತಾ, ಉದ್ದ ಮಾತುಗಳ ಲಯಕೊಂಚವೂ ಕೆಡದಂತೆ ಆಡಿದಾಗ ಕಿವಿಗೆ ಹಿತವಾಗಿ ಆದರೆ ಅರ್ಥದಿಂದ ಲಯ ಅತಿಯಾಗಿ ಗಮನ ಸೆಳೆಯದಂತ ಬಳಸುತ್ತಾನೆ" ಎಂದು ಸಂಗೀತ ಬಲ್ಲ ಷಾ ಕುರಿತು ಹೇಳುತ್ತಾರೆ.

ಬಿ.ಆರ್. ಲಕ್ಷ್ಮಣರಾವ್ ಅವರ 'ಗೋಪಿ ಮತ್ತು ಗಾಂಡಲೀನ' ಕೃತಿಯ ಮುನ್ನುಡಿಯಲ್ಲಿನ ತುಲನೆ, ವಿಶ್ಲೇಷಣೆ ಗಮನಾರ್ಹ.

ತನ್ನ ಶಿಷ್ಯನಾದರೂ, ಅವರ ಕಾವ್ಯದಲ್ಲಿ ಒಳ್ಳೆಯ ಗುಣಗಳನ್ನೇ ಕಾಣುವ ಲಂಕೇಶರು ಕೃತಿಯನ್ನು ಕರ್ತೃವಿನ ಒಂದು ಭಾಗ ಎಂದು ಹೊಗಳುತ್ತಾರೆ. ಕೊರತೆಗಳನ್ನು ಹೇಳುತ್ತಾ, ಹೆಚ್ಚು ಹೇಳಿದರೆ, ಬರೆವಣಿಗೆಯನ್ನೇ ನಿಲ್ಲಿಸಿಬಿಡಬಹುದೆಂಬ ಭಯದಿಂದ ಮುಗ್ಧತೆಯನ್ನು ತಾಪಾಡಿಕೋ ಎಂಬ ಆಶಯವನ್ನಂತೂ ವ್ಯಕ್ತ ಪಡಿಸುತ್ತಾರೆ.

'ದೊರೆ ಈಡಿಪಸ್ ಮತ್ತು ಅಂತಿಗೊನೆ'[8] ಲೇಖನದಲ್ಲಿ ಅತ್ಯುತ್ತಮ ನಾಟಕವಾದ ಈಡಿಪಸ್‌ನ ಪ್ರದರ್ಶನದ ಬಗ್ಗೆ ಹೇಳುತ್ತಾ 'ಪ್ರಕೃತಿಗೆ ಕನ್ನಡಿ ಒಡಿಯಲೆತ್ನಿಸುವ' ಶೇಕ್ಸ್‌ಪಿಯರನ ರೀತಿಯನ್ನು ಮೆಚ್ಚಿಕೊಳ್ಳುತ್ತಾರೆ.

ಅತ್ಯಂತ ರುದ್ರ ಗಳಿಗೆಗಳನ್ನು ಒಳಗೊಂಡಿರುವ ಇದು ನಮಗೆ ಹತ್ತಿರವಾಗುವುದು, ದುಷ್ಟರನ್ನು ಶಿಕ್ಷಿಸುವ, ಶಿಷ್ಟರನ್ನು ಪರಿಪಾಲಿಸುವ, ನ್ಯಾಯವನ್ನು ಮೀರಿದ ತರ್ಕಾತೀತ ಶಕ್ತಿಯನ್ನು ತರುವುದರೊಂದಿಗೆ.

ಬದುಕಿನ ಆಕಸ್ಮಿಕಗಳು, ಆಶಾವಾದ, ತರ್ಕ, ಮಹತ್ವಾಕಾಂಕ್ಷೆ, ವಿಧಿಯ ಕುಹತದ ಉತ್ತರದಿಂದ ಮನುಷ್ಯ ಸುಳಿಯಿಂದ ಮೇಲೆ ಬರುವ ಪ್ರಯತ್ನದಲ್ಲಿ ಮತ್ತಷ್ಟು ಆಳಕ್ಕಿಳಿಯುತ್ತಲೇ ಹೋಗುತ್ತಾನೆ. ಹೀಗಾಗಿ ಈ ನಾಟಕ ಮನುಷ್ಯ ತನ್ನನ್ನು ತಾನು ಹುಡುಕಿಕೊಳ್ಳುವ ಕ್ರಿಯೆಯ ಪ್ರತಿಬಿಂಬವೇ ಆಗಿದೆ.

ಇದಕ್ಕೆ ಸಂವಾದಿಯಾಗಿ 'ಅಂತಿಗೊನೆ' ವ್ಯಕ್ತಿ, ವ್ಯವಸ್ಥೆ – ಸಮಾಜದ ನಡುವಿನ ಘರ್ಷಣೆಯನ್ನು ತೆಳುವಾದ ಸೂಕ್ಷ್ಮತೆಯೊಂದಿಗೆ ಮೂಲಭೂತವಾದ ಅನಿಸಿಕೆಯೊಂದಿಗೆ, ಘೋಷಿತ ಉತ್ತಮಿಕೆಯ ಹಿಂದೆ ಪ್ರೀತಿಗೆ ಯೋಗ್ಯವಾದ ವ್ಯಕ್ತಿತ್ವ ಸಿಗುವುದು ಕಂಡು ಬರುತ್ತದೆ.

ನಾಟಕಗಳ ಪ್ರದರ್ಶನಕ್ಕಾಗಿ ಅನುವಾದ ಮಾಡಿರುವುದಾಗಿ ಹೇಳಿಕೊಂಡ ಲಂಕೇಶರು ತಮ್ಮ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲವಾಗಿದೆಯೋ ಏನೋ ಎಂಬ ಪ್ರಶ್ನೆಯನ್ನು ಪ್ರಾಮಾಣಿಕವಾಗಿ ನೋಡುಗ – ಓದುಗರ ಮುಂದಿರಿಸುತ್ತಾರೆ. ಈ ಬಗೆ ಕನ್ನಡ ಬರಹಗಳಲ್ಲಿ ಅಪರೂಪ.

3.3.2.4. ಸಂದರ್ಶನ ಮತ್ತು ಅನುಬಂಧ

1972ರ ಫೆಬ್ರವರಿಯಲ್ಲಿ ದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷ ಶ್ರೀ ಸುರೇಶ್ ಅವಸ್ಥಿ ಅವರಿಗೆ ನೀಡಿದ ಸಂದರ್ಶನದ ಲೇಖನ ರೂಪ ಮತ್ತು ಅಡಿಗರ ಮನವಿಗಾಗಿ ಬರೆದ ಉತ್ತರ ರೂಪದ ಲೇಖನ ಮತ್ತು ಇಂಡಿಯನ್ ಲಿಟರೇಚರ್ ಎಂಬ ಸಾಹಿತ್ಯ ಅಕಾಡೆಮಿ ಪತ್ರಿಕೆಯಲ್ಲಿ ಪ್ರಕಟವಾದ (1975) ಲೇಖನವನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ನಾಟಕ, ರಂಗಭೂಮಿ, ನವೋದಯ ನವ್ಯ ಕಾವ್ಯಗಳು, ವಿಚಾರ ಗೋಷ್ಠಿಗಳ ಕುರಿತು ಅವಸ್ಥಿಯವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಪ್ರದರ್ಶಿತಗೊಂಡ ನಾಟಕಗಳು, ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳ ಪ್ರಸ್ತಾಪವಿದೆ.

---

[8] ಅದೇ : ಪು.ಸಂ. 91

‘ಜೋಕುಮಾರ ಸ್ವಾಮಿ’, ‘ಸಂಗ್ಯಾಬಾಳ್ಯಾ’, ‘ಋಷ್ಯ ಶೃಂಗ’, ‘ಹಯವದನ’, ‘ಕೊಡೆಗಳು’ ಮುಂತಾದ ನಾಟಕಗಳ ಪ್ರದರ್ಶನದ ಕುರಿತು ಅವಸ್ಥಿಯವರಿಗೆ ದೀರ್ಘವಾದ ಸಂದರ್ಶನ ನೀಡಿದ್ದಾರೆ.

“ಲೇಖಕನಾದವನು ಎಲ್ಲೋ ಒಂದೆಡೆ ಏಕಾಕಿಯಾಗಿರಬೇಕು. ಜೀವನದಲ್ಲಿ ತೊಡಗಿರಬೇಕೇ ಹೊರತು ರಂಗಭೂಮಿಯಲ್ಲಿಲ್ಲ........ ಅದರಲ್ಲಿ ಮುಳುಗಿರಲೂ ಬೇಕು......... ಎಷ್ಟು ಮಟ್ಟಿಗೆ ಅಲಿಪ್ತನೂ ಆಗಿರಬೇಕು” ಎಂಬ ಮಾತು, ಅವರ ಧಾಟಿ, ಶೈಲಿ ಮತ್ತು ಬಂಧದ ನಿಷ್ಠಗಳ ಕುರಿತು ಪ್ರಜ್ಞಾ ಪೂರ್ವಕವಾಗಿದ್ದು, ಮೆಚ್ಚುಗೆ ಗೌರವ ಹುಟ್ಟಿಸುತ್ತವೆ.

ಅಡಿಗರ ಮನವಿಗೊಂದು ಉತ್ತರ ಕೊಡುತ್ತಾ, ಎಲ್ಲ ಲೇಖಕರಿಗೆ ಇರುವ ಹಾಗೆ ಅಸೂಯೆ ಎಂಬುದು ಬಾಲಿಶವಾದರೂ ನನ್ನಲ್ಲೂ ಇದೆ. ಆದರೆ ಸಾಹಿತ್ಯ ಎಂದಿಗೂ ಪಲಾಯನವಾದವನ್ನು ಪೋಷಿಸುವಂತಿರಬಾರದು, ಮಿಥ್ಯ ಸತ್ಯಗಳ ಹಿನ್ನಲೆಯಲ್ಲಿ ಕೊಲೆ ಮಾಡಿದವನೊಬ್ಬ ಇಹ – ಪರಗಳ ಭಾಷಣಕೊಟ್ಟು, ಕೊಲೆಯ ಶಿಕ್ಷೆಯಿಂದ ಪಾರಾಗುವಂತಿರಬಾರದು ಎಂಬ ಎಚ್ಚರಿಕೆಯ ಮಾತುಗಳನ್ನಾಡುತ್ತಾರೆ.

ಇವು ಲಂಕೇಶರ ವಿಮರ್ಶೆಯೂ ಹೌದು; ಆತ್ಮ ವಿಮರ್ಶೆಯೂ ಹೌದು; ‘ಪ್ರಾಮಾಣಿಕತೆ’ ವಿಮರ್ಶೆಯ ಮುಖ್ಯ ಲಕ್ಷಣ ಎಂಬ ಲಂಕೇಶರ ನಿಲುವನ್ನು ಈ ಮಾತು ದೃಷ್ಟಾಂತೀಕರಿಸಿವೆ.

ಅಧ್ಯಾಯ – 4

4.1. ಮುಕ್ತಾಯ

ವಿಮರ್ಶೆಯ ಸಿದ್ಧಾಂತಗಳನ್ನು ದೇಶೀಯಗೊಳಿಸುವ ಇಲ್ಲವೇ ದೇಶೀಯ ಚಿಂತನೆಯ ನೆಲೆಗಳಿಗೆ ಸಿದ್ಧಾಂತದ ಇಳಹದಿಯನ್ನು ಕಟ್ಟಿಕೊಡುವ ಪ್ರಯತ್ನ ಗಮನಾರ್ಹ. ಹಿಂದಿನ ಎಲ್ಲ ವಿಮರ್ಶೆಗಳ ಮನೋವೃತ್ತಿ ಮತ್ತು ವಿಧಾನಗಳ ಮಹತ್ವ ಮನವರಿಕೆಯಾಗಲು ಸೂಕ್ಷ್ಮ ನಿರೀಕ್ಷಣೆ ಅಗತ್ಯ.

ಮೌಲ್ಯಮಾಪನವೆನ್ನುವುದು ಯಾವಾಗಲೂ ವ್ಯಕ್ತಿ ಸಾಪೇಕ್ಷವಾಗಿರಬೇಕು. ಈ ಮೌಲ್ಯ ಮಾಪನ ವ್ಯವಸ್ಥೆಯ ಶಿಥಿಲತೆಗೆ ಕಾರಣವಾದ ಕೃತಿಗಳ ಬಗೆಗಿನ ಹೊರ ಪ್ರಪಂಚದ ಅನಾಸಕ್ತಿಯನ್ನು ಹೋಗಲಾಡಿಸುವಂತಾಗಬೇಕು. ಈ ಹಿನ್ನಲೆಯಲ್ಲಿ ಗೌಣ ಎನಿಸುವ ಕೃತಿಯ ಹೊರ ಆವರಣದ ಬಗೆಗೆ ಟೀಕಿಸುವ ಕುಹಕವನ್ನು ಆಚೆಗಿಟ್ಟು, ಅದರ ಸಾರ ಹೂರಣವನ್ನು ಆಸ್ವಾದಿಸುವ ಅರೋಗ್ಯಕರವಾದ ಜಾಗರೂಕತೆಯ ಮರು ಪರಿಶೀಲನೆ ನಡೆಯಬೇಕಾದ ಅಗತ್ಯವಿದೆ.

ಹೀಗಾಗಿ ಸಾಹಿತ್ಯ ವಿಮರ್ಶೆ ವೈವಿಧ್ಯಮಯ ವಿಚಾರಗಳಿಗೆ ಆಸ್ಪದ ಕೊಟ್ಟು ಕಾವ್ಯ ಮತ್ತು ಕಲೆಯ ಆಯಾಮಗಳನ್ನು ಇನ್ನಷ್ಟು ಜೀವ ತುಂಬಬೇಕಾಗಿದೆ. ಕನ್ನಡದ ವಿಮರ್ಶೆಗೆ ಅವಲೋಕನ ಶಕ್ತಿ ಮತ್ತು ಕರ್ತೃತ್ವ ಶಕ್ತಿ ಎಂಬ ಕ್ರಿಯಾ ಲಕ್ಷಣಗಳಿಂದ ಕೂಡಿದ ಅರ್ಥ ವಿಶೇಷವಿರುವುದರಿಂದ ವಿಮರ್ಶೆಯ ಕಾರ್ಯ ವಿಸ್ತಾರ ಮತ್ತು ಜವಾಬು ಹೆಚ್ಚಾಗಿದೆ. ಹಾಗಾದರೆ ಇಂದಿನ ವಿಮರ್ಶೆ ಹೇಗಿದೆ? ಎಂಬ ಪ್ರಶ್ನೆ ಕೇಳಿಕೊಂಡರೆ, ಹಿಂದಿನ ಕವಿಗಳು ಸುಕವಿ ವಂದನೆ ಕುಕವಿ ನಿಂದೆಯನ್ನು ತಮ್ಮ ವಿಮರ್ಶನಾ ನೈಪುಣ್ಯವೆಂದು ತೋರುತ್ತಿದ್ದರು. ಇಂದಿನ ಪತ್ರಿಕೆಗಳಲ್ಲಿ ಬೇಕಾದವರ ಮನ್ನಣೆ ಬೇಡಾದವರ ಖಂಡನೆ ಮಾಡುವ ವ್ಯೂಹವನ್ನು ವಿಮರ್ಶಕರು ಇನ್ನೂ ದಾಟಬೇಕಿದು.

ಈಗಿರುವ ಸ್ಥಿತಿಯಿಂದ ಮೇಲೇರಬೇಕಿದೆ. ಅಂದರೆ ವಿಮರ್ಶಕ ಗ್ರಂಥಕರ್ತನನ್ನು ವಿಮರ್ಶಿಸುವ ಬದಲು ಗ್ರಂಥವನ್ನಷ್ಟೆ ವಿಮರ್ಶಿಸುವಂತಾಗಬೇಕು. ಕವಿಯ ದೃಷ್ಟಿಯನ್ನು ತಾವು ಅರಿಯುವುದರ ಬದಲು ತಮ್ಮ ದೃಷ್ಟಿಯನ್ನು ಕವಿಯು ಪ್ರತಿಪಾದಿಸಿಲ್ಲ ಎಂದು ಆಕ್ಷೇಪಿಸುವಂತಾಗಬಾರದು. ಏಕೆಂದರೆ ವಿಮರ್ಶೆಯ ಸಂಬಂಧ ಯಾವಾಗಲೂ ತನ್ನ ಮುಂದಿರುವ ಜನತೆಯೊಂದಿಗೆ ಇರಬೇಕೇ ಹೊರತು ಕವಿಯೊಂದಿಗೆ ಅಲ್ಲ.

ಕವಿಯನ್ನು ತಿದ್ದಲು ಹೋಗುವ ವಿಮರ್ಶೆ ತನ್ನ ಕೆಲಸವನ್ನು ಮರೆತು ತನಗೆ ಸಂಬಂಧ ಪಡದ ಉದ್ಯಮಕ್ಕೆ ಕೈ ಹಾಕಬಾರದು. ನಿಜವಾಗಿ ವಿಮರ್ಶೆ ಮಾಡಬೇಕಾದುದೇನು? ಅದು ಅಭಿರುಚಿಯ ಸುಧಾರಣೆ ಹೇಗೆಂದರೆ, ಒಂದು ಕ್ಷಣ ತನ್ನ ಕೀಳು ಅಭಿರುಚಿಯನ್ನು ಕೆಣಕಬಲ್ಲ ವಸ್ತುವಿಗಿಂತ ಶಾಶ್ವತವಾದ ಹಿತವನ್ನು ಸಂತೋಷವನ್ನು ಉಂಟುಮಾಡಬಲ್ಲ ವಸ್ತು ಹೆಚ್ಚು ಬೆಲೆಯುಳ್ಳದ್ದು ಎಂಬ ಕಲ್ಪನೆ ಜನರಲ್ಲಿ (ಓದುಗ) ಬರುವಂತೆ ಮಾಡುವುದು ವಿಮರ್ಶೆಯ ಕೆಲಸ. ಸಾಹಿತ್ಯ ಪರಂಪರೆಯಲ್ಲಿ ಪರಿಶೀಲನೆಯಲ್ಲಿ ವಿಮರ್ಶೆಯ ಪಾತ್ರ ಪ್ರಮುಖವಾದುದು. ಹದವರಿತ ವಿಮರ್ಶೆಗೆ ಹೊಣೆಗಾರಿಕೆಯೂ ಲಭ್ಯವಾಗುತ್ತದೆ. ಸಾಹಿತ್ಯ ಸಂದರ್ಭದಲ್ಲಿ ಸಾರ್ಥಕತೆಯೂ ಒದಗಿ ಬರುತ್ತದೆ.

ವಿಮರ್ಶೆ ಎಂಬ ಸಾಧನವನ್ನು ಹೇಗೆ ಬಳಸಲಾಗುತ್ತದೆ ಎಂಬ ಪ್ರಶ್ನೆಯೂ ಇಂದು ಮುಖ್ಯವಾಗುತ್ತದೆ. ವಿವಿಧ ಸಾಹಿತ್ಯ ಸಂದರ್ಭಗಳಲ್ಲಿ ಹುಟ್ಟಿಕೊಳ್ಳುವ ಹೊಸ ಚಿಂತನೆಗಳು ವಿಮರ್ಶೆಯ ಮರು ಚಿಂತನೆಗಳೂ ಆಗುವುದು ಸ್ವಾಭಾವಿಕ ಚಿಂತನೆ ವಿವೇಚನೆಗಳ ಒಪ್ಪಂದವನ್ನು ಒಳಗಿಟ್ಟುಕೊಂಡು ಬೆಳೆಯುವ ವಿಮರ್ಶೆ ಸಾಂಸ್ಕೃತಿಕ ಪ್ರಕ್ರಿಯೆಯ ಪೂರಕ ಸಾಧನವಾಗಿ ಹಿನ್ನೋಟ ಮತ್ತು ಮುನ್ನೋಟಗಳ ಒಕ್ಕೂಟದಲ್ಲಿ ಹುಟ್ಟುವ ಒಳನೋಟದ ನೆಲೆಯಾಗಿ ತೊಡಗಿಕೊಳ್ಳಬೇಕಾಗಿದೆ.

ಒಂದೊಂದು ವಿಮರ್ಶನ ತತ್ವಗಳ ನೆಲೆ ಮತ್ತು ಅವುಗಳು ಹೇಗೆ ಸಾಹಿತ್ಯ ಕೃತಿಯ ಅಧ್ಯಯನದಲ್ಲಿ ಕ್ರಿಯಾಶೀಲವಾಗುತ್ತದೆಯೆಂಬುದನ್ನು ಕುರಿತು ವಿಚಾರ ಮಾಡಬೇಕಾಗಿದೆ. ಈ ಕಾಲಮಾನದಲ್ಲಿ ಬೇರೆ ಬೇರೆ ಸಾಹಿತ್ಯಿಕ ತತ್ವಗಳ ಹಿನ್ನಲೆಯಲ್ಲಿ ಕೆಲಸ ಮಾಡುತ್ತಿರುವ ವಿಮರ್ಶಕರು ಇದ್ದಾರೆ. ಇಂಥ ಅಧ್ಯಯನ ನಮ್ಮ ಸಂದರ್ಭದಲ್ಲಿ ಸ್ವೇಚ್ಛೆಯಾಗಿ ಬಳಕೆಯಾಗುತ್ತಿದೆ.

ಒಂದು ವಿಮರ್ಶನ ವಿಧಾನಕ್ಕೂ, ಮತ್ತೊಂದು ವಿಮರ್ಶನ ವಿಧಾನಕ್ಕೂ ಇರುವ ಮೂಲಭೂತ ವ್ಯತ್ಯಾಸಗಳು ಅವುಗಳ ಅನ್ವಯದಲ್ಲಿ ಕಾಣಲಾಗುವುದಿಲ್ಲ. ಪಾಶ್ಚಾತ್ಯ ಸಂದರ್ಭದ ವಿಮರ್ಶನ ಪಂಥಗಳಿಗೆ ಸಮಾಂತರವಾಗಿ ಇಲ್ಲಿನ ವಿಮರ್ಶೆಯ ತಾತ್ವಿಕ ಪಂಥಗಳು ರೂಪುಗೊಳ್ಳಬೇಕಿಲ್ಲ. ಆದ್ದರಿಂದಲೇ ಈ ಕಾಲದ ವಿಮರ್ಶಕನಿಗೆ ನಮ್ಮ ಸಂದರ್ಭದಲ್ಲಿ ರೂಪುಗೊಳ್ಳುತ್ತಿರುವ ವಿಮರ್ಶನ ವಿಚಾರಗಳನ್ನು ಖಚಿತವಾಗಿ ವಿಮರ್ಶಿಸಿಕೊಳ್ಳುವ ಜವಾಬ್ದಾರಿ ಇದೆ. ಕಳೆದ ಎರಡು ದಶಕಗಳು ಈ ದೃಷ್ಟಿಯಿಂದ ಕನ್ನಡ ಸಾಹಿತ್ಯ ತತ್ವಕ್ಕೆ ಅಧಿಕ ಪ್ರಮಾಣದಲ್ಲಿ ಹೊಸ ಚಿಂತನೆಯನ್ನು, ದೃಷ್ಟಿಕೋನವನ್ನು, ವಿಮರ್ಶನ ಪರಿಭಾಷೆಯನ್ನು ಒದಗಿಸಿಕೊಟ್ಟ ಕಾಲ.

ಯಾವುದೇ ವಿಮರ್ಶಕ ತನ್ನ ಚೈತನ್ಯವನ್ನು ದಶಕಗಳ ಕಾಲದ ಅನುಭವವನ್ನು ಬಸಿದು ಸಾಧಿಸಿರುವುದನ್ನು ಗೌರವಗಳಿಂದ ನೋಡುವುದು ಅಗತ್ಯ. ಆದರೆ ಸಾಹಿತ್ಯದ ಅದ್ಯಯನ,

ಸೃಜನಶೀಲ ಸಾಹಿತ್ಯ ರಚನೆ ಈಗಿನ ಅನಾಸಕ್ತ ವಿದ್ಯಾರ್ಥಿಗಳಲ್ಲಿ ತುಂಬುವ ಕೆಲಸ ನಡೆಯುವುದರ ಜೊತೆಗೆ ಈ ದಿನಗಳಲ್ಲಿ ವಿಮರ್ಶೆಯನ್ನು ಸ್ವತಂತ್ರವಾದ ಜ್ಞಾನ ಶಿಸ್ತು ಎಂದು ಸ್ಥಾಪಿಸುವ ಸವಾಲು ಕೂಡ ನಮ್ಮೆಲ್ಲರ ಮುಂದಿದೆ.

ಬದಲಾಗುತ್ತಿರುವ ಸಾಹಿತ್ಯ ಪರಿಸರ ಬಯಸುವ ಬೌದ್ಧಿಕ ಸ್ವರೂಪವನ್ನು ನಿಚ್ಚಳವಾಗಿ ಕಾಣಿಸಿಕೊಂಡು ಮುಂದುವರಿಯಬೇಕಾದ ಸ್ಥಿತಿ ಇರುವುದರಿಂದ, ಇದಕ್ಕಾಗಿ ಹಿರಿಯ ವಿಮರ್ಶಕರ ಪಾಂಡಿತ್ಯ ಮತ್ತು ಅನುಭವಗಳ ದರ್ಶನದಿಂದ ಪಾಠ ಕಲಿಯಬೇಕಿದೆ.

ವಿಮರ್ಶೆಯಲ್ಲಿರಬೇಕಾದ ಆದರ್ಶ ಗುಣಗಳಲ್ಲಿ ಒಂದಾದ – ಅಭಿಪ್ರಾಯಗಳನ್ನು ಮುಂದಿಟುವಾಗ ತೋರಬೇಕಾದ ನೈತಿಕ ಧೈರ್ಯ ಉಳಿಸಿಕೊಳ್ಳಬೇಕಾಗಿದೆ.

ಸಾಹಿತ್ಯ ವಿಮರ್ಶೆಯ ಮೌಲ್ಯಮಾಪನದ ಮಾನದಂಡಗಳನ್ನು, ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಟ್ಟಿಕೊಳ್ಳುವುದು ಇಂದಿನ ಅನಿವಾರ್ಯತೆ ಆಗಿದೆ. ಈ ದಿಸೆಯಲ್ಲಿ ನಮ್ಮ ಮೀಮಾಂಸೆ – ವಿಮರ್ಶೆಯ ಶಿಸ್ತುಗಳು ಬೆಳೆದು ನಿಲ್ಲಬೇಕಿದೆ.

ಗಾಂಧಿ ತತ್ವಗಳ ವಿಮರ್ಶಾತ್ಮಕ ಪ್ರಸ್ತುತತೆ ಹಾಗೂ ಕಮ್ಯುನಿಷ್ಟ್ ಅಧಿಕಾರದ ಕೆಟ್ಟ ಅನುಭವಗಳಿಂದ ಕಲಿಯಬೇಕಾದ ಪಾಠಗಳೆರಡಕ್ಕೂ ಬೆಲೆ ಬರಬೇಕು. ಅಂಬೇಡ್ಕರ್, ಲೋಹಿಯ, ಪೆರಿಯಾರ್ ಮೊದಲಾದವರು ಸಮಸ್ಯೆಗಳನ್ನು ಬೇರೆ ಬೇರೆ ಮುಖಗಳಿಂದ ವಿಶ್ಲೇಷಿಸಿದ್ದಾರೆ. ಇವರೆಲ್ಲರ ತತ್ವಗಳು ಮಾರ್ಗದರ್ಶಕವಾಗಬೇಕೇ ಹೊರತು ಅದೇ ನಮ್ಮನ್ನು ವಿಮರ್ಶೆಯನ್ನು ಆಳಲು ಬಿಡಬಾರದು.

ಯಾವುದೇ ವಿಮರ್ಶೆಯ ಮೂಲಮಾನಗಳು ಮೂರು

1. ಸಮಾಜ ಮತ್ತು ಲೇಖಕ.

2. ಲೇಖಕ ಮತ್ತು ಕೃತಿ

3. ಕೃತಿ ಮತ್ತು ಸಮಾಜ (ವಿಮರ್ಶೆ)

ಮೂರನೇ ಮೂಲಮಾನವಾದ ವಿಮರ್ಶೆಯ ಪ್ರಗತಿಗಾಗಿ ಹೋರಾಡುವ ಸ್ಥಿತಿ ಇದೆ. ಇಂಥ ಹೋರಾಟಗಳ ಒಟ್ಟುಗೂಡುವಿಕೆಯಲ್ಲಿ ಉತ್ತಮ ವಿಮರ್ಶೆ ಒಳಗೊಂಡಿರುತ್ತದೆ.

ಈ ಎಲ್ಲಾ ಅಂಶಗಳೂ ಲಂಕೇಶರ ವಿಮರ್ಶೆಯ ಧಾತು ಮತ್ತು ಮಾನದಂಡಗಳಾಗಿವೆ ಎಂಬುದೇ ಲಂಕೇಶರ ವಿಮರ್ಶೆಯ ಹೆಗ್ಗಳಿಕೆಯಾಗಿದೆ. ಲಂಕೇಶರ – ಬರಹವನ್ನು – ವಿಮರ್ಶೆಯನ್ನು ಓದದೆ ಅವರನ್ನು ಟೀಕಿಸುವವರೇ ಹೆಚ್ಚು. ಇದು ಬ್ರಾಹ್ಮಣರ ಷಡ್ಯಂತ್ರವೂ ಹೌದು.

ಕುವೆಂಪುವನ್ನು ದಮನಿಸಿದ ಶಕ್ತಿಗಳೇ ಲಂಕೇಶರನ್ನು ಹಣಿಯಲು ನೋಡಿದವು ಕುವೆಂಪು ತಮ್ಮ 'ತಾತ್ವಿಕತೆ'ಯಿಂದ ನೆಲೆನಿಂತರೆ ಲಂಕೇಶ್ ತಮ್ಮ 'ಪ್ರಾಯೋಗಿಕತೆ'ಯಿಂದ ಗೆದ್ದರು.

ಲಂಕೇಶರ ಬರಹ ಕನ್ನಡದ ಅಪರೂಪದ ಸಾಧನೆ. ತಮ್ಮ ಸಾವಿನ ಕ್ಷಣದವರೆಗೂ 'ಸಾಹಿತ್ಯ'ವನ್ನು ಅದರ ಅನನ್ಯತೆಗಾಗಿ 'ಜೀವನ್ಮರಣದ ಪ್ರಶ್ನೆ' ಎಂದು ಭಾವಿಸಿದ್ದ ಲಂಕೇಶರ ವಿಮರ್ಶೆ ಕನ್ನಡ ವಿಮರ್ಶೆಯ ಮುಖ್ಯ ನೆಲೆ ಮತ್ತು ಸೆಲೆ ಅದಕ್ಕೆ ಸಾಕ್ಷಿ ಅವರ ಟೀಕೆ–ಟಿಪ್ಪಣಿ, ಸಾಹಿತಿ – ಸಾಹಿತ್ಯ – ವಿಮರ್ಶೆ ಮತ್ತು ಇತರ ಬರಹಗಳು.

ಕನ್ನಡ ವಿಮರ್ಶೆಗೆ 'ಸಾಸ್ಕೃತಿಕ ಅಧ್ಯಯನ' 'ಸ್ತ್ರೀವಾದಿ ನೋಟ' ಮತ್ತು 'ಬಹುದನಿ'ಗಳನ್ನು ನೀಡಿದ ಕಾಣ್ಕೆ ಲಂಕೇಶರದು. ಕನ್ನಡ ಸಾಹಿತ್ಯದ ಭಿನ್ನ ಅವಿಚ್ಛಿನ್ನ ದನಿ–ಧ್ವನಿ ಲಂಕೇಶ್.

ವಚನಕಾರರ ನಂತರ ಕನ್ನಡ ಭಾಷೆಯ ಆಯಾಮಗಳನ್ನು ಬಿಂಬಿಸಿದ ಕೀರ್ತಿ ಲಂಕೇಶರದು. ಹಾಗಾಗಿ ಕುವೆಂಪು ನಂತರದ ಮಹತ್ವದ ಲೇಖಕ, ವಿಮರ್ಶಕ ಎಂದರೆ ಲಂಕೇಶರೇ!

ಸಾಹಿತ್ಯದಲ್ಲಿ ತಮ್ಮ ಇಂದಿನ ಅನುಭವಗಳೊಂದಿಗೆ ಹಿಂದಿನ ಅನುಭವಗಳಿಗೆ ಹಿಂದಿರುಗುವುದು ಮತ್ತು ತಾವೇ ಬೆಳೆಸಿದ ಪಾತ್ರಗಳನ್ನು ಸನ್ನಿವೇಶಗಳನ್ನು ತಮ್ಮದೇ ತಿಳುವಳಿಕೆಯ ಬೆಳಕಿನಲ್ಲಿ ಮತ್ತೆ ಕಟ್ಟುವ ಸಾಹಿತಿಗಳಿಗೆ ಸಹಜವಾದ ಕ್ರಿಯೆ ಲಂಕೇಶರಲ್ಲೂ ಕಂಡುಬರುತ್ತದೆ. ಹೀಗೆ 'ಹಿನ್ನೋಟ' ಮಾಡುವುದು ಪುನರಾವರ್ತನೆ ಎನಿಸದೆ 'ಪುನರ್‌ರಚನೆ', ಹೊಸ ಹೊಳಹಿನ ಸೃಷ್ಟಿ ಎನಿಸುತ್ತದೆ. 'ಪ್ರಸ್ತುತ' ಮತ್ತು 'ಕಂಡದ್ದು ಕಂಡ ಹಾಗೆ' ಕೃತಿಗಳಲ್ಲಿನ ಲೇಖನಗಳು ಹೀಗೆ ಮರುಹುಟ್ಟಿಗೆ ಒಳಗಾಗಿ ಸೃಜನಶೀಲವಾಗಿ ಕಾಣುತ್ತವೆ.

ಲಂಕೇಶರ ಸಮಗ್ರ ವಿಮರ್ಶೆಯನ್ನು ಗಮನಿಸಿದಾಗ ಅವರು ಬಳಸಿದಂತ ಪ್ರತಿಮೆಗಳು, ಕೊಟ್ಟ ಉದಾಹರಣೆಗಳ ಅಧ್ಯಯನವು ಹಲವಾರು ಒಳನೋಟಗಳನ್ನು ಕೊಡುತ್ತದೆ. ಸಾಮಾಜಿಕ ಪರಿವರ್ತನೆಯ ಮೂಲಕವೇ ಸಾಧ್ಯವಾಗಿರುವ ಮುಖಾಮುಖಿಯನ್ನು ಮತ್ತು ಅದರ ಫಲವಾಗಿ ಓದುಗ ಪಡೆಯಬಹುದಾದ ವಿವೇಕವನ್ನು ಇಲ್ಲಿನ ಲೇಖನಗಳಿಂದ ಗ್ರಹಿಸಬಹುದು.

ಸಾಹಿತ್ಯ – ಸಾಹಿತ್ಯೇತರ – ವೈಯಕ್ತಿಕ – ಸಾಮಾಜಿಕ ಎಂಬ ಆಯಾಮಗಳಲ್ಲಿ ಬೇರ್ಪಡಿಸದಿದ್ದರೂ, ಹಾಗಲ್ಲದ ಸಂಯೋಜನೆಯನ್ನು ವಿಶಿಷ್ಟ ಮಾರ್ಗವಾಗಿ ಮಾಡುವಲ್ಲಿ ಲಂಕೇಶ್ ಈ ಲೇಖನಗಳಲ್ಲಿ ಯಶಸ್ವಿಯಾಗಿದ್ದಾರೆ.

ನೋಡಲು, ಕೇಳಲು, ಸಂಕೀರ್ಣವಾದುದನ್ನೂ ಸಾಮಾಜಿಕನಿಗೆ ತಲುಪುವಂತ ಸರಳವಾದ ಬಗೆಯಲ್ಲಿ ಹೇಳುವ ಮಾರ್ಗವೇ ಆಕರ್ಷಕ ಹೀಗೆ ಸರಳಗೊಳಿಸಿಕೊಳ್ಳುವುದರ ಮೂಲಕ ಅವರ

ಲೇಖನಗಳು ಏಕ ಆಯಾಮದ ಜಡರಚನೆಗಳಾಗುವ ಅಪಾಯದಿಂದ ಪಾರಾಗಿವೆ. ಇದರ ಪರಿಣಾಮ ವಿಮರ್ಶೆಯಲ್ಲಿನ ಈ ಹೊಸ ಪ್ರಯೋಗ ಮತ್ತು ಪಡೆದ ಯಶಸ್ಸು ಅವರ ಬರಹಗಳನ್ನು ಏಕತಾನತೆಯಿಂದ ಪಾರುಮಾಡಿವೆ.

ಲಂಕೇಶರ ಲೇಖನಗಳು ಓದುಗರನ್ನು ಬಂಧನದಲ್ಲಿ ಸಿಲುಕಿಸುವುದಿಲ್ಲ, ಮುಕ್ತವಾಗಿ ಆಗಿ ಯೋಚಿಸುವಂತೆ ಮಾಡುತ್ತವೆ.

ವಿಮರ್ಶೆಯ ಲಕ್ಷಣಗಳನ್ನು ಗಮನಿಸುವುದಾದರೆ, ತಮ್ಮ ಲೇಖನಗಳಲ್ಲಿ ಕೊಡುವ ವ್ಯಾಖ್ಯಾನವನ್ನು ಘಟನೆಯ ಹೊರಗೆ ನಿಂತು ಕೊಡುವ ಸ್ಥೂಲ ಹೇಳಿಕೆಗಳ ಮೂಲಕ ಓದುಗರಿಗೆ ಯಾವ ದಿಕ್ಕಿನಲ್ಲಿ ಯೋಚಿಸಬಹುದೆಂಬ ಸೂಚನೆ ನೀಡುವುದು ಗಮನಾರ್ಹ.

ಭಾಷೆಯ ಬಳಕೆಯಲ್ಲೂ ಅಷ್ಟೇ. ಸಮಕಾಲೀನ ಸಾಹಿತಿ – ವಿಮರ್ಶಕರಿಗಿಂತ ಭಿನ್ನವಾಗಿ ಭಾಷೆಯನ್ನು ಬಳಸುವ ನಿಲುವು ಅವರನ್ನು ಪ್ರತ್ಯೇಕ ಅಸ್ತಿತ್ವ ಕಂಡುಕೊಳ್ಳುವಂತೆ ಮಾಡಿದೆ. ಇಂತದೊಂದು ಶೈಲಿಯನ್ನು ಬಳಸುವುದರಿಂದ ಒಟ್ಟು ಸನ್ನಿವೇಶಕ್ಕೆ ಅಥವಾ ವಿಮರ್ಶಿತ ಕೃತಿಯ ಒಳಹೊಗಲು ಕೆಲವು ಮಾರ್ಗದರ್ಶಿ ಒಳನೋಟಗಳು ಹೊಮ್ಮಲು ಸಾಧ್ಯವಿದೆ.

ಲಂಕೇಶರ ಲೇಖನಗಳು ಸಮಕಾಲೀನ ಕನ್ನಡ ಸಾಹಿತ್ಯದ ಮತ್ತು ಸಮಾಜದ ಕೆಲವು ಮುಖ್ಯ ಸಮಸ್ಯೆಗಳನ್ನು ತಮ್ಮದೇ ರೀತಿಯಲ್ಲಿ ಸ್ಪಂದಿಸುವುದರಿಂದ ಮುಖ್ಯವಾಗಿವೆ.

ಲಂಕೇಶರ ಬರವಣಿಗೆಗಳ ತುಡಿತವಿರುವುದು ಪ್ರೀತಿ ಪೂರ್ಣವಾದ ತಿಳಿವಳಿಕೆ ಹಾಗೂ ಒಪ್ಪಂದಗಳ ಕಡೆಗೇ ವಿನಾ ಅವಿವಾರ್ಯವಾದ ಹಿಂಸೆಯಿಂದ ಕೂಡಿದ ಮುಖಾಮುಖಿಯ ಕಡೆಗಲ್ಲ. ಇವು ಒಟ್ಟು ಸನ್ನಿವೇಶದ ಬಗ್ಗೆ ಲಂಕೇಶರ ನಿಲುವನ್ನು ಸ್ಪಷ್ಟಮಾಡಿಸುತ್ತವೆ. ಸಮುದಾಯಗಳು ಕ್ರಮೇಣ ಧೈರ್ಯ, ಆತ್ಮವಿಶ್ವಾಸ, ಪ್ರತಿಭಟನೆಯ ಎಚ್ಚರಗಳನ್ನು ಸಂಪಾದಿಸುತ್ತಾ ತಮ್ಮಲ್ಲಿ ಮೊದಲಿಂದಲೂ ಇದ್ದ ವಿವೇಕ, ಪ್ರತಿಭೆಗಳನ್ನು ಬಯಲಿಗೆ ತರುವಂತ ಕ್ರಿಯೆ ನಡೆಯಬೇಕೆಂದು ಕೃತಿಯ ಮೂಲಕ ತೋರಿಸಿದವರು ಲಂಕೇಶ್.

ಬೇರೆ ಬೇರೆ ಆಯಾಮದ ಉದಾಹರಣೆಗಳನ್ನು ಸಮಗ್ರ ದೃಷ್ಟಿಯಿಂದ ನೋಡಿದರೆ ಸಿಗುವ ಗ್ರಹಿಕೆಯು ಅಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಗಳನ್ನು ಪರಸ್ಪರ ಪೂರಕವನ್ನಾಗಿಸುತ್ತವೆ. ಇದರ ಮೂಲಕ ಅವರು ತಲುಪಿರುವ ಅಂತರಂಗದ ಆಳ ಗಾಢವಾದವು. ಕೆಲವು ಕಡೆ ತಮ್ಮ ನಿಯಂತ್ರಣವನ್ನೂ ಮೀರಿ ಅವರಿಗೇ ಅಚ್ಚರಿ ಹುಟ್ಟಿಸುವಂತ ಆಯಾಮಗಳನ್ನು ಪಡೆದು ಕೊಂಡಿವೆ. ತಾನು ಹೇಳಬೇಕಾದುದನ್ನು ಕಥೆಯೊಂದರ ಮೂಲಕ ಕವಿತೆಯಾಗಿ ವಿವರಣೆ ಮೂಲಕ ಸರಳವಾಗಿ ಹೇಳಬೇಕೆಂಬ ತುರ್ತು ಇಲ್ಲಿನ ಲೇಖನಗಳಲ್ಲಿ ಕಂಡು ಬರುತ್ತದೆ.

ಬದುಕನ್ನು ಅದರೊಂದಿಗಿನ ಭೂತಕಾಲದ ಕೊಂಡಿಗಳನ್ನು ಕಳಚಿಕೊಳ್ಳದ ನಿರ್ಲಿಪ್ತ ಪ್ರವಾಸಿಯಂತೆ ನೋಡುವ ಲಂಕೇಶ್, ಅದೇ ಬದುಕನ್ನು ಪರಸ್ಪರ ಅರ್ಥಶೋಧನೆಗೆ ಬಳಸಿಕೊಳ್ಳುತ್ತಾರೆ.

ಸಾವಿರಾರು ವರ್ಷ ಪ್ರಾಚೀನತೆ ಇರುವ ಸಾಹಿತ್ಯ – ವಿಮರ್ಶೆಗೆ ಅನೇಕ ಲೇಖಕರ ಕೊಡುಗೆ ಇದೆ. ಕನ್ನಡ ಸಂಸ್ಕೃತಿಯ ನಿರ್ವಚನ ಆರಂಭದಲ್ಲಿ ಬ್ರಾಹ್ಮಣ ಲೇಖಕರದೇ ಆಗಿತ್ತು. ಸ್ವಾತಂತ್ರ್ಯ ಹಂತದ ಎಡಬಲದಲ್ಲಿ ಶಿಕ್ಷಣಕ್ಕೆ ತೆರೆದುಕೊಂಡ ಶೂದ್ರ ವರ್ಗ, ದೊರೆತ ಶಿಕ್ಷಣ ಹಾಗೂ ಕೌಟುಂಬಿಕ ಸಂಸ್ಕಾರಗಳಿಂದ ಹೊಸ ಆಲೋಚನೆ, ಭಿನ್ನ ಅಭಿವ್ಯಕ್ತ ಸಾಧ್ಯತೆಗಳನ್ನು ದಕ್ಕಿಸಿಕೊಂಡಿತು. ಅಂತ ಮಾದರಿಯಾಗಿ ಲಂಕೇಶರ ಬರಹ – ಅಲ್ಲಿನ ಭಾಷೆ ದಾಖಲಾಗಿದೆ.

ಕುವೆಂಪು ಕನ್ನಡದ ಮಹತ್ವದ ಬ್ರಾಹ್ಮಣೇತರ ಲೇಖಕ. ಅವರ ಆಲೋಚನೆ ವೈದಿಕ ಚಿಂತನೆಗಳಿಂದ ಭಿನ್ನ ಮತ್ತು ಸಾಮಾಜಿಕ, ಧನಾತ್ಮಕ. ಆದರೆ ಅವರ ಭಾಷೆ ವೈದಿಕರಿಂತೆಯೇ ಎನಿಸುವುದು ಬೆರಗು! ಇದಕ್ಕೆ ಕುವೆಂಪು ಅವರ ಜನ್ಮಜಾತ ಪ್ರತಿಭೆ ಕಾರಣ ಅಲ್ಲ; 'ಅವರ ಭಾಷೆಯನ್ನು ಅವರಷ್ಟೇ ಸಮರ್ಥವಾಗಿ ಬಳಸಬಲ್ಲೆ' ಎಂಬ ನಿಲುವು ಇದ್ದಿರಬೇಕು.

ಲಂಕೇಶರಿಗೆ ಸಂಸ್ಕೃತದ ಹಂಗಿಲ್ಲ; ಇಂಗ್ಲೀಷಿನ ಬಂಧನವೂ ಇಲ್ಲ. ಅವರು ಬರೆದಿರುವ ವಿಚಾರ 'ಜಗತ್ತಿಗೆ' ಸಂಬಂಧಿಸಿದವು. ಅವರ ಲೇಖನಗಳಲ್ಲಿ ಎಲ್ಲ ಭಾಷೆಗಳ ಸಾಹಿತ್ಯ – ಸಂಸ್ಕೃತಿ – ವಿಮರ್ಶೆ ಅಡಕಗೊಂಡಿದೆ. ಇವೆಲ್ಲವನ್ನೂ ಅಚ್ಚ ಕನ್ನಡ, ಶೂದ್ರಗನ್ನಡ (ಅನಗತ್ಯ ಕಾಕು, ಪ್ರತ್ಯಯ, ಪುನರಾವರ್ತನೆ, ಮಹಾ ಪ್ರಾಣ ಪ್ರಯೋಗ, ಮತ್ತು ಬಳಸಿ ಹೇಳುವ ವಿಧಾನಕ್ಕೆ ಭಿನ್ನವಾದುದು) ಹೇಳುವ ಮೂಲಕ, ನೇರವಾಗಿ, ಸರಳವಾಗಿ ವಿವರಿಸುವ ಮೂಲಕ 'ಕನ್ನಡ ಭಾಷೆ'ಯ ಹೊಸ ಆಯಾಮ ತೋರಿದ ಲಂಕೇಶ್ 'ವಚನಕಾಲದ ಕನ್ನಡ'ದ ನಂತರ 'ಜನರ ಭಾಷೆ'ಯಾಗಿ ಕನ್ನಡವನ್ನು ಬಳಸಿದ – ಬೆಳೆಸಿದ ಲೇಖಕರಾಗಿದ್ದಾರೆ. ಹಾಗಾಗಿ 'ಭಾಷಿಕ ಸ್ವರೂಪ'ದ ಹಿನ್ನೆಲೆಯಲ್ಲಿ ಲಂಕೇಶರ ಇಡೀ ಸಾಹಿತ್ಯವನ್ನು ಅಧ್ಯಯನ ಮಾಡುವ ಅಗತ್ಯವಿದೆ. ಕನ್ನಡದ 'ದೇಸೀ ಅಭಿವ್ಯಕ್ತಿ' ಎಂದರೆ ಅದು ಲಂಕೇಶರದು ಎನ್ನುವಲ್ಲಿ ಸಂದೇಹವಿಲ್ಲ! 'ಜನರನ್ನು ತಲುಪುವ' ಮಾಧ್ಯಮವಾಗಿ ಲಂಕೇಶರ ಕನ್ನಡ ಭಾಷೆಯನ್ನು ಬಳಸಿರುವುದೇ ಅಂತರ ಅಭಿವ್ಯಕ್ತಿ ವಿಶೇಷವಾಗಿದೆ. ಈ ನೆಲೆಯಲ್ಲಿ ಸಾಹಿತ್ಯ (ವಿಮರ್ಶೆ) ಲೋಕೋಪಯೋಗಿ– ಭಾವೋಪಯೋಗಿ ಎಂಬ ಅಂಶವನ್ನು ಗಮನದಲ್ಲಿಟ್ಟು ಕೊಂಡು ಹೇಳಬಹುದಾದರೆ ಲಂಕೇಶರ ಇಡೀ ಬರಹ ಭಾವೋಪಯೋಗಿ ಅಂಶ ಒಳಗೊಂಡ 'ಲೋಕೋಪಯೋಗಿ' ಅಭಿವ್ಯಕ್ತಿಯಾಗಿದೆ.

4.1. ಆಕರ ಗ್ರಂಥಗಳು

1. ಪಿ. ಲಂಕೇಶ್ – 'ಕಂಡದ್ದು ಕಂಡ ಹಾಗೆ'
ಲಂಕೇಶ್ ಪ್ರಕಾಶನ, ಬೆಂಗಳೂರು
2011

– 'ಪ್ರಸ್ತುತ'
ಪತ್ರಿಕೆ ಪ್ರಕಾಶನ, ಬೆಂಗಳೂರು
2006

– 'ಟೀಕೆ–ಟಿಪ್ಪಣಿ' ಭಾಗ–1
ಪತ್ರಿಕೆ ಪ್ರಕಾಶನ, ಬೆಂಗಳೂರು
2009

– 'ಟೀಕೆ–ಟಿಪ್ಪಣಿ' ಭಾಗ–2
ಪತ್ರಿಕೆ ಪ್ರಕಾಶನ, ಬೆಂಗಳೂರು
2010

– 'ಟೀಕೆ–ಟಿಪ್ಪಣಿ' ಭಾಗ–3
ಪತ್ರಿಕೆ ಪ್ರಕಾಶನ, ಬೆಂಗಳೂರು
2010

– 'ಸಾಹಿತಿ – ಸಾಹಿತ್ಯ – ವಿಮರ್ಶೆ'
ಲಂಕೇಶ್ ಪ್ರಕಾಶನ, ಬೆಂಗಳೂರು
2010

ಪರಾಮರ್ಶನ ಗ್ರಂಥಗಳು

1. ವಿ.ಕೃ. ಗೋಕಾಕ (ಸಂ) : 'ವಿಮರ್ಶಾ ತತ್ವಗಳು ಮತ್ತು
ಆರ್. ಈ. ಕುಲಕರ್ಣಿ (ಸಂ) : ಪ್ರಾಯೋಗಿಕ ವಿಮರ್ಶೆ'
ಐಬಿಹೆಚ್ ಪ್ರಕಾಶನ, ಬೆಂಗಳೂರು
2009

2. ಎಚ್. ದಂಡಪ್ಪ (ಸಂ) : 'ಸುವರ್ಣ ಸಾಹಿತ್ಯ ವಿಮರ್ಶೆ'
ಬಿ.ಎನ್. ಸುಮಿತ್ರಾಬಾಯಿ 2006

3. ಚಂದ್ರಶೇಖರ ಪಾಟೀಲ (ಸಂ) : 'ಸಂಕ್ರಮಣ ಸಾಹಿತ್ಯ'
ಸಂಕ್ರಮಣ ಪ್ರಕಾಶನ,
ಧಾರವಾಡ 1998

4. ಡಾ. ಎಸ್. ಪ್ರಸಾದಸ್ವಾಮಿ : 'ಪರಂಪರೆ ಮತ್ತು ವಿಕ್ಷಿಪ್ತತೆ'
ಕಣ್ವ ಪ್ರಕಾಶನ, ಬೆಂಗಳೂರು
2010
: 'ಸಣ್ಣಕತೆ' : ಸ್ವರೂಪ – ವಿನ್ಯಾಸ
ಕಣ್ವ ಪ್ರಕಾಶನ, ಬೆಂಗಳೂರು
2011
: 'ರಂಗ ರಾವಣ'
ಅವಿರತ ಪ್ರಕಾಶನ, ಬೆಂಗಳೂರು
2009.

5. ಡಾ. ಜಿ. ಆರ್. ತಿಪ್ಪೇಸ್ವಾಮಿ : 'ಸಾಹಿತ್ಯ ಮತ್ತು ಕ್ರಿಯಾಶೀಲತೆ'
ವಿದ್ಯಾಪ್ರಕಾಶನ, ಬೆಂಗಳೂರು
2009.

6. ಡಾ. ಎಸ್. ವಿದ್ಯಾಶಂಕರ (ಸಂ) : 'ಸಹೃದಯ–ಸಂವಾದ'
ಡಾ. ಜಿ. ಎಂ. ಹೆಗಡೆ (ಸಂ) ಪ್ರಿಯದರ್ಶಿನಿ ಪ್ರಕಾಶನ,
ಬೆಂಗಳೂರು 2005

7. ಎಚ್. ಟಿ. ಕೃಷ್ಣಮೂರ್ತಿ (ಸಂ) : 'ಆಧುನಿಕ ಕನ್ನಡ ವಿಮರ್ಶೆ'
ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ
ಕಾಲೇಜು, ಶಿವಮೊಗ್ಗ, 2007

8. ಎಚ್. ಶಶಿಕಲಾ : 'ಏಕ – ಅನೇಕ'
ಸಿವಿಜಿ ಪಬ್ಲಿಕೇಶನ್,
ಬೆಂಗಳೂರು.

9. ಸಿ.ಎನ್. ರಾಮಚಂದ್ರನ್ : 'ಪರಂಪರೆ – ಪ್ರತಿರೋಧ'
ಸಂವಾದ, ಮಲ್ಲಾಡಿಹಳ್ಳಿ
2005.

10. ಕೆ.ಎಸ್. ನಿಸಾರ್ ಅಹಮದ್ (ಸಂ) : 'ದಶವಾರ್ಷಿಕ ವಿಮರ್ಶೆಗಳು'
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು, 1986.

11. ಮಿರ್ಜಿ ಅಣ್ಣಾರಾಯ : 'ವಿಮರ್ಶೆಯ ಸ್ವರೂಪ'
ಸಾಹಿತ್ಯ ಭಂಡಾರ ಹುಬ್ಬಳ್ಳಿ
1959.

12. ಜಿ. ಎಸ್. ಶಿವರುದ್ರಪ್ಪ : 'ವಿಮರ್ಶೆಯ ಪೂರ್ವ – ಪಶ್ಚಿಮ'
ಶಾರದಾ ಪ್ರಕಾಶನ, 1990.

13. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ : 'ವಿಮರ್ಶೆ'
ಬೆಂಗಳೂರು ಪ್ರೆಸ್, 1999.

14. ಸುಮತೀಂದ್ರ ನಾಡಿಗ : 'ವಿಮರ್ಶೆಯ ದಾರಿಯಲ್ಲಿ'
ಕರ್ನಾಟಕ ಬುಕ್ ಏಜೆನ್ಸಿ, 1997.

15. ಡಾ. ರಂ. ಶ್ರೀ. ಮುಗಳಿ : 'ವಿಮರ್ಶೆಯ ವ್ರತ'
ಉಷಾ ಸಾಹಿತ್ಯ ಮಾಲೆ, 1970.

16. ಮಾಸ್ತಿಯವರ ಪುಸ್ತಕಗಳು : ಜೀವನ ಕಾರ್ಯಾಲಯ
1954

17. ಡಾ. ಗೀತಾ ಪ್ರಸಾದ್ : ಅಸ್ಮಿತೆ
ಕಣ್ವ ಪಬ್ಲಿಕೇಷನ್ಸ್, ಬೆಂಗಳೂರು, 2011

18. ಡಾ. ಗೀತಾ ಪ್ರಸಾದ್ : 'ಜೀವನದಿ'
ಧಾತ್ರಿ ಪುಸ್ತಕ ಬೆಂಗಳೂರು 2009
'ಆಧುನಿಕ ಮಹಿಳಾ ಅಭಿವ್ಯಕ್ತಿ'
ಧಾತ್ರಿ ಪುಸ್ತಕ ಬೆಂಗಳೂರು 2009

19. ವಿ. ಎಂ. ಇನಾಂದಾರ್ : 'ಪಾಶ್ಚಾತ್ಯ ವಿಮರ್ಶೆಯ
ಸಂಪ್ರದಾಯ ಯುಗ'
ಪ್ರಸಾರಾಂಗ, ಬೆಂಗಳೂರು
ವಿಶ್ವ ವಿದ್ಯಾಲಯ.

20. ಎಚ್. ಎಸ್. ರಾಘವೇಂದ್ರರಾವ್ : 'ನಮಸ್ಕಾರ'
ಅಭಿನವ ಪ್ರಕಾಶನ, ಬೆಂಗಳೂರು
2008.

21. ಟಿ.ಪಿ. ಅಶೋಕ : 'ಪುಸ್ತಕ ಪ್ರೀತಿ'
ಅಕ್ಷರ ಪ್ರಕಾಶನ, ಹೆಗ್ಗೋಡು, 1993

22. ಓ. ಎಲ್. ನಾಗಭೂಷಣ ಸ್ವಾಮಿ : 'ವಿಮರ್ಶೆಯ ಪರಿಭಾಷೆ'

23. ಡಾ. ಎಸ್. ಎಂ. ಹಿರೇಮಠ : 'ಕನ್ನಡ ಸಾಹಿತ್ಯ ಮೀಮಾಂಸೆ'
ಅಶ್ವಿನಿ ಪ್ರಕಾಶನ, ಕಲಬುರ್ಗಿ.
1999

24. ಸಿ.ಪಿ. ಕೃಷ್ಣ ಕುಮಾರ್ : 'ಸಾಹಿತ್ಯ ವಿಮರ್ಶೆಯ ತತ್ವಗಳು"
(ಅನುವಾದ)

25. – 'ಸಾಹಿತ್ಯ ವಿಮರ್ಶೆ'
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು – 1991

26. – 'ದಶವಾರ್ಷಿಕ ಸಾಹಿತ್ಯ ಸಮೀಕ್ಷೆ'
ಬೆಂಗಳೂರು ವಿಶ್ವವಿದ್ಯಾಲಯ.